ಐಕ್ಯರಂಗ

ಸಂಪುಟ 19 ಸಂಚಿಕೆ 24

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಜೂನ್ 9-15, 1997

ಬೆಲೆ ರೂ. 2.00



ರಾಜ್ಯದಲ್ಲಿ ಜನತಾದಳಕ್ಕೆ ಎಚ್ಚರಿಕೆ ಗಂಟೆ

ಮೊಳಕಾಲ್ಮೂರು ಚುನಾವಣೆಯ ಫಲಿತಾಂಶ

ಉಪ-ಚುನಾವಣೆಗಳು ಆಳುವ ಪಕ್ಷಗಳ ಮೇಲೆ ಪರಿಣಾಮ ಬೀರುವುದಿಲ್ಲ, ಉಪಚುನಾವಣೆಗಳ ಫಲಿತಾಂಶ ಜನಮತ ಗಣನೆ ಎಂದು ಪರಿಗಣಿಸಲಾಗದು ಎಂದು ಹೇಳುವುದರಲ್ಲೇನೂ ತಪ್ಪಿಲ್ಲೆಂಬ ಮಾತು ನಿಜ. ಆದರೆ ಮೊನ್ನೆ ನಡೆದ ಮೊಳಕಾಲ್ಮೂರು ಉಪ ಚುನಾವಣೆಯ ಫಲಿತಾಂಶ ಮಾತ್ರ ಮೇಲಿನ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಕಳೆದ ಮೂರ್‍ನಾಲ್ಕು ತಿಂಗಳಲ್ಲಿ ರಾಜ್ಯದಲ್ಲಿ ನಡೆದ ಮೂರು ಅಸೆಂಬ್ಲಿ ಉಪ ಚುನಾವಣೆಗಳು, ಎಪಿಎಂಸಿ ಮತ್ತು ಮಂಗಳೂರು ಮಹಾನಗರಸಭೆ ಚುನಾವಣೆಗಳ ವಿಮರ್ಶೆಯನ್ನು ಪಾರದರ್ಶಕವಾಗಿ ನಡೆಸಿದ್ದಾದರೆ ಈ ಚುನಾವಣೆಗಳು ಆಳುವ ಪಕ್ಷ - ಜನತಾದಳದ ಮೇಲೆ ಗಂಭೀರ ಪರಿಣಾಮ ಉಂಟುಮಾಡಿವೆ. ಎಚ್ಚರಿಕೆಯ ಗಂಟೆ ಬಾರಿಸಿವೆ. ಜನತಾದಳದ ಮುಖಂಡತ್ವ ಈ ಎಚ್ಚರಿಕೆಯ ಗಂಟೆಯಿಂದ ಎಚ್ಚೆತ್ತುಕೊಳ್ಳದಿದ್ದರೆ ತನ್ನ ಮೊಣಕಾಲನ್ನು ಮುರಿದುಕೊಂಡು ಕುಂಟುತ್ತ ನಡೆಯುವಂಥ ಪರಿಸ್ಥಿತಿ ಉಂಟಾಗ ಬಹುದಾಗಿದೆ. ಆದರಿಂದಾಗಿ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗೆ ದೊಡ್ಡ ಪೆಟ್ಟು ಬಿದ್ದಂತಾಗಿ ಈ ಶಕ್ತಿಗಳೆಲ್ಲ ಸೇರಿ ಸಂಯುಕ್ತ ರಂಗ ರಚನೆ ಮಾಡಿ ಕೇಂದ್ರದಲ್ಲಿ ಸಂಯುಕ್ತ ರಂಗ ಸರಕಾರ ನಡೆಸುವುದಕ್ಕೂ ತೀವ್ರ ಅಪಾಯವನ್ನುಂಟು ಮಾಡಬಹುದಾಗಿದೆ. ಕರ್ನಾಟಕ, ಬಿಹಾರ ಮತ್ತು ಸ್ವಲ್ಪ ಮಟ್ಟಿಗೆ ಒರಿಸ್ಸಾದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದ್ದ ಜನತಾದಳಕ್ಕೆ ಈ ಉಪ ಚುನಾವಣೆಗಳ ಫಲಿತಾಂಶ ಅಪಾಯ ತಂದೊಡ್ಡಬಹುದಾಗಿದೆ.

ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಹಿಂದೆ ಸರಿಸಿ ಕೇಂದ್ರದಲ್ಲಿ ಸಂಯುಕ್ತರಂಗದ ಸರಕಾರವನ್ನು ರಚಿಸಿದ ನಂತರವಾದರೂ ರಾಜ್ಯದ ಜನತಾದಳ ಮುಖಂಡತ್ವಕ್ಕೆ ಹಾಗೆಯೇ ಜೆ.ಎಚ್.ಪಟೇಲರ ಮಂತ್ರಿ ಮಂಡಲಕ್ಕೆ ಹೊಸ ವಿವೇಚನೆ ಬರುವ ಅಗತ್ಯವಿತ್ತು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ತಮ್ಮ ಪಕ್ಷ ಮತ್ತು ಸರಕಾರವನ್ನು ಜನಪ್ರಿಯಗೊಳಿಸುವ, ಆಡಳಿತೆಯನ್ನು ದಕ್ಷಗೊಳಿಸುವ, ದೈನಂದಿನ ಹಾಗೆಯೇ ಚುನಾವಣೆ ಮತ್ತಿತ್ಸಿತರ ಕಾರ್ಯಗಳಲ್ಲಿ ಎಡ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಡ ಜಾತ್ಯಾತೀತ ಶಕ್ತಿಗಳ ಬಲಸಂವರ್ಧನೆಗೆ ಹೆಚ್ಚು ಗಮನ ಕೊಡಬೇಕಾಗಿತ್ತು. ಆದರೆ ಜನತಾದಳವಾಗಲೀ ಸರಕಾರವಾಗಲೀ ಎಲ್ಲಾ ಜವಾಬ್ದಾರಿಗಳನ್ನು ಕಡೆಗಣಿಸಿ ಸ್ಥಿತಪ್ರಜ್ಞನಂತೆ ಜನರಿಗೂ, ಸರಕಾರಕ್ಕೂ ಏನೂ ಸಂಬಂಧವೇ ಇಲ್ಲದ ರೀತಿಯಲ್ಲಿ ವರ್ತಿಸಿರುವುದು ಎಲ್ಲ ಕ್ಷೇತ್ರಗಳಲ್ಲಿ ಪರಾಜಯಗೊಳ್ಳುವಂತಾಗಿದೆ.

ಎನ್.ಕೆ.ಉಪಾಧ್ಯಾಯ

ಜನತಾದಳದ ಎರಡು ವರ್ಷಗಳ ಸಾಧನೆ, ಜೆ.ಎಚ್.ಪಟೇಲ್ ಸರಕಾರದ ಒಂದು ವರ್ಷದ ಸಾಧನೆ ಉಪ ಚುನಾವಣೆ, ಎಪಿಎಂಸಿ ಮತ್ತು ಮಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳ ಸೋಲಿನಲ್ಲಿ ಪರ್ಯಾವಸಾನಗೊಂಡಿದೆ. ಕುಡಿಯುವ ನೀರು, ವಿದ್ಯುತ್, ಕಾನೂನು ವ್ಯವಸ್ಥೆ, ನೀರಾವರಿ, ಆಡಳಿತೆ ಮೊದಲಾದ ಸಮಸ್ಯೆಗಳಿಗೆ ಪರಿಹಾರ ಕಾಣಲಾರದಾದಾಗ ಆಡಳಿತೆ ದಿನೇದಿನೇ ಕುಸಿಯುತ್ತಿರುವಾಗ, ಕಾರ್ಖಾನೆಗಳು ಮುಚ್ಚಲ್ಪಡುತ್ತಿರುವಾಗ, ಖಾಸಗೀಕರಣಗೊಳಿಸಲ್ಪಟ್ಟು ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿರುವಾಗ, ಮಂತ್ರಿಗಳು ಆಡಳಿತೆಯ ಸಂಪರ್ಕವನ್ನೇ ಕಳೆದುಕೊಂಡು ನಿರ್ಲಿಪ್ತಾವಸ್ಥೆಯಲ್ಲಿರುವಾಗ ಮತದಾರರು ಅಂಥ ವ್ಯವಸ್ಥೆಯನ್ನು ಸೋಲಿಸುತ್ತಾರೆಂದರೆ ಚಿಂತೆ ಮಾಡಬೇಕಾಗಿಲ್ಲ. ಮೊಳಕಾಲ್ಮೂರು ಚುನಾವಣೆಯಲ್ಲಿ ಮುಖಭಂಗವಾದ ನಂತರ ದಳ ಮುಖಂಡರು ಒಂದೆಡೆ ಸೇರಿ ತಮ್ಮನ್ನು ಕಠಿಣ ಆತ್ಮವಿಮರ್ಶೆಗೊಳಪಡಿಸಿ ಕೊಂಡಿರುವುದು ಸ್ವಾಗತಾರ್ಹ. ಬಡತನದ ಕಾವನ್ನು ಕಡಿಮೆ ಮಾಡಬಲ್ಲ, ತತ್‌ಕ್ಷಣ ಜನರಿಗೆ ನೆರವು ನೀಡಬಲ್ಲ ಕೆಲವಾರು ಜನಪರ ಕಾರ್ಯಕ್ರಮಗಳನ್ನು ಆಯ್ದು 'ಜನತಾ ಜನಪರ ಆರ್ಥಿಕ ಕಾರ್ಯಕ್ರಮ' ರೂಢಿಸಿಕೊಂಡು ಪಕ್ಷದ ನೆರವಿನೊಂದಿಗೆ ಅದನ್ನು ಸಮರ್ಥವಾಗಿ ಕಾರ್ಯಗತಗೊಳಿಸಲು ಸರಕಾರ ತಡಮಾಡದೆ ಕಾರ್ಯ ಪ್ರವೃತ್ತರಾಗಬೇಕೆಂಬ ಒಂದು ನಿರ್ಣಯವನ್ನು ಜನತಾ ದಳದ ನೂತನ ಕಾರ್ಯಕಾರಿ ಸಮಿತಿ ಕೈಗೊಂಡಿದೆ. ಸೋಲಿನ ಮೇಲೆ ಸೋಲನ್ನು ಕಾಣುತ್ತಿರುವ ಜನತಾದಳ, ಆಂತರಿಕ ಗುಂಪುಗಾರಿಕೆಗಳನ್ನು ತೊಡೆದು ಹಾಕಿ ಐಕ್ಯತೆಯಿಂದ ಸಮಸ್ಯೆಗಳನ್ನೆದುರಿಸಲು ನಿರಾಕರಿಸುತ್ತಿರುವ ಜನತಾದಳ ಜನಪರ ಆರ್ಥಿಕ ಕಾರ್ಯಕ್ರಮಗಳ ಹೆಸರಿನಲ್ಲಿ ಕಣ್ಣೊರೆಸುವ ಕೃತ್ಯದಲ್ಲಿ ತೊಡಗಿದಂತೆ ಕಂಡುಬರುತ್ತದೆ. ಎರಡು ವರ್ಷಗಳ ಆಡಳಿತೆಯಿಂದಾಗಿ ಜನರಲ್ಲಿ ಅಸಂತೋಷದ ಕೆಂಡ ಕಾರುತ್ತಿರುವಾಗ ಅದಕ್ಕೆ ಸಮರ್ಪಕವಾದ ದಕ್ಷ ಆಡಳಿತೆ ನೀಡುವುದು ಜೆ.ಎಚ್.ಪಟೇಲ್ ಸರಕಾರದ ಆದ್ಯ ಕರ್ತವ್ಯ. ಆಡಳಿತ ಜನಪರವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಮಾಡಿ ಅವುಗಳನ್ನು ಯಶಸ್ವಿಗೊಳಿಸುವುದು ಜನತಾದಳ ಪಕ್ಷದ ಜವಾಬ್ದಾರಿ. ಚುನಾವಣೆಗಳ ಕಹಿ ಸೋಲಿನಿಂದ ಪಾಠ ಕಲಿತು, ಜನಪ್ರಿಯತೆ ಗಳಿಸಿ, ರಾಜ್ಯದಲ್ಲಿ ಜನತಾದಳವನ್ನು, ಎಡಪಕ್ಷಗಳನ್ನು ಬಲಿಷ್ಠಗೊಳಿಸಿ ದೇಶದಲ್ಲಿ ಸಂಯುಕ್ತ ರಂಗ ಸರಕಾರ ಐದು ವರ್ಷಗಳ ತನ್ನ ಜವಾಬ್ದಾರಿಯನ್ನು ನಿ[illegible]ಸುವಂತೆ ಸಹಕರಿಸುತ್ತಾರೆಂದು [illegible] ಆಶಿಸಿದರೆ ತಪ್ಪಾಗಲಾರದೆಂದು ಭ[illegible]ವೆ.

"ಕೆಳ ನ್ಯಾಯಾಲಯಗಳು ದೋಷಮುಕ್ತರೆಂದರೇನು? ಜನತೆಯ ಕಣ್ಣಲ್ಲಿ ದೋಷಮುಕ್ತರಾಗಬೇಡವೇ?"

ಉನ್ನತ ಸ್ಥಾನಗಳಲ್ಲಿರುವ ಕೆಲವು ರಾಜಕೀಯ ನಾಯಕರುಗಳೇ ಪ್ರಜಾಪ್ರಭುತ್ವ ನಾಶಕ್ಕೆ ಕಾರಣವಾಗುತ್ತಿದ್ದಾರೆ. ಜನತೆಯ ಪ್ರಬಲ ಆಂದೋಲನವೊಂದೇ ಪ್ರಸಕ್ತ ಬಿಕ್ಕಟ್ಟಿನಿಂದ ಪಾರಾಗಲು ಇರುವ ಮಾರ್ಗ. ಹವಾಲಾ, ಸೆಂಟ್ ಕೀಟ್ಸ್ ಮುಂತಾದ ಹಗರಣಗಳಲ್ಲಿ ಆರೋಪಿಗಳು ಕೆಳ ನ್ಯಾಯಾಲಯ ದೋಷಮುಕ್ತವೆಂದು ಘೋಷಿಸಿರುವುದಾಗಿ ಬೀಗಬಹುದು. ಆದರೆ ಜನತೆಯ ಕಣ್ಣಲ್ಲಿ ದೋಷಮುಕ್ತರಾಗಲು ಅಸಾಧ್ಯವೆಂದು ಭಾರತ ಪ್ರಜಾಸತಾತ್ತ್ಮಕ ಯುವಜನ ಫೆಡರೇಶನ್(ಡಿವೈಎಫ್ಐ)ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ, ಸಂಸತ್ ಸದಸ್ಯರಾದ ಮಹಮ್ಮದ್ ಸಲೀಂ ರವರು ಅಭಿಪ್ರಾಯ ಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ನಡೆದ 'ಸ್ವತಂತ್ರ ಭಾರತದ 50 ವರ್ಷಗಳು' ಆಚರಣೆಯ ಹಿನ್ನೆಲೆಯಲ್ಲಿ ಯುವಜನ ಆಂದೋಲನ ಕುರಿತ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಸೆನೆಟ್‌ಹಾಲ್‌ನಲ್ಲಿ ವಿವಿಧ ಜಿಲ್ಲೆಗಳ ಯುವ ಪ್ರತಿನಿಧಿಗಳು ಹಾಜರಿದ್ದರು.

ದೇಶದ ಸ್ಥಿತಿ ಏನು?

ದೇಶದ ವ್ಯಾಪಕ ಭ್ರಷ್ಟಾಚಾರ, ಕೋಮುವಾದ, ಜಾತೀಯತೆ, ಕ್ರಿಮಿನಲ್ ಚಟುವಟಿಕೆಯ ಅಂಶಗಳು ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯದ ನಾಶಕ್ಕೆ ಕಾರಣವಾಗುತ್ತಿವೆ. ಇತ್ತೀಚಿಗೆ ನಡೆಯುತ್ತಿರುವ ಕಾಂಗ್ರೆಸ್ - ಜನತಾದಳ ಪಕ್ಷಗಳ ಅಧ್ಯಕ್ಷರ ಆಯ್ಕೆಯಲ್ಲಿ ಆ ಪಕ್ಷಗಳೊಳಗೆ ಆಂತರಿಕ ಪ್ರಜಾಪ್ರಭುತ್ವ ನಶಿಸಿ ಹೋಗುತ್ತಿರುವುದನ್ನು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಕಾಂಗ್ರೆಸ್ ಪಕ್ಷದ ಸಂವಿಧಾನದಲ್ಲಿ 2 ವರ್ಷಕ್ಕೊಮ್ಮೆ ಅಧ್ಯಕ್ಷರ ಚುನಾವಣೆ ನಡೆಯಬೇಕೆಂದಿದೆ. ಇವ್ಯಾವು ಪ್ರಜಾಪ್ರಭುತ್ವ ರೀತಿಯಲ್ಲಿ ಆ ಪಕ್ಷದೊಳಗೆ ನಡೆಯುತ್ತಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳ ಅಧಃಪತನವಾಗುತ್ತಿದೆ. ದೇಶ ಕವಲು ದಾರಿಯಲ್ಲಿದೆ. ಭವಿಷ್ಯದ ಹಾದಿ ಏನೆಂಬುದನ್ನು ನಿರ್ಧರಿಸಲೇ ಬೇಕಾಗಿದೆ. ನಾವು ಹತಾಶರಾಗಬೇಕಿಲ್ಲ. ಇದಕ್ಕಾಗಿ ಬಲಿಷ್ಠ ಹೋರಾಟ ನಡೆಸಲು ಸಿದ್ಧರಾಗಬೇಕು ಎಂದರು.


ಸಂಯುಕ್ತ ರಂಗ ಸರಕಾರ ಒಂದು ಹೊಸಪ್ರಯೋಗ

ಇತ್ತೀಚಿನ ಚುನಾವಣೆಗಳಲ್ಲಿ ಜನತೆಯ ತೀರ್ಪಿನ ಹಿನ್ನೆಲೆಯಲ್ಲಿ ಸಂಯುಕ್ತ ರಂಗ ಸರಕಾರದ ರಚನೆ ಒಂದು ಹೊಸ ಪ್ರಯೋಗ. ಬಹಳ ಕಷ್ಟದ ಸ್ಥಿತಿಯಲ್ಲಿ ಒಂದುಗೂಡಿ ಧರ್ಮನಿರಪೇಕ್ಷತೆಯನ್ನು ಬಯಸುವ ಪಕ್ಷಗಳು ಒಂದುಗೂಡಿ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ದ ಆಧಾರದಲ್ಲಿ ಸರಕಾರ ನಡೆಸುತ್ತಿವೆ.

ಈ ಸರಕಾರದಲ್ಲಿ ಒಳ್ಳೆಯದು ಇದೆ, ಕೆಟ್ಟದ್ದು ಇದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ, ಸಹಾಯಧನ ನೀಡಿಕೆ, ಎಲ್ಲ ಮಹಿಳೆಯರಿಗೂ, ಯುವಜನರಿಗೂ ಉದ್ಯೋಗ, ಈ ವಿಷಯದಲ್ಲಿ ಸ್ವಲ್ಪ ಸುಧಾರಿಸಿದೆ. ಆದರೆ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸುವುದೇ ಚಿದಂಬರಂರವರ ನೀತಿಯಾಗಿದೆ. ಪೆಟ್ರೋಲಿಯಂ ಬೆಲೆ ಏರಿಕೆ ಸಂದರ್ಭದಲ್ಲಿ ಎಡ ಪಕ್ಷಗಳು ಪರ್ಯಾಯ ಅಂಶಗಳನ್ನು ಸ್ಪಷ್ಟವಾಗಿ ಮಂಡಿಸಿದ್ದರೂ ಇವುಗಳಿಗೆ ಮನ್ನಣೆ ನೀಡುತ್ತಿಲ್ಲ. ಇಂತಹ ಸ್ಥಿತಿಯ ವಿರುದ್ಧ ಎಡ ಪಕ್ಷಗಳು ಪಾರ್ಲಿಮೆಂಟಿನಲ್ಲಿ ಹೋರಾಟ ನಡೆಸುತ್ತಿವೆ. ಇದು ಸಾಲದು, ದೇಶದ ಜನತೆಯ ಹೋರಾಟ ಬಲಿಷ್ಠವಾಗಬೇಕು. ಈ ನಿಟ್ಟಿನಲ್ಲಿ 'ಸಾಮೂಹಿಕ ಸಂಘಟನೆಗಳ ವೇದಿಕೆ' ಈಗಾಗಲೇ ಹಲವು ಅಂತಹ ಹೋರಾಟಗಳನ್ನು ನಡೆಸುತ್ತಿದೆ. ಯುವಜನರು ವಿಶಾಲವಾದ ಹೋರಾಟಗಳನ್ನು ನಡೆಸಬೇಕೆಂದು ಅವರು ತಿಳಿಸಿದರು.

ಯುವಜನರು ಇಂದು ಜಾತಿವಾದಿ ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕಿದೆ. ತಮಿಳುನಾಡಿನಲ್ಲಿ ಒಂದು ಶಾಲೆಗೆ ಸ್ವಾತಂತ್ರ್ಯ ಯೋಧರ ಹೆಸರಿಡುವುದನ್ನು ವಿರೋಧಿಸಿ ಜಾತಿವಾದಿ ನಾಯಕನ ಹೆಸರಿಡಲು ಹೋರಾಟ ನಡೆಸುತ್ತಿದ್ದಾರೆ. ಇದು ಅಪಾಯಕಾರಿ ವಿಷಯ. ಕರ್ನಾಟಕದಲ್ಲೂ ಇಂತಹ ಜಾತಿವಾದಿ ಹೋರಾಟಗಳು ನಡೆಯುತ್ತಿವೆ. ಕೋಮುವಾದಿಗಳು ಡಿವೈಎಫ್‌ಐ ನ ಮುಖಂಡ ಭಾಸ್ಕರ್ ಕುಂಬ್ಳೆಯವರನ್ನು ಕೊಲೆ ಮಾಡಿದ್ದಾರೆ. ನಮ್ಮ ಕಾರ್ಯಕರ್ತರ ಮೇಲೆ ತೀವ್ರ

ಪುಟ 2 ನೋಡಿ



ರಾಷ್ಟ್ರೀಯ ಪ್ರಚಾರಾಂದೋಲನ

ಜುಲೈ 15-31, 1997

1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು ಕಳಚಿಹಾಕುವುದನ್ನು ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
4. ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇಡುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು [illegible]ಬೇಕು.
7. [illegible] ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ [illegible]ವನ್ನು ಅಂಗೀಕರಿಸಬೇಕು.

ಈ ಪರಿಯ ಕಾಂಗ್ರೆ-ದಳ ಸಾಂಸ್ಥಿಕ ಚುನಾವಣೆಗಳು!

ಎನ್.ಕೆ.ಉಪಾಧ್ಯಾಯ

ಚುನಾವಣಾ ಆಯೋಗದ ಕಟ್ಟಪ್ಪಣೆಗೆ ಹೆದರಿ ನಿಗದಿತ ಅವಧಿಯಲ್ಲಿ ತಂತಮ್ಮ ಸಾಂಸ್ಥಿಕ ಚುನಾವಣೆಗಳನ್ನು ನಡೆಸಲು ಹೊರಟಿರುವ ಕಾಂಗ್ರೆ ಮತ್ತು ಜನತಾದಳದವರ ಪ್ರಯತ್ನ ಬರೇ ತೋರಿಕೆಯ ಹಾಸ್ಯಾಸ್ಪದ ಪ್ರಹಸನ ವಾಗಿದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಿಶ್ಲೇಷಿಸಿದೆ. ಇದು ನಿಜವಾಗಿ ದೆಂಬುದನ್ನು ಕಾಂಗ್ರೆಸ್ ಮತ್ತು ದಳದ ಮುಖಂಡರು ಸಧ್ಯ ನಡೆದಿರುವ ತಂತಮ್ಮ ಪಕ್ಷಗಳ ಸಾಂಸ್ಥಿಕ ಚುನಾವಣೆಗಳ ಮೂಲಕ ಎತ್ತಿ ತೋರಿಸಿದ್ದಾರೆ.

ಬೆಟ್ಟದ ತುದಿಯಿಂದ 'ಪ್ರಜಾಪ್ರಭುತ್ವ', 'ಪ್ರಜಾಪ್ರಭುತ್ವ' ಎಂದು ಘಂಟಾಘೋಷವಾಗಿ ಕೂಗುತ್ತಿರುವ ಕಾಂಗ್ರೆಸ್ ಪಕ್ಷ ಪ್ರಾರಂಭದಿಂದಲೂ ಏಕವ್ಯಕ್ತಿ ಸರ್ವಾಧಿಕಾರವನ್ನೇ ಅನುಸರಿಸುತ್ತಾ ಬಂದಿದೆ. ಯಾವಾಗಾದರೊಮ್ಮೆ ಚುನಾವಣೆ ಪ್ರಹಸನ ಮಾಡಿ ಅದರ ಮೂಲಕ ಕಾರ್ಯಕಾರಿ ಸಮಿತಿ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿ (ಎಐಸಿಸಿ)ಯನ್ನು ಆಯ್ಕೆಮಾಡಲಾಯಿತೆಂದು ಸಾರಿ ಅನಂತರದ ದಿವಸಗಳಲ್ಲಿ ತಮಗೆ ಬೇಡಾದವರನ್ನು ಕೈ ಬಿಟ್ಟು ತಮಗೆ ಬೇಕಾದವರನ್ನು ಆಯಾ ಸಮಿತಿಗಳಿಗೆ(ಚುನಾವಣಾ ಸಮಿತಿಯನ್ನೊಳಗೊಂಡು) ಸೇರಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿಕೊಂಡಿದ್ದ ಕಾಂಗ್ರೆಸ್ ಮುಖಂಡರಿಗೆ ಚುನಾವಣಾ ಆಯೋಗ ಈ ಸಲ 'ಶಾಕ್ ಟ್ರೀಟ್‌ಮೆಂಟ್' ನೀಡಬೇಕಾಗಿ ಬಂದಿರುವ ಪ್ರಸಂಗ ಈ ಪಕ್ಷದಲ್ಲಿ ಅಡಗಿರುವ ಒಳಜಗಳ, ಗುಂಪುಗಾರಿಕೆ, ಅಧಿಕಾರದಾಹದ ಮೇಲೆ ಬೆಳಕು ಚೆಲ್ಲುವಂತೆ ಮಾಡಿದೆ. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಧಾನ ಪಾತ್ರಧಾರಿಗಳಾಗಿದ್ದ, ಕಳೆದ ಐವತ್ತು ವರ್ಷಗಳಿಂದ ಆಡಳಿತ ನಡೆಸುತ್ತಿದ್ದ ಕಾಲಾವಧಿಯಲ್ಲಿ ಭಾರತದಲ್ಲಿ ಸಂಸ್ಥಾನಗಳ ವಿಲೀನೀಕರಣ, ಬ್ಯಾಂಕ್, ಜೀವವಿಮೆಗಳ ರಾಷ್ಟ್ರೀಕರಣಗಳಂತ ಪುರೋಗಾಮಿ ಕ್ರಮಗಳನ್ನು ಕೈಗೊಂಡಿದ್ದ ಕಾಂಗ್ರೆಸ್ ತಮ್ಮ ಪಕ್ಷದ ಸಾಂಸ್ಥಿಕ ಚುನಾವಣೆ ನಡೆಸಲು ಹಾಕುತ್ತಿರುವುದು ಕಾಂಗ್ರೆಸ್ ಪಕ್ಷದೊಳಗಿನ ಅಧಿಕಾರ ದಾಹದ ಪ್ರಮಾಣವನ್ನು ಪ್ರದರ್ಶಿಸುತ್ತದೆ. ಚುನಾವಣೆಯಲ್ಲಿ ಮಾನ್ಯತೆ ಪಡೆಯಬೇಕಾದರೆ ಪಕ್ಷದ ಸಂವಿಧಾನಕ್ಕನುಸರಿಸಿ ಸಾಂಸ್ಥಿಕ ಚುನಾವಣೆ ನಡೆಸಲೇಬೇಕೆಂಬ ಗಡುವು ನೀಡಿರುವುದು ಹಾಗೆಯೇ ಕಾಂಗ್ರೆಸ್ ಮುಖಂಡರು ಚುನಾವಣಾ ಆಯೋಗದ ಆದೇಶಗಳನ್ನು ಪಾಲಿಸಲು ನಿರಾಕರಿಸಿದಾಗ ಜೂನ್ 15 ರ ಒಳಗೆ ತಮ್ಮ ಸಾಂಸ್ಥಿಕ ಚುನಾವಣೆಯನ್ನು ಮುಕ್ತಾಯಗೊಳಿಸದಿದ್ದರೆ, ಮುಂಬರುವ ಚುನಾವಣೆಯಲ್ಲಿ ಪಕ್ಷಕ್ಕೆ ನೀಡಿದ್ದ ಮಾನ್ಯತೆಯನ್ನೇ ರದ್ದುಪಡಿಸುವ ಬೆದರಿಕೆ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ನುಂಗಲಾರದ ತುತ್ತಾಗಿ ಈಗ ಚುನಾವಣೆಯ ಪ್ರಹಸನ ನಡೆದಿದೆ. ಈ ಚುನಾವಣೆಯಿಂದಾಗಿ ಕಾಂಗ್ರೆಸ್ ಪಕ್ಷದೊಳಗೆ ಆಂತರಿಕ ಪ್ರಜಾಪ್ರಭುತ್ವ ಮೂಡಿ ಬಂದು ದೇಶದ ರಾಜಕೀಯಕ್ಕೆ ಹೊಸ ತಿರುವನ್ನುಂಟು ಮಾಡಲು ಸಹಾಯವಾಗಬಹುದೆಂದು ನಿರೀಕ್ಷಿಸಬಹುದೇ?

ಪಂಡಿತ ಜವಾಹರಲಾಲರ ಕಾಲದಲ್ಲಿ ಕಾಂಗ್ರೆಸ್ ಪಕ್ಷದೊಳಗೆ ಪ್ರಜಾಪ್ರಭುತ್ವ ಎಂಬುದಕ್ಕೆ ಸ್ವಲ್ಪ ಮರ್ಯಾದೆ ಇತ್ತಾದರೂ ಇಂದಿರಾ ಗಾಂಧಿಯವರ ಕಾಲದಿಂದ ಇಂದಿರಾ ಗಾಂಧಿಯವರ ಹೈಕಮಾಂಡ್ ಸೂಚಿಸಿದವರೇ, ಮುಖ್ಯಮಂತ್ರಿಗಳೂ, ಪ್ರದೇಶ ಕಾಂಗ್ರೆಸ್ ಸಮಿತಿ, ಅಧ್ಯಕ್ಷರುಗಳೂ ಆಗುತ್ತಿದ್ದರು. ಆ ಪ್ರವೃತ್ತಿ ಹಾಗೆಯೇ ಮುಂದುವರೆದಿರುವುದಕ್ಕೆ ಚುನಾವಣಾ ಆಯೋಗ ಕಡಿವಾಣ ಹಾಕಿರುವುದು ಸ್ವಾಗತಾರ್ಹ.

ಕರ್ನಾಟಕದಲ್ಲಿ :

ಬಂಡವಾಳಶಾಹಿ ಪಕ್ಷಗಳಲ್ಲಿ ಕಾಂಗ್ರೆಸ್, ಜನತಾದಳ, ಬಿಜೆಪಿ - ಯಾವುದೇ ಇರಲಿ - ಸಾಂಸ್ಥಿಕ ಚುನಾವಣೆ ಜಾತಿ-ಉಪಜಾತಿ ಆಧಾರದಲ್ಲಿಯೇ ನಡೆಯುತ್ತಿದೆ. ಹಾಗೆಯೇ ಹಣಬಲ-ಭುಜಬಲಗಳಿಂದಲೇ ನಡೆಯುತ್ತಿದೆ. ಹಿರಿಯ ಕಾಂಗ್ರೆಸ್ ಮುಖಂಡ ಮಾಜಿ ಕೇಂದ್ರ ಸಚಿವ ಎಂ.ರಾಜಶೇಖರ ಮೂರ್ತಿಯವರು ಪಕ್ಷದ ಸಾಂಸ್ಥಿಕ ಚುನಾವಣೆ ಸಂಬಂಧಿಸಿ ಗಂಭೀರ ಆಪಾದನೆ ಮಾಡಿದ್ದಾರೆ. ಕಳ್ಳ ಸಾಗಾಣೆದಾರರು, ಕಾಳ ಸಂತೆಕೋರರು, ಗೂಂಡಾಗಳಂತ ಸಮಾಜಘಾತುಕ ಶಕ್ತಿಗಳು ಆಯ್ಕೆಯಾಗುತ್ತಿದ್ದಾರೆಂದು ಹೇಳಿದ್ದಾರೆ. ಹಲವಾರು ಜಿಲ್ಲಾ ಸಮಿತಿಗಳ ಚುನಾವಣೆ ಸರ್ವಾನುಮತದಿಂದಾಗಿದೆಂಬ ಪ್ರಕಟಣೆಯ ಮರು ಕ್ಷಣದಲ್ಲೇ ಚುನಾವಣೆಯಲ್ಲಿ ಬಹಳಷ್ಟು ಅನ್ಯಾಯಗಳು ನಡೆದಿವೆಂಬ ದೂರುಗಳು ಬೆಳಕು ಕಂಡಿವೆ. ಈಗಾಗಲೇ ಕೆಪಿಸಿಸಿ ಅಧ್ಯಕ್ಷರಾದ ನಂತರ ರಾಮನಗರ ಮತ್ತು ಮೊಳಕಾಲ್ಮೂರು ಉಪ ಚುನಾವಣೆಗಳಲ್ಲಿ ಗೆಲವು ಪಡೆದ ಹಾಗೆಯೇ ಎಪಿಎಂಸಿ ಮತ್ತು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಜಯ ಸಾಧಿಸಿದ ಧರ್ಮಸಿಂಗ್, ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಹಾಗೂ ಲಿಂಗಾಯತ ಕೋಮಿನ ರಾಜಶೇಖರಮೂರ್ತಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಗಳಾಗುವ ಸಾಧ್ಯತೆಗಳಿದ್ದು, ಧರ್ಮಸಿಂಗ್ ಅವರ ಕೊರಳಿಗೆ ಹೂವಿನ ಹಾರ ಬೀಳಬಹುದೆಂದೆನಿಸಿದರೆ ಪಕ್ಷದೊಳಗಿನ ಜಾತಿ-ಉಪಜಾತಿಗಳೊಳಗಿನ ಪೈಪೋಟಿ ಚುನಾವಣೆಯ ಪರಿಣಾಮ ನಿರ್ಧರಿಸಲಿದೆಂಬುದನ್ನು ಮರೆಯುವಂತಿಲ್ಲ.

ಚುನಾವಣಾ ಆಯೋಗದ ನಿರ್ದೇಶನದಂತೆ ಸಾಂಸ್ಥಿಕ ಚುನಾವಣೆಯನ್ನು ಜೂನ್ 15 ರೊಳಗೆ ಮುಕ್ತಾಯಗೊಳಿಸಲೇ ಬೇಕಾಗಿರುವಾಗಲೇ ಸಿ.ಎಂ.ಇಬ್ರಾಹಿಂ ಅವರ ಸ್ಥಾನದಲ್ಲಿ ಬಿ.ಎಲ್.ಶಂಕರ್ ಅವರನ್ನು ರಾಜ್ಯದ ಜನತಾದಳದ ಅಧ್ಯಕ್ಷರನ್ನಾಗಿ ಆರಿಸಲಾಯಿತೆಂದು ಸಾರಲಾಯಿತು. ಅನಂತರ ಜಿಲ್ಲಾ ಸಮಿತಿ ಮತ್ತು ಅಧ್ಯಕ್ಷರ ಹೆಸರುಗಳನ್ನು ಪ್ರಕಟಿಸಲಾಯಿತು. ರಾಜ್ಯ ಸಮಿತಿಯ ಸದಸ್ಯರ ಹೆಸರುಗಳೂ ಪ್ರಕಟವಾದವು. ಹಲವುಗಳಲ್ಲಿ ಬದಲಾವಣೆಗಳಾಗಬೇಕೆಂದು ಒತ್ತಾಯ ಬರುತ್ತಿದೆ. ಇವುಗಳಲ್ಲಿ ಯಾವ ರೀತಿಯ ಚುನಾವಣೆಗಳ ಮೂಲಕ ನಡೆದಿವೆಯೆಂಬುದೇನೂ ತಿಳಿಯಲಿಲ್ಲ. ಈ ಎಲ್ಲಾ ಚುನಾವಣೆಗಳ ಕುರಿತೂ ಪ್ರತಿಭಟನೆಗಳು ಪತ್ರಿಕೆಗಳಲ್ಲಿ ಸಾಕಷ್ಟು ಪ್ರಕಟವಾಗಿವೆ, ಪ್ರಕಟವಾಗುತ್ತಿವೆ.

ಇದು ಕಾಂಗ್ರೆಸ್ ಮತ್ತು ಜನತಾದಳದ ಚುನಾವಣೆಗಳ ವೈಖರಿ. ಈ ಚುನಾವಣೆಗಳ ನಂತರ ಕಾಂಗ್ರೆಸ್ ಮತ್ತು ಜನತಾದಳದಲ್ಲಿ ಏನಾಗಬಹುದೆಂಬುದನ್ನು ಕಾದು ನೋಡಬೇಕಾಗಿದೆ. ದೇಶದ ರಾಜಕಾರಣದ ಮೇಲೆ ಹಾಗೆಯೇ ಸಂಯುಕ್ತ ರಂಗದ ಗುಜ್ರಾಲ್ ಸರಕಾರದ ಮೇಲೆ ಯಾವ ರೀತಿಯ ಬೆಳಕು ಚೆಲ್ಲಬಹುದೆಂಬುದನ್ನು ಮುಂದೆ ನೋಡಬೇಕಾಗಿದೆ.

ಬಂಡವಾಳಶಾಹಿ ಪಕ್ಷಗಳ ಸಾಂಸ್ಥಿಕ ಚುನಾವಣೆಗಳಲ್ಲಿ ಈ ರೀತಿಯ ಗೊಂದಲಗಳನ್ನು ಅವು ಆಯಾ ಪಕ್ಷಗಳ ಮೇಲೆ ಹಾಗೆಯೇ [illegible] ಮೇಲೆ ಬೀರಬಹುದಾದ ದುಷ್ಪರಿಣಾಮಗಳನ್ನು ನಿರೀಕ್ಷಿಸುತ್ತಿರುವಾಗಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನ ಮತ್ತು ಇತರ ಚುನಾವಣೆಗಳು ಯಾವ ಆತಂಕಗಳನ್ನು ಉಂಟುಮಾಡದೆ ಎಷ್ಟು ತೃಪ್ತಿಕರವಾಗಿ ಮತ್ತು ಶಿಸ್ತಿನಿಂದ ನಡೆದಿವೆಂಬುದನ್ನು ಓದುಗರು ಗಮನಿಸುವುದು ಅಗತ್ಯ. ತಮ್ಮ ಪಕ್ಷದ ಸಂವಿಧಾನಕ್ಕನುಗುಣವಾಗಿ ಪ್ರತಿ ಮೂರು ವರ್ಷಕ್ಕೊಂದು ಸಲ ಕೆಳಗಿನ ಘಟಕದಿಂದ ಪ್ರಾರಂಭವಾಗಿ ದೇಶದ ಮಟ್ಟದವರೆಗೆ ಸಮ್ಮೇಳನಗಳು ಮತ್ತು ಪದಾಧಿಕಾರಿಗಳ ಚುನಾವಣೆಗಳು ನಡೆಯುತ್ತದೆ. ಆ ಸಮ್ಮೇಳನಗಳಲ್ಲಿ ಕೇಂದ್ರ ಸಮಿತಿ ಪ್ರಕಟಿಸಿದ ರಾಜಕೀಯ ನಿರ್ಣಯವನ್ನು ಗಂಭೀರವಾಗಿಯೇ ಚರ್ಚಿಸಲಾಗುವುದು. ತಮ್ಮ ಸಂಘಟನೆ, ಚಟುವಟಿಕೆಗಳ ಕುರಿತು ವಿಮರ್ಶೆ ನಡೆದು ನಂತರ ಪ್ರತಿಯೊಬ್ಬ ಕಾರ್ಯಕರ್ತನ ಕಾರ್ಯವನ್ನು ವಿಮರ್ಶೆಗೊಳಪಡಿಸಿ ಹೊಸ ಕಮಿಟಿ ಮತ್ತು ಕಾರ್ಯದರ್ಶಿಯನ್ನು ಆಯ್ಕೆ ಮಾಡಲಾಗುವುದು. ಕಾಂಗ್ರೆಸ್- ಜನತಾದಳಗಳಂತೆ ಇಲ್ಲಿ ಜಾತಿ, ಉಪಜಾತಿ, ಧರ್ಮದ ಆಧಾರದಲ್ಲಿ ಕಮಿಟಿ ಮತ್ತು ಪದಾಧಿಕಾರಿಗಳನ್ನು ಆರಿಸುವುದಿಲ್ಲ. ಪಕ್ಷಕ್ಕೆ ನಿಷ್ಠೆ, ಕೆಲಸದ ಸಾಮರ್ಥ್ಯವನ್ನಳೆದು ಆರಿಸಲಾಗುವುದು. ಬಂಡವಾಳಶಾಹಿ ಪಕ್ಷಗಳೊಳಗಿನ ಚುನಾವಣೆಗಳು ಬಂಡವಾಳಶಾಹಿ ಪತ್ರಿಕೆಗಳಿಗೆ ಸಾಕಷ್ಟು ಆಹಾರ ಒದಗಿಸುತ್ತಿರುವಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಾಂಸ್ಥಿಕ ಚುನಾವಣೆಗಳು ಅವುಗಳಿಗೆ ಅಪಪ್ರಚಾರಕ್ಕೆ ಏನೂ ಲಭ್ಯವಾಗದಿರುವುದನ್ನು ಕಾಣಬಹುದಾಗಿದೆ.

ಸಿಪಿಐ(ಎಂ) ಪಕ್ಷದ ಚುನಾವಣೆ ತನ್ನ ಕಾರ್ಯಕ್ರಮದ ಆಧಾರದಲ್ಲಿ ಮೂರು ವರ್ಷಕ್ಕೊಂದು ಸಲ ಸರಿಯಾಗಿಯೇ ನಡೆಯುತ್ತಿದ್ದು, ಅಲ್ಲಿ ಪಕ್ಷದ ಲೆಕ್ಕಪತ್ರ ಮಂಜೂರಿಗಾಗಿ ಮಂಡಿಸಲ್ಪಟ್ಟು, ಚುನಾವಣಾ ಆಯೋಗಕ್ಕೆ ಸಕಾಲದಲ್ಲೇ ತಲುಪಿಸುತ್ತಿರುವುದರಿಂದಲೇ ಚುನಾವಣಾ ಆಯೋಗದಿಂದ ಛೀಮಾರಿ ಹಾಕಿಸಿಕೊಳ್ಳುವ ಪರಿಸ್ಥಿತಿ ಇಲ್ಲ. ಜನಸಾಮಾನ್ಯರ ಪ್ರಶಂಸೆಗೊಳಗಾಗುವ ಸಂದರ್ಭ ಮಾತ್ರ ಅದಕ್ಕೆ ದಕ್ಕಿದೆ. ಬಂಡವಾಳಶಾಹಿ ಪಕ್ಷಗಳ ಮತ್ತು ಸಿಪಿಐ(ಎಂ) ಪಕ್ಷದ ಸಾಂಸ್ಥಿಕ ಚುನಾವಣೆಯ ಬಹಿರಂಗ ಚಿತ್ರ ಇದಾಗಿದೆ.



"................. ಜನತೆಯ ಕಣ್ಣಲ್ಲಿ ದೋಷಮುಕ್ತರಾಗಬೇಡವೇ?"

ಪುಟ 1 ರಿಂದ

ಸ್ವರೂಪದ ಹಲ್ಲೆ ನಡೆಸುತ್ತಿದ್ದಾರೆ. ದೆಹಲಿಯಲ್ಲಿ ಹಿಂದೂ ಸರಕಾರ ರಚಿಸಿದ್ದೇವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ.

ಎಡಪಂಥೀಯ ಚಳುವಳಿ ಬಲಿಷ್ಠವಿರುವ ಕಡೆಗಳಲ್ಲಿ ಕೋಮುವಾದಿಗಳ ಸದ್ದಡಗಿದೆ. ಬಿಜೆಪಿ ನಾಯಕ ಅಡ್ವಾಣಿಯವರು ಸ್ವಾತಂತ್ರ್ಯದ ಸ್ವರ್ಣಯಾತ್ರೆಯನ್ನು ಕೈಗೊಂಡಿದ್ದಾರೆ. ಈ ರಥಯಾತ್ರೆ ಯಾವುದೇ ಪ್ರಭಾವ ಬೀರುತ್ತಿಲ್ಲ. ಬಿಜೆಪಿ ಪ್ರಭಾವ ಕುಗ್ಗುತ್ತಿದೆ. ಹವಾಲಾ ಹಗರಣದ ಬಗ್ಗೆ ಕೆಳ ಕೋರ್ಟ್ ನೀಡಿದ ತೀರ್ಪನ್ನು ತೋರಿಸಿ ಹೆಗ್ಗಳಿಕೆ ಮಾತಾಡುತ್ತಿದ್ದಾರೆ.

ಈ ಭ್ರಷ್ಟಾಚಾರದ ಆಪಾದನೆ ಕುರಿತು ಮೇಲ್ಮನವಿಗೆ ಹೋಗಲು ಸಿಬಿಐ ಗೆ ಅವಕಾಶ ಕೊಡಬೇಕೆಂದು ಎಡಪಕ್ಷಗಳು ಒತ್ತಾಯಿಸಿವೆ.

ಮಹಿಳೆಯರಿಗೆ ಶೇ 33 ಮೀಸಲಾತಿ ನ್ಯಾಯಬದ್ಧ

ಮಹಿಳಾ ಮೀಸಲಾತಿ ಬಗ್ಗೆ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಮಾತನಾಡಿದ ಸಲೀಂರವರು ಶರದ್ ಯಾದವ್, ಬನತ್‌ವಾಲಾ ಅವರಿಗೆ ಮಹಿಳಾ ಮೀಸಲಾತಿ ಭಯ ತಂದಿದೆ ಎಂದರು. ಬಿಜೆಪಿ ನಾಯಕಿ ಉಮಾಭಾರತಿಯವರು ಮಹಿಳಾ ಮೀಸಲಾತಿ ವಿರೋಧಿಸುತ್ತಿದ್ದಾರೆ. ಇನ್ನೊಂದೆಡೆ ಓಬಿಸಿಗಳಲ್ಲಿ ಮಹಿಳಾ ಮೀಸಲಾತಿ ಪ್ರಾತಿನಿಧ್ಯಬೇಕೆಂದು ನಾಟಕೀಯ ವಿಚಾರ ಮಂಡಿಸಿರುತ್ತಾರೆ.

ಡಿವೈಎಫ್‌ಐ ಸ್ಪಷ್ಟವಾಗಿ ಹೇಳುತ್ತದೆ. ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ನೀಡಬೇಕು. ಇದು ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಸಲೀಂ ಸ್ಪಷ್ಟವಾಗಿ ಸಾರಿದರು.

ಕ್ಯೂಬಾದಲ್ಲಿ 14ನೇ ಅಂತರಾಷ್ಟ್ರೀಯ ಯುವಜನ ಮೇಳ

ರಷ್ಯಾದಲ್ಲಿ ಸಮಾಜವಾದದ ಪತನದ ನಂತರ ಅಂತರ್‍ರಾಷ್ಟ್ರೀಯ ಯುವ ಆಂದೋಲನ ಅಸ್ತವ್ಯಸ್ತವಾಗಿತ್ತು. ಇಂತಹ ಸಂದರ್ಭದಲ್ಲಿ 14 ನೇ ಅಂತರಾಷ್ಟ್ರೀಯ ಯುವಜನ ಮೇಳವನ್ನು ಜುಲೈ 28 ರಿಂದ ಆಗಸ್ಟ್ 5 ರವರೆಗೆ ಸಮಾಜವಾದಿ ದೇಶವಾದ ಕ್ಯೂಬಾ ನಡೆಸುತ್ತಿದೆ. ಹವಾನದಲ್ಲಿ ನಡೆಯುತ್ತಿರುವ ಈ ಮೇಳ ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಯನ್ನು ಹೊತ್ತಿದೆ. ಡಿವೈಎಫ್‌ಐ ಈ ಮಹತ್ವದ ಯುವಜನ ಮೇಳ ಯಶಸ್ವಿಗೊಳಿಸಲು ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಅದಕ್ಕಾಗಿ ಸಿದ್ಧತೆ ಭರದಿಂದ ಸಾಗಿದೆ. ಈ ಸಂದೇಶವನ್ನು ನಾವು ಸಮರ್ಪಕವಾಗಿ ಬಳಸಿಕೊಂಡು ಸಾಮ್ರಾಜ್ಯಶಾಹಿಗಳು ಒಡ್ಡುತ್ತಿರುವ ಅಪಾಯವನ್ನು ಬಹಿರಂಗಗೊಳಿಸಬೇಕು ಎಂದವರು ಹೇಳಿದರು.

ಜನತೆಯ ದೃಷ್ಟಿ ಎಡಪಕ್ಷಗಳ ಕಡೆಗೆ

ದೇಶದ ಜನತೆ ಎಡಪಕ್ಷಗಳ ಹೋರಾಟಗಳನ್ನು ನೋಡುತ್ತಿದ್ದಾರೆ. ನಮ್ಮ ಹೋರಾಟ, ಜನಹಿತ ಕಾರ್ಯಕ್ರಮಗಳನ್ನು ಗಮನಿಸುತ್ತಿದ್ದಾರೆ. ಕರ್ನಾಟಕದಲ್ಲಿಯೂ ನಾವು ಬೆಳೆಯುತ್ತಿದ್ದೇವೆ. ಜನತಾದಳ ಸರಕಾರದ ಬಗ್ಗೆ ಜನ ನಿರುತ್ಸಾಹಗೊಂಡಿದ್ದಾರೆ. ಇಂತಹ ಸ್ಥಿತಿಯಲ್ಲಿ ಡಿವೈಎಫ್‌ಐ ಜನರ ಸ್ಥಳೀಯ ಸಮಸ್ಯೆಗಳನ್ನೆತ್ತಿಕೊಂಡು ಹೋರಾಟ ನಡೆಸಬೇಕು ಎಂದು ಅವರು ಕರೆ ನೀಡಿದರು.

ಚಿಂತನೆ-ಚಳುವಳಿ ಒಟ್ಟಿಗೆ ಸಾಗಬೇಕು

ಈ ಸಭೆಯಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಡಿವೈಎಫ್‌ಐ ಸಂಸ್ಥಾಪಕ ಸದಸ್ಯರಾದ ಶಾಸಕ ಶ್ರೀರಾಮರೆಡ್ಡಿ ಯುವಜನರಲ್ಲಿ ಪ್ರಗತಿಯ ಪ್ರಜ್ಞೆ ಅತ್ಯಾವಶ್ಯಕ, ಈ ಬೆಳವಣಿಗೆಗೆ ಡಿವೈಎಫ್‌ಐ ಹೆಚ್ಚು ಕೆಲಸ ನಿರ್ವಹಿಸಬೇಕು ಎಂದರು. ಚಿಂತನೆ-ಚಳುವಳಿ ಒಟ್ಟೊಟ್ಟಿಗೆ ಸಾಗಬೇಕೆಂದ ಅವರು ಯುವಜನರನ್ನು ಅಧಃಪತನಕ್ಕೆ ತಳ್ಳುವ ಯತ್ನಗಳು ನಡೆದಿವೆ, ಅವರು ಬಲಿಪಶುಗಳಾಗುತ್ತಿದ್ದಾರೆ ಎಂದು ಎಚ್ಚರಿಸಿದರು. ನಿರುದ್ಯೋಗ, ಶಿಕ್ಷಣದಿಂದ ವಂಚನೆ, ಸಾಮಾಜಿಕ ನ್ಯಾಯದಂತಹ ಪ್ರಶ್ನೆಗಳ ಮೇಲೆ ಯಾವುದೇ ರಾಜಿ ಇಲ್ಲದೆ ಹೋರಾಟ ಅಗತ್ಯ. ಯುವಜನರು ಹತಾಶರಾಗಬೇಕಿಲ್ಲ, ಸ್ಫೂರ್ತಿ, ಅನುಭವಗಳಿಂದ ಮುಂದುವರಿಯಬೇಕೆಂದ ಅವರು ಬಲಿಷ್ಠ, ಸಮರಧೀರ ಯುವ ಆಂದೋಲನ ಬೆಳೆಯಬೇಕೆಂದರು.

ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಹಾಗೂ ಅಂತರ್‍ರಾಷ್ಟ್ರೀಯ ಯುವ ಆಂದೋಲನದ 50 ವರ್ಷಗಳನ್ನು ಡಿವೈಎಫ್‌ಐ ವರ್ಷವಿಡೀ ಆಚರಿಸಲಿದೆ. ದೇಶದಲ್ಲಿ ಒಂದು ಕೋಟಿ, ರಾಜ್ಯದಲ್ಲಿ ಒಂದು ಲಕ್ಷ ಯುವಜನರನ್ನು ಸದಸ್ಯರನ್ನಾಗಿಸಲು ನಿರ್ಧರಿಸಲಾಗಿದೆ ಯೆಂದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸಮಿತಿ ಉಪಾಧ್ಯಕ್ಷರಾದ ಗೋಪಾಲಕೃಷ್ಣರವರು ವಹಿಸಿದ್ದರು. ರಾಜ್ಯ ಸಹ ಕಾರ್ಯದರ್ಶಿ ಎಂ.ಪಿ.ನಾರಾಯಣ ಸ್ವಾಮಿ ವಂದಿಸಿದರು. ಆರಂಭದಲ್ಲಿ ಬಿಜಿವಿಎಸ್‌ನ ಸಿದ್ದರಾಜುರವರ ಹಾಡಿನ ಕಾರ್ಯಕ್ರಮವಿತ್ತು.

ವರದಿ:
ಗೋಪಾಲಕೃಷ್ಣ

ಕುಂದಾಪುರ ಪುರಸಭೆ: ಅಭಿವೃದ್ಧಿ ಕಾರ್ಯಕ್ಕೆ ಜನರ ಸಹಕಾರ

ಕುಂದಾಪುರ ಪುರಸಭೆಯಲ್ಲಿ ಸಿಪಿಐ(ಎಂ) ಜನತಾದಳ ಮೈತ್ರಿ ಕೂಟದ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದು ಆರು ತಿಂಗಳಾಗಿವೆ. ಈ ಸಂದರ್ಭದಲ್ಲಿ ಪುರಸಭೆಯ ಅಧ್ಯಕ್ಷ, ಸಿಪಿಐ(ಎಂ) ನಾಯಕ ಕಾಂ॥ ವಿ.ನರಸಿಂಹ ಅವರನ್ನು 'ಐಕ್ಯರಂಗ' ಕ್ಕಾಗಿ ಸಂದರ್ಶಿಸಲಾಯಿತು.

1996 ನವೆಂಬರ್ 19 ರಂದು ಹೊಸ ಮಂಡಳಿ ಅಧಿಕಾರಕ್ಕೆ ಬಂದಿತ್ತು.

- ಸಂದರ್ಶನ: ವಿಶ್ವ

ಪ್ರಶ್ನೆ: ಹೊಸದಾಗಿ ರಚನೆಯಾಗಿರುವ ಆಡಳಿತ ಮಂಡಳಿಯ ಬಗ್ಗೆ ಪಟ್ಟಣದ ಜನರು ಏನೆನ್ನುತ್ತಾರೆ?

ಉತ್ತರ: ಆಡಳಿತ ಮಂಡಳಿ ಬಗ್ಗೆ ಜನರಲ್ಲಿ ಒಳ್ಳೆಯ ಅಭಿಪ್ರಾಯವಿದೆ. ಕೆಲಸ ಮಾಡುವ ಮಂಡಳಿ ಅಧಿಕಾರದಲ್ಲಿದೆ ಎಂಬುದು ಬಹುತೇಕ ಜನರ ಅಭಿಮತ.

ಪ್ರ: ಜನರ ಅನುಕೂಲಕ್ಕಾಗಿ ಪುರಸಭೆ ಹಮ್ಮಿಕೊಂಡಿರುವ ನಿರ್ದಿಷ್ಟ ಕಾರ್ಯಕ್ರಮಗಳೇನು?

ಉ: ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಆದ್ಯತೆ ಕೊಡಲಾಗುತ್ತಿದೆ. ವಾರಾಹಿಯಿಂದ ನೀರನ್ನು ತರಿಸುವ ಕುರಿತ ಯೋಜನೆಯ ಸರ್ವೆ ಮುಗಿದಿದ್ದು ಸರಕಾರದ ಮುಂದಿದೆ.

ಹಿಂದಿನ ಆಡಳಿತ ಮಂಡಳಿ ಇದ್ದಾಗಲೇ ಈ ಯೋಜನೆ ಇತ್ತು. ಪ್ರಸಕ್ತ ಕೌನ್ಸಿಲ್ ಬಂದ ನಂತರ ಸರ್ವೆಯನ್ನು ಪೂರ್ಣಗೊಳಿಸಿ ಸರಕಾರಕ್ಕೆ ಕಳಿಸಲಾಗಿದೆ.

ನಗರ ನೈರ್ಮಲ್ಯ, ಶುಚಿತ್ವಕ್ಕೆ ಪ್ರಾಮುಖ್ಯ ಕೊಡುತ್ತಿದ್ದೇವೆ. ಕಸದ ತೊಟ್ಟಿಗಳನ್ನು ಇರಿಸಿ ಕಸವನ್ನು ತೆಗೆದುಹಾಕಲು ಕ್ರಮ ಕೈಗೊಳ್ಳಲಾಗಿದೆ. ಕಸವನ್ನು ಸಾಗಿಸಲು ವಾಹನವನ್ನು ಖರೀದಿಸಿದ್ದೇವೆ.

ಆ ವಿಚಾರದಲ್ಲಿ ಆರು ತಿಂಗಳ ಹಿಂದಿನದಕ್ಕೂ ಈಗಿನ ಪರಿಸ್ಥಿತಿಗೂ ತುಂಬಾ ವ್ಯತ್ಯಾಸವಿದೆ, ಮಹತ್ವವೂ ಇದೆ.

ಪ್ರ: ಸರಕಾರದಿಂದ ಬೆಂಬಲ ಹೇಗಿದೆ?

ಉ: ಬಹುತೇಕ ಎಲ್ಲಾ ಸ್ಥಳೀಯ ಸಂಸ್ಥೆಗಳ ಪರಿಸ್ಥಿತಿಯೇ ನಮ್ಮದು ಕೂಡಾ. ಸರಕಾರದಿಂದ ಬರಬೇಕಾದ ಅನುದಾನ ಇನ್ನೂ ಬಂದಿಲ್ಲ. ರಸ್ತೆ ತೆರಿಗೆ, ಅಕ್ಟ್ರಾಯ್ ಮೊದಲಾದವುಗಳಲ್ಲಿನ ನಮ್ಮ ಪುರಸಭೆಯ ಪಾಲು ಕೂಡಾ ಸರಕಾರದಿಂದ ಬಂದಿಲ್ಲ. ಸ್ಥಳೀಯವಾಗಿ ಲಭ್ಯವಾಗುವ ಸಂಪನ್ಮೂಲಗಳಿಂದಷ್ಟೇ ಕೆಲಸವನ್ನು ನಿಭಾಯಿಸುತ್ತಿದ್ದೇವೆ.

ಪ್ರ: ಸರಕಾರದಿಂದ ಹೆಚ್ಚಿನ ಬೆಂಬಲ ಇಲ್ಲದಿದ್ದರೂ ಪಟ್ಟಣದ ಒಳಚರಂಡಿಗಾಗಿ ಜನರ ಸಹಕಾರದಿಂದಲೇ ಯೋಜನೆ ರೂಪಿಸಲಾಗಿದೆ ಎಂದು ಕೇಳಿದ್ದೇನೆ. ಈ ಬಗ್ಗೆ ಸ್ವಲ್ಪ ಹೇಳ್ತೀರಾ?

ಉ: ಹೌದು. ಜನರ ಸಹಕಾರದಿಂದ ತುಂಬಾ ಮಹತ್ವದ ಕಾರ್ಯಯೋಜನೆಯನ್ನು ಪುರಸಭೆ ಕೈಗೆತ್ತಿಕೊಂಡಿದೆ.


ಪಟ್ಟಣದ ಹೋಟೆಲ್‌ಗಳು, ಬಸ್ ಸಂಸ್ಥೆಗಳು ಮತ್ತು ನರ್ಸಿಂಗ್ ಹೋಂಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳಚರಂಡಿ ನಿರ್ಮಾಣ ಯೋಜನೆಯನ್ನು ರೂಪಿಸಲಾಗಿದೆ. ಸುಮಾರು 3 ಲಕ್ಷ ರೂಪಾಯಿಯ ಕಾಮಗಾರಿ ಈಗಾಗಲೇ ನಡೆಯುತ್ತಿದೆ.

ಕೊಳಚೆ ನೀರು ರಸ್ತೆ ಮೇಲೆ ಹರಿಯದೆ ಒಳಚರಂಡಿ ಮೂಲಕ ಹಾದು ನಿರ್ದಿಷ್ಟ ಸ್ಥಳಕ್ಕೆ ಸಾಗಿಸಲು ಚರಂಡಿ ನಿರ್ಮಾಣ ಕೆಲಸ ನಡೆಯುತ್ತಿದೆ. ಆಗಲೇ ಹೇಳಿದಂತೆ ಆಯಾ ಪ್ರದೇಶಗಳ ವ್ಯಾಪ್ತಿಗೆ ಬರುವ ನಾನಾ ವಾಣಿಜ್ಯ ಸಂಸ್ಥೆಗಳ ಮಾಲೀಕರು ದೇಣಿಗೆ ಕೊಡುತ್ತಾರೆ.

ಪುರಸಭೆ ಕಚೇರಿಯ ಅಧ್ಯಕ್ಷರ ಕೊಠಡಿಯಲ್ಲಿ ಈ ಸಂದರ್ಶನವನ್ನು ಪಡೆಯುತ್ತಿರುವ ಸಂದರ್ಭದಲ್ಲಿ ಅಧ್ಯಕ್ಷರು ವೈದ್ಯರೊಬ್ಬರಿಗೆ ಫೋನ್ ಮಾಡಿ ಅವರ ನರ್ಸಿಂಗ್ ಹೋಂ ಪರವಾಗಿ ಬರಬೇಕಾಗಿರುವ ಬಾಕಿ ಬಗ್ಗೆ ವಿಚಾರಿಸಿದರು. ಬಾರಿ ಮೊತ್ತದ ಚೆಕ್ಕನ್ನು ಆಗಲೇ ಬ್ಯಾಂಕಿಗೆ ಹಾಕಿಯಾಗಿದೆ ಎಂಬುದು ವೈದ್ಯರ ಉತ್ತರವಾಗಿತ್ತು. ಒಳಚರಂಡಿ ಯೋಜನೆಗೆ ಜನರಿಂದ ಉತ್ತಮ ಸಹಕಾರ ದೊರೆಯುತ್ತಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಪ್ರ: ಒಳಚರಂಡಿ ನಿರ್ಮಾಣಕ್ಕೆ ಮಾತ್ರವೇ ಈ ರೀತಿಯ ಸಹಕಾರವೇ?

ಉ: ಇಲ್ಲ, ಹಲವು ಪ್ರದೇಶಗಳಲ್ಲಿ ರಸ್ತೆ ನಿರ್ಮಾಣಕ್ಕೆ ಕೂಡ ಹಲವು ಸಂಸ್ಥೆಗಳು ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದಿವೆ.



ಉದಾಹರಣೆಗೆ, ರಾಮಕೃಷ್ಣ ನರ್ಸಿಂಗ್ ಹೋಂ ಪಕ್ಕದ ರಸ್ತೆಯನ್ನು 2.17 ಲಕ್ಷ ರೂಪಾಯಿ ವೆಚ್ಚದಿಂದ ಪಕ್ಕಾ ರಸ್ತೆಯನ್ನಾಗಿ ಮಾಡಲು ಬಿಪಿಎಸ್ ಫೈನಾನ್ಸ್ ಕಂಪನಿಯವರು ಮುಂದೆ ಬಂದಿದ್ದಾರೆ.

ಎ.ಕೆ.ಜಿ. ರಸ್ತೆ ನಿರ್ಮಾಣಕ್ಕೆ ಒಂದು ಲಕ್ಷ ರೂಪಾಯಿ ಕೊಡಲು ಶ್ರೀದೇವಿ ನರ್ಸಿಂಗ್ ಹೋಂನವರು ಒಪ್ಪಿದ್ದಾರೆ. ಈ ರಸ್ತೆಯ ಡಾಂಬರೀಕರಣ ವೆಚ್ಚ ಮಾತ್ರ ಪುರಸಭೆಯದ್ದು.

ಈಗ ಅಷ್ಟೇನೂ ಉತ್ತಮವಾಗಿಲ್ಲದ ಮೂರುತ್ತೆ(ಮೂರುಕೈ) ಸರ್ಕಲ್ಲನ್ನು ಭುಜಂಗ ಶೆಟ್ಟಿ ಎಂಬುವರು ತಮ್ಮ ತಂದೆಯ ಸ್ಮರಣಾರ್ಥ ನವೀಕರಿಸಲು ಮುಂದಾಗಿದ್ದಾರೆ. ಸುಮಾರು 50 ಸಾವಿರ ರೂಪಾಯಿ ಖರ್ಚಿನಲ್ಲಿ ಈ ವೃತ್ತ ನಿರ್ಮಾಣವಾಗಲಿದೆ.

ಪಾರಿಜಾತ ವೃತ್ತವನ್ನು ನಂದಿಕೇಶ್ವರದ ಯುವಕ ಸಂಘದವರು ನಿರ್ವಹಿಸುತ್ತಿದ್ದು ಅಲ್ಲೊಂದು ಗಡಿಯಾರ ಗೋಪುರ ಸ್ಥಾಪನೆಗೆ ಈ ಸಂಘ ಮುಂದಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಪಟ್ಟಣದ ಅಭಿವೃದ್ಧಿ, ನೈರ್ಮಲ್ಯ, ಸೌಂದರ್ಯ..... ಹೀಗೆ ಎಲ್ಲಾ ವಿಚಾರಗಳಲ್ಲಿ ಜನರು ಪುರಸಭೆಯೊಂದಿಗೆ ತುಂಬು ಹೃದಯದಿಂದ ಸಹಕರಿಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಸ್ಥಳೀಯ ಸಂಸ್ಥೆಗಳಲ್ಲಿ ದುಡಿದು ಅನುಭವವುಳ್ಳ ಪ್ರಸಕ್ತ ಕುಂದಾಪುರ ಪುರಸಭೆಯ ಮುಖ್ಯಾಧಿಕಾರಿ ಪಿ.ಕೃಷ್ಣಪ್ಪ ಅವರ ದಕ್ಷ ಮಾರ್ಗದರ್ಶನವೂ ಸಿಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಪ್ರ: ಸಿಪಿಐ(ಎಂ) ಬಗ್ಗೆ ಜನರಲ್ಲಿ ಯಾವ ರೀತಿ ಅಭಿಪ್ರಾಯವಿದೆ?

ಉ: ನಮ್ಮ ಕೆಲಸದ ಬಗ್ಗೆ ಜನರಲ್ಲಿ ಅಭಿಮಾನವಿದೆ. ಕೆಲಸ ಮಾಡುವ ಬೋರ್ಡ್ ಅಧಿಕಾರಕ್ಕೆ ಬಂದಿದೆ ಎಂಬುದು ಜನರ ಒಮ್ಮತದ ಅಭಿಪ್ರಾಯ. ಆದರೆ ಅಭಿವೃದ್ಧಿ ಕಾರ್ಯಗಳಲ್ಲಿ ರಾಜಕೀಯ ಇಲ್ಲವೇ ಇಲ್ಲ. ಎಲ್ಲಾ ಪಕ್ಷಗಳು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಪಟ್ಟಣದ ನೈರ್ಮಲ್ಯ, ನೀರು ಸರಬರಾಜು ಮತ್ತಿತರ ವಿಷಯಗಳ ಪರಿಶೀಲನೆಗೆ ಪುರಸಭೆ ಅಧ್ಯಕ್ಷರು ಪ್ರತಿದಿನ ಬೆಳಿಗ್ಗೆ ಒಂದು ಸುತ್ತು ನಗರ ಪ್ರದಕ್ಷಿಣೆ ಹಾಕುತ್ತಾರೆ. ಜನರ ಅಹವಾಲುಗಳನ್ನು ಕೇಳುತ್ತಾರೆ.

ಬೀಡಿ ಕಾರ್ಮಿಕರಿಗೆ ಮಾರಕವಾಗುವ ಕುಹಕ ಹೇಳಿಕೆ

ಕರ್ನಾಟಕ ರಾಜ್ಯ ಬೀಡಿ ಮಾಲೀಕರ ಅಸೋಸಿಯೇಷನ್ ಮತ್ತು ರಾಜ್ಯದ ಬಹುಮಂದಿ ಬೀಡಿ ಕಾರ್ಮಿಕರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗಳು ತಮ್ಮೊಳಗೆ ಕೈಗಾರಿಕಾ ವಿವಾದ ಕಾನೂನು 18(1) ಸೆಕ್ಷನ್ ಪ್ರಕಾರ ಮಾಡಿಕೊಂಡ ಒಪ್ಪಂದದಿಂದ ಇದೀಗ ಕರ್ನಾಟಕ ರಾಜ್ಯಾದ್ಯಂತವಾಗಿ ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ ರೂ. 40 (ಮೂಲ ಕೂಲಿ ಮತ್ತು ತುಟ್ಟಿಭತ್ಯೆ ಸೇರಿಸಿ) ಕೊಡಲಾಗುತ್ತಿದೆ. ಕಾರ್ಮಿಕರು ಈ ಒಪ್ಪಂದದಿಂದ ಸಿಗುತ್ತಿರುವ ಮಜೂರಿಯನ್ನು ಒಪ್ಪಿಕೊಂಡು ಸ್ವಾಗತಿಸಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯ ಬೀಡಿ ವರ್ಕರ್ಸ್ ಫೆಡರೇಷನ್ ಎಂಬ ಒಂದು ಸಂಘಟನೆ (ಯಾರು, ಏನು ಎಂಬ ವಿವರಣೆ ಇಲ್ಲ) ಪ್ರಜಾವಾಣಿ ಪತ್ರಿಕೆಯಲ್ಲಿ ದಿ. 29.5.97 ರಂದು ಪ್ರಕಟವಾದ ಪ್ರಕಾರ 'ಈ ಒಪ್ಪಂದವು ಕಾನೂನು ಬಾಹಿರ' ಎಂದು ಹೇಳಿಕೆ ಕೊಟ್ಟಿದ್ದಾರೆ. ಈ ಹೇಳಿಕೆ "ಕರ್ನಾಟಕ ಹೈಕೋರ್ಟ್ ಸಾವಿರ ಬೀಡಿಗೆ ರೂ. 44.92 ಕೊಡಬೇಕೆಂದು ತೀರ್ಪು ಕೊಟ್ಟಿದ್ದಾರೆ" ಎಂಬ ಸುಳ್ಳು ಆಧಾರವನ್ನು ಹೆಸರಿಸಿ 'ಆದ ಕಾರಣ ಒಪ್ಪಂದ ಕಾನೂನು ಬಾಹಿರ" ಎಂದು ಹೇಳಿದ್ದಾರೆ. ಆದರೆ ಹೈಕೋರ್ಟ್‌ನ ತೀರ್ಪು ಏನು ಎಂಬುದನ್ನು ಅವರು ಉಲ್ಲೇಖಿಸಿಲ್ಲ.

ಆ ತೀರ್ಪು ಬೀಡಿ ಕನಿಷ್ಠ ಕೂಲಿ ಪ್ರಕಟಣೆಯನ್ನು ತಡೆಹಿಡಿದ ಆಜ್ಞೆಯನ್ನು ತುಟ್ಟಿಭತ್ಯೆಯ ವಿಷಯದಲ್ಲಿ ಮಾತ್ರ ತಿದ್ದುಪಡಿ ಮಾಡಿ ಪಾಯಿಂಟಿಗೆ ಎರಡುವರೆ ಪೈಸೆ ಪ್ರಕಾರ 1513 ರ ಮೇಲೆ ಕೊಡಬೇಕೆಂದಿದೆ. ಇದರ ಅರ್ಥ ಸ್ಪಷ್ಟವಾಗಿ ಕನಿಷ್ಠ ಕೂಲಿಯ ನೋಟಿಫಿಕೇಷನ್‌ನ ಇತರ ಎಲ್ಲಾ ಅಂಶಗಳ ಮೇಲಿನ ನಿಲುಗಡೆ' ಮುಂದುವರಿಯುತ್ತದೆ ಎಂದಾಗುವುದು.

ಮಾತ್ರವಲ್ಲ 1.4.97 ರವರೆಗೆ ಕೊಡುತ್ತಾ ಬಂದಿದ್ದ ಪಾಯಿಂಟ್ 2 ಪೈಸೆಯ ಮೇಲೆ ಪಾಯಿಂಟ್‌ಗೆ ಅರ್ಧ ಪೈಸೆ ಪ್ರಕಾರ ಹೆಚ್ಚಳ ಕೊಡಬೇಕೆಂದರ್ಥವಾಗುವುದು. ಅಂದರೆ 1,700 ಕ್ಕೂ 1,513 ಕ್ಕೂ ಇರುವ 187 ಪಾಯಿಂಟಿಗೆ (ಈಗಾಗಲೇ 2 ಪೈಸೆ ಕೊಟ್ಟಾಗಿದೆ) ಅರ್ಧ ಪೈಸೆ ಪ್ರಕಾರ 93 ಪೈಸೆ ಮತ್ತು 1,813 ಮತ್ತು 1,700 ಕ್ಕೂ ಮಧ್ಯೆ ಇರುವ 136 ಪೈಸೆ, ಪಾಯಿಂಟಿಗೆ 2.50 ಪೈಸೆ ಪ್ರಕಾರ 3.40 ಪೈಸೆ ಕೊಡಬೇಕಾಗುತ್ತದೆ.

ಈಗ ಪ್ರಸ್ತುತ ಇರುವ ಕೂಲಿ ರೂ. 34.13 ಸಾವಿರ ಬೀಡಿಗಳಿಗೆ ರೂ. 34.13 ಕ್ಕೆ 0.93 ಮತ್ತು 3.40 ಅಂದರೆ 4.33 ರೂ.ವನ್ನು ಸೇರಿಸಿ ಕೊಡಬೇಕಾಗುವುದು. ಅಂದರೆ ಸಾವಿರ ಬೀಡಿಗೆ ರೂ. 38.40 ಕ್ಕಿಂತ ಹೆಚ್ಚಿಗೆ ಆಗಿರುವಾಗ ಈ ಒಪ್ಪಂದವು ನ್ಯಾಯಾಲಯದ ತೀರ್ಪಿಗೆ ವಿರೋಧವಾಗಿದೆ ಎನ್ನುವುದು ಹೇಗೆ? ವಾಸ್ತವವಾಗಿ ಅದರಿಂದ ಸಾವಿರ ಬೀಡಿಗೆ ರೂ.1.54 ಪೈಸೆ ಹೆಚ್ಚಿಗೆ ಆಗಿದೆ.

ಆದ್ದರಿಂದ ಈ ಅನಾಮಧೇಯ ಹೇಳಿಕೆ ಶುದ್ಧ ಕುಹಕ ಮಾತ್ರವಲ್ಲ ಲಕ್ಷಾಂತರ ಕಾರ್ಮಿಕರ ಹಿತಗಳಿಗೆ ಮಾರಕವಾಗಿದೆ ಎಂದು ಸಿಪಿಐ (ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ರಾಜ್ಯ ಸರಕಾರಿ ನೌಕರರ ದ.ಕನ್ನಡ ಜಿಲ್ಲಾ ವಾರ್ಷಿಕೋತ್ಸವ

ಮಂಗಳೂರು: ಕರ್ನಾಟಕ ರಾಜ್ಯ ಸರಕಾರಿ ನೌಕರರು ಬೋನಸ್, ಉತ್ತಮ ವೇತನ ಶ್ರೇಣಿ ಮತ್ತಿತರ ಸೌಲಭ್ಯಗಳನ್ನು ಪಡೆಯಲು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಅಖಿಲಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಗೌರವ ಅಧ್ಯಕ್ಷರಾದ ಕಾಂ॥ ಎಂ.ಆರ್.ಅಪ್ಪನ್‌ರವರು ಕರೆ ನೀಡಿದರು. ಅವರು ಮೇ 16 ರಂದು ಮಂಗಳೂರು ಪುರಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ವಾರ್ಷಿಕೋತ್ಸವ ಸಮಾರಂಭ ದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಸರಕಾರದ ಹೊಸ ಆರ್ಥಿಕ ನೀತಿಯ ದುಷ್ಪರಿಣಾಮಗಳು, ಕೇಂದ್ರ ಸರಕಾರದ 5ನೇ ವೇತನ ಆಯೋಗದ ವರದಿಯ ಮುಖ್ಯಾಂಶ ಗಳನ್ನು ವಿವರಿಸಿದ ಕಾಂ॥ ಅಪ್ಪನ್‌ರವರು ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯ ಸರಕಾರಿ ನೌಕರರು ಸಂಘಟಿತರಾಗಬೇಕಾದುದು ಅತಿ ಅವಶ್ಯವೆಂದು ಒತ್ತಿಹೇಳಿದರು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಕೆ.ಸಿದ್ದೇಗೌಡರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಶಾಖೆಯ ಅಧ್ಯಕ್ಷ ಬಿ.ತಾನೋಜಿರಾವ್ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಎಂ. ಶಿವಪ್ಪನವರು ಚಟುವಟಿಕೆ ಗಳ ಸಂಕ್ಷಿಪ್ತ ವರದಿಯನ್ನು ಮಂಡಿಸಿದರು. ಮಂಗಳೂರು ಶಾಸಕ ಶ್ರೀ ಯೋಗಿಶ್ ಭಟ್ ಅವರು ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು. ವಿವಿಧ ರಂಗಗಳಲ್ಲಿ ಅಮೋಘ ಸೇವೆ ಸಲ್ಲಿಸಿದ 7 ಮಂದಿ ನೌಕರರಿಗೆ ಸಭೆಯಲ್ಲಿ ಸನ್ಮಾನಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಎಂ.ಶಿವಪ್ಪನವರು ವಂದನೆ ಸಲ್ಲಿಸಿದರು.

ಬೇಡಿಕೆ ಈಡೇರಿಕೆಗೆ ಭರವಸೆ

ಗುಲ್ಬರ್ಗಾ: ಮೇ 23 ರಂದು ಜನವಾದಿ ಮಹಿಳಾ ಸಂಘಟನೆಯ ತಾರಫೈಲ್ ಮತ್ತು ರಾಮಜೀ ನಗರ ಘಟಕಗಳಿಂದ ನೀರು, ಮಹಿಳಾ ಶೌಚಾಲಯ, ಚರಂಡಿ ಮೇಲೆ ಮುಚ್ಚಳಿಕೆಯ ಬೇಡಿಕೆಗಳನ್ನಿಟ್ಟು ಖಾಲಿ ಕೊಡಗಳ ಮೆರವಣಿಗೆ ನಡೆಸಿ ಮಹಾನಗರ ಸಭೆಯ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಂಡು ಧರಣಿ ನಡೆಸಿರುವುದನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಈ ಸಂಚಿಕೆಯಲ್ಲಿ ಅವರ ಬೇಡಿಕೆ ಈಡೇರಿದ ವರದಿ ಇಲ್ಲಿದೆ.

ಸತತವಾಗಿ ಎರಡು ವರ್ಷಗಳಿಂದ ಮನವಿ ಪತ್ರ ಸಲ್ಲಿಸುವುದು, ಮೆರವಣಿಗೆ ನಡೆಸುವುದು ಹೀಗೆ ಹಂತ ಹಂತವಾಗಿ ಹೋರಾಟಗಳನ್ನು ನಡೆಸಿದ ಪ್ರತಿಫಲವಾಗಿ ರಾಮ್‌ಜೀ ಕೊಳಚೆ ಪ್ರದೇಶಕ್ಕೆ ಕುಡಿವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಇನ್ನುಳಿದ ಬೇಡಿಕೆಗಳನ್ನು ಸಂಬಂಧಪಟ್ಟ ಅಧಿಕಾರಿ ಮತ್ತು ಜನ ಪ್ರತಿನಿಧಿಗಳು ಮುಂದಕ್ಕೆ ತಳ್ಳುತ್ತಲೇ ಬಂದಿದ್ದರಿಂದ ಮೇ 12 ರಂದು ಬೃಹತ್ ಮೆರವಣಿಗೆ ನಡೆಸಿ ಮೇ 23 ರ ಒಳಗಾಗಿ ಬೇಡಿಕೆ ಈಡೇರಿಸಬೇಕು ಇಲ್ಲದಿದ್ದರೆ ಮಹಾನಗರ ಸಭೆಯ ಮುಂದೆ ಧರಣಿ ಖಚಿತ ಎಂದು ಜನವಾದಿ ಮಹಿಳಾ ಸಂಘಟನೆ ಎಚ್ಚರಿಸಿತ್ತು.

ಅಂತೆಯೇ ಮೇ 23 ರಂದು ನಡೆಸಿದ ಮಹಿಳೆಯರ ಧರಣಿ ದಿನಕಳೆದಂತೆ ಕಾವೇರತೊಡಗಿತು. ಮೇ 27 ರಂದು ಮಹಾನಗರ ಸಭೆಯ ಮುಖ್ಯ ದ್ವಾರವನ್ನು ಬಂದ್ ಮಾಡಲಾಯಿತು. ಪ್ರಾರಂಭದಿಂದಲೂ ಉಪಮೇಯರ್ ಮತ್ತು ಸಹಾಯಕ ಆಯುಕ್ತರು ಸಭೆ ಕರೆದು ಎರಡೂ ಬಡಾವಣೆಗಳಿಗೆ ತಲಾ 10 ಶೌಚಾಲಯ ಕೊಡುವುದಾಗಿ, ಧರಣಿ ಹಿಂತೆಗೆದುಕೊಳ್ಳಲು ಮನವಿ ಮಾಡಿದರು. ಕೇವಲ 10 ಶೌಚಾಲಯಗಳಿಗಾಗಿ ಇಲ್ಲಿವರೆಗೆ ಹೋರಾಟ ಮಾಡಿದ್ದೇವಾ? ಎಂದು ಪ್ರಶ್ನಿಸಿ ನೂರಾರು ಜನ ಮಹಿಳೆಯರು ಪಟ್ಟು ಹಿಡಿದು ಧರಣಿ ಮುಂದುವರಿಸಿದರು. ಅನಿವಾರ್ಯವಾಗಿ ಬೇಡಿಕೆಗಳ ಈಡೇರಿಕೆಗೆ ಸರಕಾರಿ ಅಧಿಕಾರಿಗಳು ಮನಸ್ಸು ಮಾಡಿ ತಾರಫೈಲ್ ಬಡಾವಣೆಯ ನೀರಿನ ವ್ಯವಸ್ಥೆಗಾಗಿ ಜೂನ್ 1 ರೊಳಗಾಗಿ ಪೈಪ್‌ಲೈನ್ ಹಾಕುವ ಕೆಲಸ ಪ್ರಾರಂಭಿಸಬೇಕೆಂದು ಜಿಲ್ಲಾಧಿಕಾರಿಗಳು ನಗರ ನೀರು ಸರಬರಾಜು ಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಆದೇಶಿಸಿದ್ದಾರೆ. ತಾರಫೈಲ್ ಮತ್ತು ರಾಮ್‌ಜಿ ನಗರಕ್ಕೆ ತಲಾ 50 ಶೌಚಾಲಯಗಳ ವ್ಯವಸ್ಥೆ ಮಾಡಿಸಲು ಒಪ್ಪಿಕೊಂಡು ಮಹಾನಗರ ಸಭೆಯ ಆಯುಕ್ತರು ಐದು ದಿನಗಳ ಗಡುವು ಪಡೆದು ಆಶ್ವಾಸನೆ ನೀಡಿದರು. 32 ಮೀಟರ್ ಉದ್ದದ 2 ಮೀಟರ್ ಅಗಲದ ದೊಡ್ಡ ಚರಂಡಿಯ ಮೇಲೆ ಮುಚ್ಚಳಿಕೆಗಾಗಿ (ಆರ್‌ಸಿಸಿ) 8 ಲಕ್ಷ ರೂಪಾಯಿಯ ಯೋಜನೆ ಮಾಡಿದ್ದು ಕೊಳಚೆ ಪ್ರದೇಶ ನಿವಾರಣಾ ಮಂಡಳಿಯಿಂದ ಜೂನ್ 15 ರೊಳಗೆ ಕೆಲಸ ಪ್ರಾರಂಭಿಸುವುದಾಗಿ ಕಾರ್ಯನಿರ್ವಾಹಕ ಅಭಿಯಂತರರು ಭರವಸೆ ನೀಡಿದ್ದಾರೆ. ಮತ್ತು ರಾಮ್‌ಜಿ ನಗರಕ್ಕೆ ಚರಂಡಿ ಹಾಗೂ ರಸ್ತೆಯ ಮೇಲೆ ಕಲ್ಲುಗಳನ್ನು ಹಾಸಲು ಒಪ್ಪಿಕೊಂಡು ಈ ಮೂವರೂ ಅಧಿಕಾರಿಗಳೂ ಧರಣಿ ಸ್ಥಳಕ್ಕೆ ಬಂದು ಆಶ್ವಾಸನೆ ನೀಡಿದ ತರುವಾಯ ಧರಣಿಯನ್ನು ಹಿಂತೆಗೆದು ಕೊಳ್ಳಲಾಯಿತು. ಜೂನ್ 15 ರೊಳಗಾಗಿ ಕೆಲಸಗಳನ್ನು ಪ್ರಾರಂಭಿಸದಿದ್ದಲ್ಲಿ ರಾಸ್ತಾರೋಕೋ ಮತ್ತು ಸಂಬಂಧಿಸಿದ ಜನಪ್ರತಿನಿಧಿ ಹಾಗೂ ಅಧಿಕಾರಿಗಳಿಗೆ ಘೆರಾವ್ ನಡೆಸುವುದಾಗಿ ಜೆಎಂಎಸ್ ತೀರ್ಮಾನಿಸಿದೆ.

ಕರ್ನಾಟಕದಲ್ಲಿ ಕಳೆದವಾರ

ಮೇ 30

□ಖ್ಯಾತ ಲೇಖಕಿ ಎಸ್.ಎಂ.ಕೆ.ಆರ್.ವಿ. ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾಗಿದ್ದ ಜಿ.ಸ. ಮಂಗಳ ನಿಧನ.

□ಕಾಂಗ್ರೆಸ್ ಪಕ್ಷದ ಜಿಲ್ಲಾ ಹಾಗೂ ಬ್ಲಾಕ್ ಸಮಿತಿಗಳಿಗೆ ನಡೆದ ಚುನಾವಣೆಗಳು ಪ್ರಜಾಸತ್ತಾತ್ಮಕವಾಗಿ ನಡೆದಿಲ್ಲ ಎಂದು ಕಾಂಗ್ರೆಸ್ ಕಾಸ ಕಾಂಗ ಪಕ್ಷದಲ್ಲಿ ಅಸಮಾಧಾನದ ಪ್ರತಿಧ್ವನಿ.

□ಕ್ರೀಡಾಕೂಟ ಪಾಸ್ ವ್ಯವಸ್ಥೆ ಪ್ರತಿಭಟಿಸಿ ದೂರದರ್ಶನದ ಇಂಜಿನಿಯರಿಂಗ್ ಸಿಬ್ಬಂದಿಯ ಹಠಾತ್ ಮುಷ್ಕರ.

ಮೇ 31

□ಹೊಳಲ್ಕೆರೆ ವಿಧಾನ ಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್(ಐ) ಅಭ್ಯರ್ಥಿ ಎನ್.ವೈ.ಗೋಪಾಲಕೃಷ್ಣರಿಗೆ 12107 ಮತಗಳ ಅಂತರದಿಂದ ಜಯ. ಜನತಾದಳಕ್ಕೆ ಮುಖಭಂಗ. ಬಿಜೆಪಿಗೆ ಠೇವಣಿ ನಷ್ಟ.

□ಪಿ.ಸಿ.ದಂತ ವೈದ್ಯ ಕಾಲೇಜಿನ ಹಗರಣದ ಪ್ರಾಥಮಿಕ ವಿಚಾರಣೆ ಸಿಬಿಐ ವಿಶೇಷ ಕೋರ್ಟಿನಲ್ಲಿ ಆರಂಭ.

□ರಾಜ್ಯ ಸರಕಾರದ ಒಡೆತನದಲ್ಲಿದ್ದ ಮೈಸೂರಿನ ವಿಕ್ರಾಂತ್ ಟೈರ್ಸ್ ಅಧಿಕೃತವಾಗಿ ಖಾಸಗಿ ವಲಯದ ಜೆ.ಕೆ.ಟೈರ್ಸ್ ವಶಕ್ಕೆ.

□ವಿವಾದಗಳ ನಡುವೆ ಬೆಂಗಳೂರಿನಲ್ಲಿ ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟ ಆರಂಭ.

ಜೂನ್ 1

□ಕೊಂಕಣ ರೈಲಿನ ಕರ್ನಾಟಕ ಭಾಗದ ರೈಲು ಸಂಚಾರ-ಮಂಗಳೂರಿನಿಂದ ಕಾರವಾರದ ಮೂಲಕ ಗೋವಾದ ಕಾಣಕೋಣದ ವರೆಗೆ - ಉದ್ಘಾಟನೆ.

□ರಾಷ್ಟ್ರೀಯ ಕ್ರೀಡಾಕೂಟದ ಮೊದಲ ದಿನ ನಿರ್ಧಾರವಾದ 9 ಸ್ವರ್ಣ ಪದಕಗಳಲ್ಲಿ ಕರ್ನಾಟಕಕ್ಕೆ ಎರಡು ಚಿನ್ನ, ಮಹಾರಾಷ್ಟ್ರ, ತಮಿಳುನಾಡು ಗಳಿಗೆ ತಲಾ ಮೂರು.

ಜೂನ್ 2

□ರಾಜ್ಯದ ಖಾಸಗಿ ಶಾಲೆಗಳಲ್ಲಿ ಇರುವ ಡೊನೇಶನ್ ಹಾವಳಿಯನ್ನು ತಡೆಯಲು ಸರಕಾರ ಯೋಜನೆಯೊಂದನ್ನು ಸಿದ್ಧಪಡಿಸಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

□ಖಾಸಗೀ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಮತ್ತು ಡಿಪ್ಲೊಮಾ ಸೀಟುಗಳ ಪೈಕಿ 20% ಮತ್ತು 25% ರಷ್ಟನ್ನು ಸರಕಾರಕ್ಕೆ ನೀಡುವ ನೀತಿಯನ್ನು ಪ್ರಸಕ್ತ ಸಾಲಿನಲ್ಲಿ ಜಾರಿಗೊಳಿಸುವುದಾಗಿ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು.

□ರಾಷ್ಟ್ರೀಯ ಕ್ರೀಡಾಕೂಟದ ಎರಡನೇ ದಿನ ಪದಕ ಪಟ್ಟಿಯಲ್ಲಿ ಕರ್ನಾಟಕ 8 ಚಿನ್ನಗಳೊಂದಿಗೆ ಮೊದಲ ಸ್ಥಾನದಲ್ಲಿ. ಕತ್ತಿವರಸೆ, ಕಯಾಕಿಂಗ್‌ನಲ್ಲಿ ಮೇಲುಗೈ.

ಜೂನ್ 3

□17 ಜಿಲ್ಲೆಗಳ 135 ತಾಲ್ಲೂಕುಗಳಲ್ಲಿ ಅರಣ್ಯ ಬೆಳೆಸುವ ಸಮಗ್ರ ಯೋಜನೆಯೊಂದು ಈ ವರ್ಷದಿಂದಲೇ ಜಾರಿಗೆ ಬರಲಿದ್ದು ಇದಕ್ಕೆ ಜಪಾನ್ 505 ಕೋಟಿ ರೂ. ನೆರವು ನೀಡಲಿದೆ ಎಂದು ಅರಣ್ಯ ಸಚಿವರು.

□'ಲೆಪ್ಟೋಸ್ಪಿರೋಸಿಸ್' ಎಂಬ ಹೊಸ ಮಾರಕ ಕಾಯಿಲೆ ರಾಜ್ಯಕ್ಕೆ ಕಾಲಿಟ್ಟಿರುವುದಾಗಿ ವರದಿ.

□ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಪದಕ ಪಟ್ಟಿಯಲ್ಲಿ ಕರ್ನಾಟಕದ ಅಗ್ರಸ್ಥಾನ ಮುಂದುವರಿಕೆ. ಮತ್ತೊಂದು ಚಿನ್ನ, ಒಟ್ಟು 27 ಪದಕಗಳು.

ಜೂನ್ 4

□ಬಂದೀಖಾನೆಯಲ್ಲಿ ಆಹಾರ ಪದಾರ್ಥಗಳ ಖರೀದಿಯಲ್ಲಿ ಅವ್ಯವಹಾರವಷ್ಟೇ ಅಲ್ಲ, ಔಷಧಿ ಖರೀದಿಯಲ್ಲೂ ಹಣದ ದುರುಪಯೋಗವಾಗಿರುವ ಪ್ರಕರಣ ಬೆಳಕಿಗೆ.

□ರಾಷ್ಟ್ರೀಯ ಕ್ರೀಡಾಕೂಟಕ್ಕೆ ಸೂಕ್ತವಾದ ಯೋಜನೆಯಿಲ್ಲದ ವೈದ್ಯರುಗಳನ್ನು ಕಳಿಸಿದ ಕಾರಣ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯರಿಲ್ಲದೆ ಶಸ್ತ್ರ ಚಿಕಿತ್ಸೆಗಳು ಸ್ಥಗಿತ.

□ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕರ್ನಾಟಕದ ಮುನ್ನಡೆಗೆ ತಡೆ. ದೆಹಲಿಯಿಂದ ತೀವ್ರ ಪೈಪೋಟಿ. ಎರಡು ತಂಡಗಳಿಗೂ ತಲಾ ಹದಿನಾಲ್ಕು ಚಿನ್ನದ ಪದಕಗಳು. ಆದರೆ ಒಟ್ಟು ಪದಕಗಳಲ್ಲಿ ಇನ್ನೂ ಕರ್ನಾಟಕ ಮೊದಲು.

ಜೂನ್ 5

□ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ನೀಗುವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗಿ 10 ಕೋಟಿ ರೂ. ಹೆಚ್ಚುವರಿಯೂ [illegible] 31 ಕೋಟಿ ರೂ. ತುರ್ತಾಗಿ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳ ಆದೇಶ.

□ರಾಷ್ಟ್ರೀಯ ಕ್ರೀಡಾ ಕೂಟದ [illegible] ಕರ್ನಾಟಕದ ಅಗ್ರಸ್ಥಾನ ಮುಂದುವರಿಕೆ - 19 ಚಿನ್ನ, ಒಟ್ಟು 58, ಒಟ್ಟು 42 [illegible] [illegible] ಎರಡನೇ ಸ್ಥಾನದಲ್ಲಿ.

ಸಿಪಿಐ(ಎಂ) ಬಯಸುವ ಅಧಿಕಾರ ಕೇವಲ ವಿವಿಧ ಅಧಿಕಾರಸ್ಥಾನಗಳನ್ನು ಅಲಂಕರಿಸಲಿಕ್ಕಲ್ಲ, ಅಧಿಕಾರವೆಂಬುದು ಸಿಪಿಐ(ಎಂ) ಮಟ್ಟಿಗೆ ಜನತೆಯು ಬಗೆಗಿರುವ ಜವಾಬ್ದಾರಿಗಳನ್ನು ನಿರ್ವಹಿಸಲು ನೀಡುವ ಶಕ್ತಿ ಎಂಬ ನಿಲುವನ್ನು ಹಿಂದಿನ ವಾರದ ಸಂಚಿಕೆಯಲ್ಲಿ ಓದಿರುವಿರಿ. ಪಶ್ಚಿಮ ಬಂಗಾಳದ ಎಡರಂಗ ಸರಕಾರ ಇದಕ್ಕೆ ಒಂದು ಉದಾಹರಣೆಯಾದರೆ ಕೇರಳದ ಎಲ್.ಡಿ.ಎಫ್. ಸರಕಾರ ಇದಕ್ಕೀಗ ಮತ್ತೊಂದು ಉದಾಹರಣೆ. ಕೇಂದ್ರ ಸರಕಾರ ಪೆಟ್ರೋಲ್ ಬೆಲೆ ಏರಿಸಿದಾಗ ಅದರ ಹೊರೆಯೆಲ್ಲಾ ಜನಸಾಮಾನ್ಯರ ಮೇಲೆ ಬೀಳದಂತೆ 100 ಕೋಟಿ ರೂ.ಗಳಷ್ಟು ಹೊರೆಯನ್ನು ತಾನೂ ಹೊತ್ತುಕೊಳ್ಳಲು, ಯೋಜನಾ ಪ್ರಕ್ರಿಯೆಯಲ್ಲಿ ಜನಸಾಮಾನ್ಯರನ್ನು ಒಳಗೊಳ್ಳುವ ವಿನೂತನ ಪ್ರಯೋಗ ನಡೆಸಿ ಎಲ್ಲರ ಗಮನ ಸೆಳೆದ ಎಲ್.ಡಿ.ಎಫ್. ಸರಕಾರ ಇತ್ತೀಚೆಗಷ್ಟೆ ತನ್ನ ಅಧಿಕಾರಾವಧಿಯ ಮೊದಲ ವರ್ಷ ಮುಗಿಸಿದೆ. ಇತ್ತೀಚೆಗೆ ನಡೆದ ಎರ್ನಾಕುಲಂ ಲೋಕಸಭಾ ಉಪ ಚುನಾವಣೆಯಲ್ಲಿ ವಿರೋಧಿಗಳ ನಿರೀಕ್ಷೆಗಳನ್ನು ಹುಸಿಗೊಳಿಸಿ ಎಲ್.ಡಿ.ಎಫ್. ಅಭ್ಯರ್ಥಿ ಗೆದ್ದಿರುವುದು ಈ ಸರಕಾರದ ಮೊದಲ ವರ್ಷದ ಕೆಲಸಗಳಿಗೆ ಜನಗಳಿಂದ ದೊರೆತ ಒಂದು ಬಹುಮಾನವೆನ್ನಬಹುದು. ಈ ಒಂದು ವರ್ಷದ ಅದರ ಕೆಲಸಗಳ ಸಿಂಹಾವಲೋಕನ ಈ ಲೇಖನ.

ಕೇರಳದ ಎಲ್.ಡಿ.ಎಫ್ ಸರಕಾರ

ಪರ್ಯಾಯ ದಾರಿಯಲ್ಲಿ ಸಾಗಿರುವ ಸರಕಾರ

ಒಂದು ವರ್ಷದ ಹಿಂದೆ ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗ(ಎಲ್.ಡಿ.ಎಫ್) ಅಧಿಕಾರ ವಹಿಸಿಕೊಂಡಾಗ ಅದರ ಮುಂದಿದ್ದ ಕಾರ್ಯಭಾರಗಳು ಮೂರು. ಒಂದು, ಕೋಮುವಾದಿ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಟ್ಟು ಕಾನೂನು ವ್ಯವಸ್ಥೆ, ಪರಿಸ್ಥಿತಿಯನ್ನು ಸಾಮಾನ್ಯ ಸ್ಥಿತಿಗೆ ತರುವುದು. ಎರಡು, ಆರ್ಥಿಕವನ್ನು ಪುನರುಜ್ಜೀವನಗೊಳಿಸುವುದು ಹಾಗೂ ಮೂರು, ಜನರಿಗೆ ವಿಶೇಷವಾಗಿ ದುರ್ಬಲ ವಿಭಾಗಗಳಿಗೆ ಸರಕಾರದ ಸಹಾಯ ಹಸ್ತ. ಕಳೆದ ಒಂದು ವರ್ಷದ ಕೆಲಸಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವ ಎಲ್.ಡಿ.ಎಫ್ ಸರಕಾರದ ಟೀಕಾಕಾರರೂ ಬಾಯಿಮುಚ್ಚಬೇಕಾಗಿ ಬರುತ್ತದೆ.

ಕೇರಳದಲ್ಲಿ ಶಾಂತಿ ಮತ್ತು ನಿರ್ಮಲ ವಾತಾವರಣ ಮತ್ತೆ ನೆಲೆಸಿದೆ. ಕೋಮುಗಲಭೆಗಳು ಸಾಮಾನ್ಯ ಎಂಬಂತಹ ಸ್ಥಿತಿ ಮಾಯವಾಗಿದೆ. ಕಳೆದ ಒಂದು ವರ್ಷದಲ್ಲಿ ಕೋಮುಗಲಭೆಗಳು ನಡೆಯಲಿಲ್ಲ, ಒಂದೇ ಒಂದು ಪೋಲೀಸ್ ಗೋಳೀಬಾರ್ ನಡೆ ಯಲಿಲ್ಲ, ಒಂದು ಹಂತದಲ್ಲಿ ಮತ್ತೊಮ್ಮೆ ಈ ರಾಜ್ಯ ಅಂತಹ ಗಲಭೆಗಳಿಗೆ ಸಿಲುಕಿ ಕೊಳ್ಳುವುದೇನೋ ಎಂಬ ಭಯ ಆವರಿಸಿತ್ತು. ಕೊಟ್ಟಾಯಂ ಜಿಲ್ಲೆಯಲ್ಲಿನ ಒಂದು ಸ್ಮಶಾನದ ಪ್ರಶ್ನೆಯ ಮೇಲೆ ಗಲಭೆ ಸೃಷ್ಟಿಸುವ ಪ್ರಯತ್ನ ನಡೆಯಿತು. ಆದರೆ ಸರಕಾರ ಆಡಳಿತ ಮಟ್ಟದಲ್ಲೂ, ರಾಜಕೀಯ ಮಟ್ಟದಲ್ಲೂ ಮಧ್ಯ ಪ್ರವೇಶಿಸಿದ ಪರಿಣಾಮವಾಗಿ ಆ ಪ್ರಶ್ನೆ ಇತ್ಯರ್ಥವಾಯಿತು. ಎ.ಕೆ.ಆಂಟನಿ ಮುಖ್ಯಮಂತ್ರಿಯಾಗಿದ್ದಾಗ ಎಳವಾ ಕೋಮಿನ ಪುಣ್ಯ ಕ್ಷೇತ್ರ ಶಿವಗಿರಿಯಲ್ಲಿ ಉಂಟಾದ ಗಂಭೀರ ಪರಿಸ್ಥಿತಿಯಂತಾಗಲಿಲ್ಲ.

ಹಿಂದಿನ ಯು.ಡಿ.ಎಫ್. ಸರಕಾರದ ಆಡಳಿತ ಕಾಲದಲ್ಲಿ ಅಖಿಲ ಭಾರತ ಅಪರಾಧ ದಾಖಲೆಗಳ ಬ್ಯೂರೋ ತಯಾರಿಸಿರುವ ಅತ್ಯಂತ ಹೆಚ್ಚು ಅಪಾಯ ಇರುವ ರಾಜ್ಯಗಳ ಪಟ್ಟಿಯಲ್ಲಿ ಕೇರಳದ ಹೆಸರೂ ಇತ್ತು. ಈಗ ಅದು ಬದಲಾಗಿದೆ. ಕೆಲವು ಅಂಕಿ-ಅಂಶಗಳು ಈ ಬದಲಾದ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಪ್ರತಿಭಟಿಸಿವೆ-ರಾಜಕೀಯ ತಿಕ್ಕಾಟಗಳ ಸಂಖ್ಯೆ 1995 ರಲ್ಲಿ 1129 ಇದ್ದದ್ದು 1996 ರಲ್ಲಿ 120 ಕ್ಕಿಳಿಯಿತು. ರಾಜಕೀಯ ಕೊಲೆಗಳ ಸಂಖ್ಯೆ 514 ರಿಂದ 370 ಕ್ಕಿಳಿಯಿತು. ವಿವಿಧ ಪೋಲೀಸು ಸ್ಟೇಷನುಗಳಲ್ಲಿ ದಾಖಲಾದ ಕೇಸುಗಳ ಸಂಖ್ಯೆಯಲ್ಲಿ 5000 ದಷ್ಟು ಇಳಿತವಾಯಿತು.

ಒಂದು ವರ್ಷದ ಹಿಂದೆ ಎಲ್.ಡಿ.ಎಫ್ ಸರಕಾರ ಅಧಿಕಾರ ವಹಿಸಿಕೊಂಡಾಗ ಕೂಡಲೇ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮತ್ತು ವಿಡಿಯೋಗ್ರಾಫರ್‌ನ್ನು ಇರಿದು ಕೊಲ್ಲಲಾಯಿತು. ಕೆಲವೇ ಗಂಟೆ ಗಳೊಳಗೆ ಈ ಹೀನ ಕೃತ್ಯ ಮಾಡಿದ ಅಪರಾಧಿಗಳನ್ನು ಸೆರೆ ಹಿಡಿಯ ಲಾಯಿತು. ಪೋಲೀಸರ ಒಂದು ವಿಭಾಗ ಮತ್ತು ಭೂಗತ ಕ್ರಿಮಿನಲ್‌ಗಳ ನಡುವಿನ ಕೂಟವನ್ನು ಮುರಿಯಲು ಎಲ್.ಡಿ.ಎಫ್. ಸರಕಾರ ಕಟಿ ಬದ್ಧವಾಗಿದೆ.ಎಂಬ ಸಂದೇಶ ಈ ಮೂಲಕ ಎಲ್ಲರಿಗೂ, ಪೋಲೀಸ್ ಪಡೆಗಳಿಗೂ ದೊರೆತಂತಾಯಿತು.

ಅವರು ಚುರುಕಾದರು. ಇದರಿಂದಾಗಿ ಸಮಾಜಘಾತುಕ ಚಟುವಟಿಕೆಗಳ ಕೇಂದ್ರಗಳಾಗಿ ಬೆಳೆಯುತ್ತಿದ್ದ ಕೇರಳದ ಹಲವು ನಗರಗಳು ಈಗ ಶಾಂತವಾಗಿವೆ.

ಗುಣಾತ್ಮಕ ಬದಲಾವಣೆ ಒಂದು ಉದಾಹರಣೆ

ಯು.ಡಿ.ಎಫ್. ಆಳ್ವಿಕೆಯ ಕಾಲದಲ್ಲಿ ಪೂಜಾಸ್ಥಳಗಳಲ್ಲಿ ಕಳ್ಳತನದ ಪ್ರವೃತ್ತಿ ಹೆಚ್ಚುವುದು ಕಂಡುಬಂದಿತ್ತು. ತ್ರಿಶೂರ್‌ನ ಮಾರ್ಥ ಮರಿಯಮ್ ಚರ್ಚ್‌ನಲ್ಲಿ ಹಾಗೂ ಊರಕೋಂ ದೇವಸ್ಥಾನದಲ್ಲಿ ಆದ ಕಳವು ಇಡೀ ಕೇರಳವನ್ನು ತಬ್ಬಿಬ್ಬುಗೊಳಿಸಿತು. ಯುಡಿಎಫ್ ಸರಕಾರ ಆ ಕಳ್ಳರನ್ನು ಹಿಡಿಯಲು ವಿಫಲಗೊಂಡಿತ್ತು. ಆದರೆ ಎಲ್.ಡಿ.ಎಫ್. ಸರಕಾರ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಕಳ್ಳರನ್ನು ಪತ್ತೆ ಹಚ್ಚಿ ಬಂಧಿಸಲಾಯಿತು. ಕಾನೂನು-ವ್ಯವಸ್ಥೆಯ ಪರಿಸ್ಥಿತಿಯಲ್ಲಿ ಕಂಡು ಬಂದ ಗುಣಾತ್ಮಕ ಬದಲಾವಣೆಗೊಂದು ಉದಾಹರಣೆಯಿದು.

ಸರಕಾರದ ಕಠಿಣ ಕ್ರಮಗಳಿಂದಾಗಿ ಮಹಿಳೆಯರ ಮೇಲೆ ಹಿಂಸಾಚಾರಗಳ ಪ್ರವೃತ್ತಿಯಲ್ಲೂ ಇಳಿಮುಖತೆ ಕಾಣುತ್ತಿದೆ. ಎಸ್.ಪಿ.ಹುದ್ದೆಯ ಒಬ್ಬ ಪೋಲೀಸ್ ಅಧಿಕಾರಿ ಮುಖ್ಯಸ್ಥರಾಗಿರುವ ಒಂದು ಮಹಿಳಾ ಸೆಲ್ ಅನ್ನು ರಚಿಸಲಾಗಿದೆ.

ಇತರ ರಾಜ್ಯಗಳಂತೆ ಕೇರಳ ಆರ್ಥಿಕದಲ್ಲೂ ಹಿಂದಿನ ಕಾಂಗ್ರೆಸ್(ಐ) ಸರಕಾರದ ಹೊಸ ಆರ್ಥಿಕ ನೀತಿಗಳಿಂದ ಜರ್ಝರಿತವಾಗಿತ್ತು. ಉದ್ದಿಮೆಗಳು ಮುಚ್ಚಿಹೋಗುತ್ತಿದ್ದವು. ಕೃಷಿ ಕ್ಷೇತ್ರದಲ್ಲಿ ಸ್ಥಗಿತತೆ, ಜತೆಗೆ ಕೊಲ್ಲಿ ಪ್ರದೇಶದಿಂದ ಕೆಲಸ ಕಳಕೊಂಡು ಮರಳಿದ ಸಾವಿರಾರು ಮಂದಿಯ ಪ್ರಶ್ನೆ. ಇವೆಲ್ಲಕ್ಕೂ ಕಿರೀಟವಿಟ್ಟಂತೆ ನಿಲ್ಲದ ಬೆಲೆಯೇರಿಕೆ. ಎಲ್.ಡಿ.ಎಫ್. ಸರಕಾರ ಮಧ್ಯ ಪ್ರವೇಶಿಸಲೇ ಬೇಕಾಯ್ತು. ಹಲವು ರೀತಿಯಲ್ಲಿ ಅದು ಮಧ್ಯ ಪ್ರವೇಶಿಸಿತು. ಸಾಕಷ್ಟು ಯಶಸ್ಸು ಪಡೆಯಿತು.

ಜನಗಳಿಗೆ ಸಹಾಯ ಹಸ್ತ

ಬೆಲೆಯೇರಿಕೆಯನ್ನು ಎದುರಿಸಿದ ರೀತಿಗೆ ಒಂದು ಉದಾಹರಣೆ ನೋಡಿ - ಸಂಯುಕ್ತ ಸರಕಾರವೂ ಹಿಂದಿನ ಸರಕಾರದ ನೀತಿಗಳನ್ನು ಮುಂದುವರೆಸಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ವಿಪರೀತವಾಗಿ ಏರಿಸಿತು. ಇದರಿಂದ ಕೇರಳದ ಜನ ತತ್ತರಿಸುವಂತಾಗುವುದು ಖಂಡಿತ. ಅದನ್ನು ತಪ್ಪಿಸಲು ರಾಜ್ಯ ಸರಕಾರವು ಕೈಗೊಳ್ಳಬೇಕಾದ ಕ್ರಮವನ್ನು ಎಲ್.ಡಿ.ಎಫ್. ಸರಕಾರ ಕೈಗೊಂಡಿತು. ಪೆಟ್ರೋಲಿಯಂ ಪದಾರ್ಥಗಳ ಬೆಲೆಯೇರಿಕೆಯಿಂದಾಗಿ ಅದರ ಮೇಲಿನ ಮಾರಾಟ ತೆರಿಗೆಯಲ್ಲಿನ ಹೆಚ್ಚಳದಿಂದ ರಾಜ್ಯ ಸರಕಾರಕ್ಕೆ ಪ್ರಯೋಜನವಾಗುತ್ತದೆ. ಆದರೆ ಇದರ ಪ್ರಯೋಜನವನ್ನು ಪಡೆಯದಿರಲು ಎಲ್.ಡಿ.ಎಫ್ ಸರಕಾರ ನಿರ್ಧರಿಸಿತು. ಮಾರಾಟ ತೆರಿಗೆಗಳನ್ನು ಇಳಿಸಿತು. ಇದರಿಂದ ರಾಜ್ಯ ಸರಕಾರಕ್ಕೆ 100 ಕೋಟಿ ರೂಗಳಷ್ಟು ಆದಾಯ ಕಮ್ಮಿಯಾಯಿತು. ಆದರೆ ಎಲ್ಲಾ ಜನ ವಿಭಾಗಗಳಿಗೆ ಇದರಿಂದ ಪ್ರಯೋಜನವಾಯಿತು.

ಕೇರಳದ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಥವಾ ರೇಶನ್ ವ್ಯವಸ್ಥೆ ಇಡೀ ದೇಶದಲ್ಲಿ ಅತ್ಯಂತ ದಕ್ಷ ವ್ಯವಸ್ಥೆಯೆಂದು ಹೆಸರು ಪಡೆದಿತ್ತು. ಆದರೆ ಹಿಂದಿನ ಯುಡಿಎಫ್ ಸರಕಾರದ ಆಳ್ವಿಕೆಯ ಕಾಲದಲ್ಲಿ ಅಲ್ಲೂ ಇತರ ರಾಜ್ಯಗಳ ಅದಕ್ಷತೆ, ಭ್ರಷ್ಟತೆ ತಲೆಹಾಕಿ ಅದು ಕುಸಿದು ಹೋಗುವಂತಾಯಿತು. ಆದರೆ ಎಲ್.ಡಿ.ಎಫ್. ಸರಕಾರ ಆ ಕುಸಿತವನ್ನು ತಡೆಯಲು ಆದ್ಯತೆ ನೀಡಿತು. ಅದನ್ನು ಬಲಗೊಳಿಸಲು ಕ್ರಮ ಕೈಗೊಂಡಿತು. ರಾಜ್ಯದಲ್ಲಿ ಸರಾಸರಿ ಅಕ್ಕಿಯ ಬಳಕೆ 2 ಲಕ್ಷ ಟನ್. ಇವಿಷ್ಟನ್ನೂ ರೇಶನ್ ವ್ಯವಸ್ಥೆಯ ಮೂಲಕವೇ ವಿತರಿಸಲಾಗುತ್ತಿದೆ. ಇತರ ಸಾಮಾಗ್ರಿಗಳನ್ನು ನಾಗರೀಕ ಪೂರೈಕೆ ಇಲಾಖೆಯ ಮೂಲಕ ಒದಗಿಸಲು ಸರಕಾರ ಕ್ರಮ ಕೈಗೊಂಡಿತು. ಈ ವರ್ಷ ಸಹಕಾರಿ ವಲಯದಲ್ಲಿ 1000 "ನೀತಿ" ಸ್ಟೋರ್‌ಗಳನ್ನು ತೆರೆದು ರೇಶನ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವ ಯೋಜನೆ ಹಾಕಲಾಗಿದೆ.

ಇವೆಲ್ಲಾ ಕ್ರಮಗಳ ಪರಿಣಾಮವಾಗಿ ಎಲ್.ಡಿ.ಎಫ್. ಆಳ್ವಿಕೆಯ ಮೊದಲ ಆರು ತಿಂಗಳಲ್ಲಿ ಸರಾಸರಿ ಬೆಲೆಯೇರಿಕೆಯ ಪ್ರಮಾಣ 9.3% ಕ್ಕಿಳಿಯಿತು. 1995 ರಲ್ಲಿ ಇದು 8.7% ಇತ್ತು.

ಆರ್ಥಿಕ ಪುನರುಜ್ಜೀವನದತ್ತ "ಜನತೆಯ ಯೋಜನೆ"

ಇಡೀ ದೇಶದ ಗಮನ ಸೆಳೆದಿರುವ ಎಲ್.ಡಿ.ಎಫ್. ಸರಕಾರದ ಒಂದು ಕ್ರಮವೆಂದರೆ "ಒಂಭತ್ತನೇ ಯೋಜನೆಗೆ ಜನತಾ ಆಂದೋಲನ" ಜತೆಗೆ ಆಡಳಿತದ ವಿಕೇಂದ್ರೀಕರಣ. ಸ್ಥಗಿತಗೊಂಡಿರುವ ರಾಜ್ಯದ ಆರ್ಥಿಕ ವನ್ನು ಪುನರುಜ್ಜೀವನ ಗೊಳಿಸುವಲ್ಲಿ ಇದು ಪ್ರಮುಖ ಹೆಜ್ಜೆಗಳು ಎಂದು ಎಲ್.ಡಿ.ಎಫ್. ಟೀಕಾಕಾರರೂ ಒಪ್ಪಿಕೊಳ್ಳುತ್ತಾರೆ.

ರಾಜ್ಯದ ಒಟ್ಟು ಯೋಜನೆಯ 36% ವನ್ನು ಸರಕಾರ ವಿಕೇಂದ್ರೀಕೃತ ಯೋಜನೆಗಾಗಿ ತೆಗೆದಿರಿಸಿದೆ. ಇದರ ಮೊತ್ತ 1028 ಕೋಟಿ ರೂ. ಈಗ ಗ್ರಾಮ ಪಂಚಾಯತುಗಳು, ಜಿಲ್ಲಾ ಪಂಚಾಯತುಗಳು, ನಗರ ಸಭೆಗಳು ತಮ್ಮ ತಮ್ಮ ಯೋಜನೆಗಳನ್ನು ಸಿದ್ಧಪಡಿಸುತ್ತಿವೆ. ಸರಕಾರದ ಈ 1028 ಕೋಟಿ ರೂಗಳೊಂದಿಗೆ ಈ ಸ್ಥಳೀಯ ಸಂಸ್ಥೆಗಳೂ ವಿವಿಧ ರೀತಿಗಳಲ್ಲಿ ತಮ್ಮದೇ ಸಂಪನ್ಮೂಲಗಳನ್ನು ಸಂಗ್ರಹಿಸುವ ಯೋಜನೆ ರೂಪಿಸುತ್ತಿದೆ. ಇದರಿಂದ ಉತ್ಪಾದನಾ ಹಾಗೂ ಸಾಮಾಜಿಕ ವಲಯಗಳಲ್ಲಿ ಹಣಹೂಡಿಕೆ ನಿರೀಕ್ಷೆಗಿಂತ ಬಹಳ ಹೆಚ್ಚಾಗುವ ಸಂಭವವಿದೆ.

ಸರಕಾರ ತೆಗೆದಿಟ್ಟ 1028 ಕೋಟಿ ರೂಗಳಲ್ಲಿ 30% ಕೃಷಿ ವಲಯಕ್ಕೆ ಹೋಗಲಿದೆ, 40% ಶಿಕ್ಷಣ, ಸಾರ್ವಜನಿಕ ಆರೋಗ್ಯ, ಇತ್ಯಾದಿ ಸಾಮಾಜಿಕ ವಲಯದ ಬಾಬ್ತುಗಳಿಗೆ ಇಡಲಾಗಿದೆ. ಸುಮಾರು 15% ಗ್ರಾಮೀಣ ಮೂಲ ಸೌಕರ್ಯಗಳ ಬೆಳವಣಿಗೆಗೆ ಹಾಗೂ ಉಳಿದ ಹಣ ಉತ್ಪಾದಕ ವಲಯಗಳಲ್ಲಿ ಹೂಡಿಕೆಗೆ.

ಇದು ಗ್ರಾಮೀಣ ಆರ್ಥಿಕವನ್ನು ಖಂಡಿತಾ ಬದಲಿಸುತ್ತದೆ, ಕೃಷಿ ವಲಯದಲ್ಲಿನ ಸ್ಥಗಿತತೆಯನ್ನು ನಿವಾರಿ ಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಎರಡನೇಯದಾಗಿ ಗ್ರಾಮೀಣ ಪ್ರದೇಶ ಗಳಲ್ಲಿ ಹೆಚ್ಚಿನ ಉದ್ಯೋಗವಕಾಶಗಳನ್ನು ಇದು ತೆರೆಯಲಿದೆ. ಹೀಗೆ ಆರ್ಥಿಕ ಪುನರುಜ್ಜೀವನದತ್ತ ದೃಢ ಹೆಜ್ಜೆ ಇದರ ಮುಖ್ಯ ಉದ್ದೇಶ. ಇಲ್ಲಿ ಒಂದು ಅಂಶವನ್ನು ಗಮನಿಸ ಬಹುದು. ಕೇವಲ ಸ್ಥಳೀಯ ಸಂಸ್ಥೆಗಳ ಮೂಲಕ ಒಂಭತ್ತನೇ ಯೋಜನೆಗೆ ತೆಗೆದಿರಿಸಿದ ಹಣವೇ 6000 ಕೋಟಿ ರೂ.ಗಳು. ಇದು ಎಂಟನೇ ಯೋಜನೆಯಲ್ಲಿ ಇಡೀ ರಾಜ್ಯದ ಒಟ್ಟು ಯೋಜನಾ ಗಾತ್ರದಷ್ಟು.

ಘನ ಕೈಗಾರಿಕೆಗಳಲ್ಲಿ ಮೂರು ಆದ್ಯತೆಗಳು

ಮೇಲಿನವು ಕೇವಲ ವಿಕೇಂದ್ರೀಕೃತ ಯೋಜನೆಯಲ್ಲಿ ಬರುವಂತವು. ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳ ವಲಯ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇಲ್ಲಿ ರಾಜ್ಯ ಸರಕಾರವೇ ನೇರವಾಗಿ ಮುತುವರ್ಜಿ ವಹಿಸಬೇಕು. ಇದರಲ್ಲಿ ಎಲ್.ಡಿ.ಎಫ್. ಸರಕಾರ ಮೂರು ಆದ್ಯತೆಗಳನ್ನಿಟ್ಟುಕೊಂಡಿದೆ. ಒಂದು, ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬಲಪಡಿಸುವುದು, ಎರಡು, ಸಣ್ಣ ಉದ್ದಿಮೆ ವಲಯದಲ್ಲಿ ಕೆಲವು ಕ್ರಮಗಳು ಹಾಗೂ ಮೂರು, ಸಾಂಪ್ರದಾಯಿಕ ಉದ್ದಿಮೆಗಳ ಪುನರುಜ್ಜೀವನ.

ಹೊಸ ಆರ್ಥಿಕ ನೀತಿಗಳಿಂದಾಗಿ ಮುಚ್ಚಿಹೋದ ಹಲವು ಉದ್ದಿಮೆಗಳನ್ನು ಎಲ್.ಡಿ.ಎಫ್. ಸರಕಾರ ತೆರೆದಿದೆ. ಕೇರಳ ಸೋಪ್ಸ್ ಅಂಡ್ ಆಯಿಲ್, ಉಕ್ಕು ಸಂಕೀರ್ಣ, ಕೆಲ್ಟ್ರಾನ್ ಇತ್ಯಾದಿಗಳು ಈಗ ಮತ್ತೆ ಕೆಲಸ ಮಾಡಲಾರಂಭಿಸಿವೆ. ಹಲವು ಉದ್ದಿಮೆಗಳಲ್ಲಿ ಉತ್ಪಾದಕತೆ ಹೆಚ್ಚಿದೆ.

ಗೇರುಬೀಜ, ನಾರು ಉದ್ದಿಮೆಗಳು ಕೇರಳ ಸಾಂಪ್ರದಾಯಿಕ ಉದ್ದಿಮೆಗಳು. ಗೇರುಬೀಜ ಕಾರ್ಖಾನೆಯ ಉತ್ಪಾದನೆ ಕಳೆದ ಐದು ವರ್ಷಗಳಲ್ಲಿ ಎಂದೂ ಮಾಡದಷ್ಟು ಕೆಲಸ ಮಾಡಿವೆ. ನಾರು ಉದ್ದಿಮೆಯನ್ನು ಆಧುನೀಕರಿಸಲಾಗುತ್ತಿದೆ. ಕೈಮಗ್ಗ ಉದ್ದಿಮೆಯನ್ನು ಸುಸಂಘಟಿತಗೊಳಿಸಲಾಗುತ್ತಿದೆ. ಸಣ್ಣ ಉದ್ದಿಮೆ ವಲಯದಲ್ಲಿ ಕಳೆದ ಒಂದು ವರ್ಷದಲ್ಲಿ 16111 ಉದ್ದಿಮೆಗಳು ರಿಜಿಸ್ಟರಾಗಿದ್ದು 63089 ಉದ್ಯೋಗವಕಾಶಗಳು ತೆರೆದಿವೆ.

ವಿದ್ಯುತ್ ಪರಿಸ್ಥಿತಿ ಕೇರಳದಲ್ಲೂ ಈಗಲೂ ಉತ್ತಮವೇನಿಲ್ಲ. ಆದರೆ ಈ ಒಂದು ವರ್ಷದಲ್ಲಿ ಎಲ್.ಡಿ.ಎಫ್. ಸರಕಾರ ಅದನ್ನು ಮೂರು ವರ್ಷಗಳಲ್ಲಿ ಸುಧಾರಿಸಲು ಕ್ರಮ ಆರಂಭಿಸಿದೆ. 210 ಮೆ.ವಾ. ವಿದ್ಯುತ್ ಪೂರೈಸುವ ಎರಡು ಯೋಜನೆಗಳು ಒಂದೆರೆಡು ತಿಂಗಳುಗಳಲ್ಲಿಯೇ ಕಾರ್ಯಾರಂಭ ಮಾಡಲಿವೆ. 18 ವರ್ಷಗಳ ಹಿಂದೆ ಆರಂಭಿಸಿ ನಿಂತ 50 ಮೆ.ವಾ. ಕಕ್ಕರ್ ಯೋಜನೆಯನ್ನು ಮಾರ್ಚ್ 1998 ರಲ್ಲಿ ಕಾರ್ಯಾರಂಭ ಮಾಡುವಂತೆ 350 ಮೆ.ವಾ. ಸಾಮರ್ಥ್ಯದ ಕಾಯಂಕುಳಂ ತಾಪ ವಿದ್ಯುತ್ ಯೋಜನೆ ಮತ್ತೆ ಕೆಲಸ ಮಾಡುವಂತೆ ಕ್ರಮ ಕೈಗೊಳ್ಳಲಾಗಿದೆ. ಕೊಚ್ಚಿನ್ ರಿಫೈನರೀಸ್ 500 ಮೆ.ವಾ. ಸಾಮರ್ಥ್ಯಗಳ ಯೋಜನೆಯೊಂದನ್ನು ಆರಂಭಿಸಲಿದೆ.

ಇನ್ನು ದುರ್ಬಲ ಜನವಿಭಾಗಗಳಿಗಂತೂ ಎಲ್.ಡಿ.ಎಫ್. ಸದಾ ಹಲವು ಕಾರ್ಯಕ್ರಮಗಳನ್ನು ಹಿಂದೆಯೇ ಆರಂಭಿಸಿದೆ. ಈ ಬಾರಿಯೂ ಸರಕಾರದ ಕೆಲಸ ಕಾರ್ಯಗಳಲ್ಲಿ ಈ ವಿಭಾಗಗಳಿಗೇ ಹೆಚ್ಚು ಪ್ರಯೋಜನ ದೊರೆಯುವಂತಹ ಕೆಲಸಗಳಾಗಿವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಕೃಷಿ ಕೂಲಿಕಾರರಿಗೆ, ಕೈಮಗ್ಗ ಕಾರ್ಮಿಕರಿಗೆ, ಗೇರುಬೀಜ, ನಾರು ಉದ್ದಿಮೆ ಮುಂತಾದವುಗಳಲ್ಲಿನ ಕಾರ್ಮಿಕರಿಗೆ ಪೆನ್ಶನ್ ಯೋಜನೆಗಳು ಈಗಾಗಲೇ ಇದ್ದು, ಅದರ ಮೊತ್ತವನ್ನು ಹೆಚ್ಚಿಸಲಾಗಿದೆ. ನಿರುದ್ಯೋಗ ಭತ್ಯೆಯನ್ನು ನಿಯಮಿತವಾಗಿ ಹಂಚಲು ಕ್ರಮ ಕೈಗೊಳ್ಳಲಾಗಿದೆ. ಬಾಕಿ ಕೊಡ ಬೇಕಾದ ಹಣಗಳ ವಿಲೇವಾರಿಯಾಗಿ, ಅಂಗನವಾಡಿ ಅಧ್ಯಾಪಕರಿಗೆ, ಹೆಲ್ಪರು ಗಳಿಗೆ ಕೊಡುವ ಹಣದ ಮೊತ್ತ ಹೆಚ್ಚಿಸಲಾಗಿದೆ. ಇದಲ್ಲದೆ ಆರಂಭದಲ್ಲಿ ಹೇಳಿದಂತಹ ವಿಶಿಷ್ಟ ಬೆಲೆಯೇರಿಕೆ ತಡೆ ಕ್ರಮಗಳು ದುರ್ಬಲ ಜನ ವಿಭಾಗಗಳಿಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರ ಒದಗಿಸಿವೆ. ರಾಜ್ಯ ಸರಕಾರ ಬಹಳಷ್ಟು ಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ. ಹಣ ಕಾಸು ಸ್ಥಿತಿ ತೃಪ್ತಿಕರವಾಗಿಲ್ಲ, ಆದ್ದರಿಂದ ಜನಗಳ ಸಮಸ್ಯೆಗಳನ್ನೆಲ್ಲಾ ಒಮ್ಮೆಲೇ ಪರಿಹರಿಸಲಾಗುತ್ತಿಲ್ಲ ಎಂಬ ಅರಿವು ಎಲ್.ಡಿ.ಎಫ್. ಸರಕಾರಕ್ಕಿದೆ. ಆದರೆ ದೀರ್ಘಕಾಲದ ಯೋಜನೆಗಳನ್ನು ಪೂರ್ಣಗೊಳಿಸುವವರೆಗೆ ಕಾಯಿರಿ ಎಂದು ಹೇಳುವುದು ಸರಿಯಲ್ಲ ಎಂಬ ಅರಿವೂ ಅದಕ್ಕಿದೆ. ರಾಜ್ಯದ ಅಭಿವೃದ್ಧಿ, ಬಡ ವಿಭಾಗಗಳಿಗೆ ನೆರವು ಈ ಎರಡು ಮೂಲಭೂತ ನೀತಿಗಳಿಗೆ ಕಟಿಬದ್ಧವಾಗಿದ್ದು ಆ ದಿಕ್ಕಿನಲ್ಲಿ ಎಲ್.ಡಿ.ಎಫ್. ಸರಕಾರ ಕಳೆದ ಒಂದು ವರ್ಷದಲ್ಲಿ ಸಾಗಿದೆ ಎಂದು ವೀಕ್ಷಕರು ಅಭಿಪ್ರಾಯ ಪಡುತ್ತಾರೆ.

ಈಗ ಟಾಟಾ ಘರ್ಜನೆ

ಭಾರತದ ದೊಡ್ಡ ಬಂಡವಾಳಿಗ ವರ್ಗ ಹೇಗೆ ಯಾವತ್ತೂ ತನ್ನ ಲಾಭಕ್ಕಾಗಿ ಮಾತ್ರ ಹೋರಾಡುತ್ತದೆ, ಯಾವತ್ತೂ ತನ್ನ ಲಾಭವೇ ದೇಶದ ಲಾಭ ಎಂದು ಹೇಳುತ್ತದೆ ಎಂಬುದಕ್ಕೆ ಇದು ದೊಡ್ಡ ನಿದರ್ಶನ. ಬಹುರಾಷ್ಟ್ರೀಯ ಕಂಪನಿಗಳು ಭಾರತದೊಳಕ್ಕೆ ಬರುವುದರಿಂದ ಉದ್ಯೋಗಗಳ ನಷ್ಟವಾಗುತ್ತದೆ, ಬಡತನ ಹೆಚ್ಚಾಗುತ್ತದೆ ಎಂದರೆ ಇದು ಸುಳ್ಳೆಂದು ಈ ಬಂಡವಾಳಿಗರು ಮತ್ತು ಅವರ ಸಿದ್ಧಾಂತಿಗಳು ವಾದಿಸಿದ್ದರು.

ಈ ನಡುವೆಯೇ ಮುಂಬೈ ಕ್ಲಬ್ ಎಂಬ ಬಂಡವಾಳಿಗರ ಒಳ ಗುಂಪೊಂದು ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಧ್ವನಿಯೆತ್ತಿದರು. ಅದು ದೊಡ್ಡ ಸುದ್ದಿಯಾದರೂ ಪರಿಣಾಮ ಅಂತಹ ದೊಡ್ಡದೇನೂ ಆಗಲಿಲ್ಲ.

ಈಗ ನೋಡಿ ರತನ್‌ಟಾಟಾ ಎಂಬ ಟಾಟಾ ಗುಂಪಿನ ಕಂಪನಿಗಳ ಅಧ್ಯಕ್ಷ ಒಮ್ಮಿಂದೊಮ್ಮೆಲೆ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಘರ್ಜನೆ ಮಾಡಿದ್ದಾರೆ. ಈತನ ಪ್ರಕಾರ ದೇಶೀ ಕಂಪನಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸಹಯೋಗ ಇರುವಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಕಂಪನಿಗಳ ಜೊತೆಗೆ ಬಹಳ ಕೆಟ್ಟದಾಗಿ ನಡೆದುಕೊಳ್ಳುತ್ತವೆಂದು ಹೇಳಿದ್ದಾನೆ. ಈತನ ಮಾತುಗಳಲ್ಲೇ ಹೇಳುವುದಾದರೆ "ದುರಾದೃಷ್ಟವೇನೆಂದರೆ ಹೆಚ್ಚಿನ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಆಸ್ತಿ, ಜವಾಬ್ದಾರಿ ತಖ್ತೆಯಿಂದಲೇ ಪ್ರೇರೇಪಣೆ ಪಡೆಯುತ್ತವೆ. ಬಹಳ ಸಾರಿ ಅವರು ಈ ಸಹಯೋಗದಲ್ಲಿ ಶೇ 51 ರಷ್ಟು ಪಾಲು ಹೊಂದಲು ಶತಾಯ ಗತಾಯ ಪ್ರಯತ್ನ ಮಾಡುತ್ತಾರೆ. ಇದು ನನ್ನ ದೃಷ್ಟಿಯಲ್ಲಿ ಅನೈತಿಕವಾದದ್ದು. ಯಾಕೆಂದರೆ ಅವರು ಸಹಯೋಗದಲ್ಲಿ ಬರೀ ಶೇ 40 ರಷ್ಟು ಪಾಲಿದ್ದರೆ ಸಾಕೆಂದು ಬಂದವರು.

ಹಾಗೆ ಬಹುರಾಷ್ಟ್ರೀಯ ಕಂಪನಿಗಳು ವಾಮನಾವತಾರಿಗಳೆಂಬುದರಲ್ಲಿ ಸಂಶಯವೇನಿಲ್ಲ. ಇಡೀ ಜಗತ್ತಿನ ಮೇಲೆ ಹಿಡಿತ ಸಾಧಿಸಿ ಲಾಭ ಲಾಭ ಲಾಭ ಎಂದು ಯಾವತ್ತೂ ಕೂಗುತ್ತಲೇ ಇರುವ ಅಭ್ಯಾಸ ಅವರದು. ಭಾರತಕ್ಕೆ ಬಂದು ನಿಮ್ಮ ಪಾಲನ್ನು ಶೇ 40 ಕ್ಕೆ ಸೀಮಿತಗೊಳಿಸಿ ಎಂದು ಹೇಳಿದರೆ ಒಪ್ಪಿಯಾರೆ? ಖಂಡಿತ ವಾಗಿಯೂ ಇಲ್ಲ. ನಮ್ಮ ಭಾರತೀಯ ಕಂಪನಿಗಳಿಗೆ ಬಹು ರಾಷ್ಟ್ರೀಯ ಕಂಪನಿಗಳ ಅನೈತಿಕ ವರ್ತನೆಗಳ ಹೆಚ್ಚಿನ ಪರಿಚಯ ಆಗೇ ಆಗುತ್ತದೆ. ಮುಂಬರುವ ದಿನಗಳಲ್ಲಿ ಅದರ ಈ ದೃಷ್ಟಿಯನ್ನು ಆಡಳಿತದಲ್ಲಿರುವ ಸರಕಾರವೂ ಹೊಂದಿರ ಬೇಕು. ಯಾಕೆಂದರೆ ಮರುದಿನವೇ ವಿದೇಶೀ ಹೂಡಿಕೆಗಳನ್ನು ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳು ಮಾಡುವ ಹೂಡಿಕೆಯನ್ನೂ ಇನ್ನೂ ಬಿಗಿಯಾಗಿ ಪರಿಶೀಲಿಸಲಾಗುವುದು ಎಂದು ಸರಕಾರ ಘೋಷಿಸಿದೆ. ಇಷ್ಟರ ಮಟ್ಟಿಗೆ ಇದು ಸಕಾರಾತ್ಮಕ ಬೆಳವಣಿಗೆಯೇ ಸರಿ. ಆದರೆ ಇದು ಬಂಡವಾಳಿಗರ ಸ್ವಂತ ಲಾಭಕ್ಕಾಗಿ ಬಂದದ್ದು. ಆಳುವ ವರ್ಗದ ಹಿತಾಸಕ್ತಿಗಳನ್ನು ಕಾಯುವುದಕ್ಕಾಗಿ ಮಾತ್ರ ಬಂದದ್ದು. ದುಡಿವ ಜನರ ಮತ್ತು ದೇಶದ ಜನಸಾಮಾನ್ಯರ ಪರವಾಗಿ ಮೂಡಿ ಬಂದದ್ದಲ್ಲ ಎಂಬುದನ್ನು ಗಮನಿಸ ಬೇಕಾಗುತ್ತದೆ.

ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಣಿ

ಪ್ರಪಂಚವಾಳಬೇಕಾದವರು ಗ್ರಾಮ ಆಳಲು

ಭಾರತ ಉಕ್ಕು ಪ್ರಾಧಿಕಾರ ಎಂಬುದು ಭಾರತ ಸರಕಾರದ ಸ್ವಾಮ್ಯದ ಬಹುದೊಡ್ಡ ಉಕ್ಕು ಉದ್ದಿಮೆ. ಕಳೆದ ವರ್ಷ ಬಹುದೊಡ್ಡ ಲಾಭ ಗಳಿಸಿದ ಈ ಸಂಸ್ಥೆ ಈ ವರ್ಷ ನೆಲ ನೋಡುವ ಪ್ರಸಂಗ ಬಂದೊದಗಿದೆ. ಕೇಂದ್ರ ಸರಕಾರದ ಉದ್ದಿಮೆ ಹೀಗಾಗಿದೆ ಎಂದರೆ ಸರಕಾರದ ಪಾತ್ರವೂ ಇದರಲ್ಲಿ ದೊಡ್ಡದು ಎಂಬುದು ಸ್ಪಷ್ಟ. ಸಂಯುಕ್ತ ರಂಗ ಸರಕಾರದ ಬಜೆಟ್ ಮತ್ತು ಆಮದು ರಫ್ತು ನೀತಿಗಳು ಈ ಪ್ರಾಧಿಕಾರಕ್ಕೆ ಮರ್ಮಾಂತರ ಪೆಟ್ಟು ನೀಡಿವೆ ಎಂಬುದು ಸ್ಪಷ್ಟ.

ದೊಡ್ಡ ಪ್ರಮಾಣದ ಲಾಭಗಳಿಸಿದ ಉಕ್ಕು ಪ್ರಾಧಿಕಾರ ಮುಂದಿನ ಐದು ವರ್ಷಗಳಲ್ಲಿ 15000 ಕೋಟಿ ರೂಪಾಯಿಗಳನ್ನು ವಿಸ್ತರಣೆಗಾಗಿ ಹೂಡುವ ಯೋಜನೆಯನ್ನು ರೂಪಿಸಿತ್ತು. ಈಗ ಈ ಯೋಜನೆ ಮೂಲೆಗುಂಪಾಗಿದೆ. ಭಾರತದೊಳಕ್ಕೆ ತನಗಿರುವ ವ್ಯವಹಾರವನ್ನು ಉಳಿಸಿಕೊಳ್ಳುವುದೇ ಕಷ್ಟವಾಗಿರುವ ಈ ಸಂಸ್ಥೆ ನಿಜಕ್ಕೂ ಕಷ್ಟದಲ್ಲಿದೆ.

ಈ ಶತಮಾನದ ಕೊನೆಯ ವೇಳೆಗೆ 17 ದಶಲಕ್ಷ ಟನ್ನುಗಳಷ್ಟು ಉಕ್ಕು ಉತ್ಪಾದಿಸುವ ಗುರಿ ಹೊಂದಿದ್ದ ಇದು ಈಗ ಈ ಗುರಿಯನ್ನು ಕೈ ಬಿಡುವಂತಾಗಿದೆ.

ಯಾವುದೇ ದೇಶದ ಔದ್ಯಮೀಕರಣದಲ್ಲಿ ಉಕ್ಕು ಬಹಳ ಮುಖ್ಯವಾದ ವಸ್ತು. ಇದು ಔದ್ಯಮೀಕರಣಕ್ಕೆ ಮೂಲ ದ್ರವದಂತೆ. ಆದ್ದರಿಂದ ತೀವ್ರ ಅಭಿವೃದ್ಧಿ ಬಯಸುವ ದೇಶದ ಉಕ್ಕು ಉದ್ದಿಮೆ ಬಹಳ ಮಜಬೂತಾಗಿರಬೇಕು. ಈಗ ಭಾರತದ ಉಕ್ಕು ಉದ್ದಿಮೆಯಲ್ಲಿ ಭಾರತ ಉಕ್ಕು ಪ್ರಾಧಿಕಾರ ಬಹಳ ಮುಖ್ಯವಾದ ಪಾತ್ರದಾರಿ ಎಂಬುದನ್ನು ಒಪ್ಪಿಕೊಂಡರೆ ಇಂತಹ ಉದ್ದಿಮೆಯೇ ಲಾಭದಲ್ಲಿ ಕಡಿತ ಕಂಡರೆ ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ದೇಶದಲ್ಲಿ ಉಕ್ಕಿನ ಬೇಡಿಕೆ ಕುಸಿದದ್ದು ಇದಕ್ಕೆ ಒಂದು ಕಾರಣ ಎನ್ನಲಾಗುತ್ತಿದೆ. ಉದಾರೀಕರಣ ದೇಶವನ್ನು ಅವನತಿಯ ದಾರಿಯಲ್ಲೇ ಕೊಂಡೊಯ್ಯುತ್ತಿದೆ ಎಂಬುದು ಇದರಿಂದ ಇನ್ನೂ ಸ್ಪಷ್ಟವಾಗುತ್ತದೆ.

ಅತಿ ದೊಡ್ಡ ಹೂಡಿಕೆದಾರ ಅಮೆರಿಕಾ!

ಎಲ್ಲಿ?, ಭಾರತದಲ್ಲಿ. ಭಾರತದಲ್ಲಿ ಅತಿದೊಡ್ಡ ವಿದೇಶಿ ಹೂಡಿಕೆದಾರ ಅಮೆರಿಕ. ಅದಕ್ಕಾಗಿಯೇ ಅಮೆರಿಕ ರಾಯಭಾರಿಗಳು ಭಾರತದಲ್ಲಿ ಮಳೆ ಬಂದರೂ ಹೇಳಿಕೆ ನೀಡುತ್ತಾರೆ. ಬಾರದೇ ಇದ್ದರೂ ಹೇಳಿಕೆ ನೀಡುತ್ತಾರೆ, ಒತ್ತಡ ಹೇರುತ್ತಾರೆ, ಬೆದರಿಕೆ ಹಾಕುತ್ತಾರೆ - ಅಡ್ಡಾದಿಡ್ಡಿ ಮಾತನಾಡುತ್ತಾರೆ.

ಭಾರತದಲ್ಲಿ 1997 ರ ಜನವರಿಯಲ್ಲಿ ಅಮೆರಿಕ 2283.3 ಕೋಟಿ ಹೂಡಿಕೆದಾರ ನಾದರೆ ದಕ್ಷಿಣ ಕೋರಿಯಾದಲ್ಲಿ 1997 ರ ಜನವರಿಯಲ್ಲಿ 1678.8 ಕೋಟಿ ರೂಪಾಯಿಗಳಷ್ಟು ಹೂಡಿಕೆ ಮಾಡಿದೆಯಂತೆ. ಅಮೇರಿಕ 1991 ರ ಉದಾರೀಕರಣ ಬಂದ ನಂತರ ಭಾರತದಲ್ಲಿ ಅತಿ ಹೆಚ್ಚು ಹೂಡಿಕೆ ಮಾಡಿರುವ ದೇಶ.

ಪೆಟ್ರೋಲಿಯಂ ಬೆಲೆಗೆ ಸಿಪಿಐ(ಎಂ) ತಣ್ಣೀರು ಎಂಬ ಪುಕಾರು

ಬಂಡವಾಳಿಗ ಪತ್ರಿಕೆಗಳು ಉದ್ಯಮಿಗಳು ಈ ಪುಕಾರು ಮಾಡುತ್ತಿದ್ದಾರೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿ ಜನಸಾಮಾನ್ಯರ ಬೆನ್ನಿಗೆ ಹೊರೆ ಹೇರ ಬಯಸಿದ್ದ ಇವರಿಗೆ ಬಹಳ ನಿರಾಶೆಯಾದಂತಿದೆ. ಯಾಕೆಂದರೆ ಸಿಪಿಐ(ಎಂ) ಸಂಯುಕ್ತ ರಂಗದ ಚಾಲನಾ ಸಮಿತಿಯಲ್ಲಿ ಪೆಟ್ರೋಲಿಯಂ ಬೆಲೆ ಹೆಚ್ಚಳದ ವಿರುದ್ಧ ಧ್ವನಿಯೆತ್ತಿ ತೈಲಖಾತೆಯಲ್ಲಿನ ಕೊರತೆಗಳಿಗೆ ಹಿಂದಿನ ಸರಕಾರದ ಅಂದಾದುಂದಿ ಕ್ರಮಗಳು ಕಾರಣ ಮತ್ತು ಬೆಲೆ ಹೆಚ್ಚಿಸದೆ ಈ ಸಮಸ್ಯೆ ಪರಿಹರಿಸುವ ಪರ್ಯಾಯ ದಾರಿಗಳಿವೆ ಎಂದು ತೋರಿಸಿ ಕೊಟ್ಟಿದ್ದು ಬೆಲೆ ಏರಿಕೆಯನ್ನು ಸದ್ಯಕ್ಕಂತೂ ಮುಂದೂಡಿದೆ. ಇದಲ್ಲದೆ ಬಂಡವಾಳಿಗರು ನೈಸರ್ಗಿಕ ಅನಿಲದ ಬೆಲೆಗಳನ್ನು ಕಳೆದ ಎಂಟು ವರ್ಷಗಳಲ್ಲಿ ಏರಿಸಿಯೇ ಇಲ್ಲ, ಆದ್ಯತೆಯ ಉದ್ದಿಮೆಗಳಿಗೆ ನೀಡಿದ ರಿಯಾಯಿತಿ ಸರಿ ಆದರೆ ಆದ್ಯತೆಯವಲ್ಲದ ಉದ್ದಿಮೆಗಳಿಗೆ ನೀಡಿದ್ದು ತಪ್ಪು ಆದ್ದರಿಂದ ಈ ಅನಿಲದ ಬೆಲೆಯನ್ನು ಆದ್ಯತೆ ಉದ್ಯಮವಲ್ಲದ್ದಕ್ಕೆ ಹೆಚ್ಚಿಸಬೇಕು ಎಂದು ಕೇಳಿವೆ.

ಸಿಪಿಐ(ಎಂ)ನಿಂದಾಗಿ ಬೆಲೆಯೇರಿಕೆಯ ಭಯಂಕರ ಹೊರೆಯಂತೂ ದೇಶದ ಜನಸಾಮಾನ್ಯರ ಹೆಗಲಿಗೆ ಬರುವುದು ಮುಂದಕ್ಕೆ ಹೋಗಿದೆ.

ಜನ ವಿರೋಧಿಗಳಿಗೆ ಇದರಿಂದ ಸಿಟ್ಟು ಬರದೇ ಇದ್ದೀತೆ?

ಬರಲಿದೆ ರೂಪಾಯಿಯ ಪೂರ್ಣ ಪರಿವರ್ತನೀಯತೆ

ರೂಪಾಯಿಯ ಪೂರ್ಣ ಪರಿವರ್ತನೀಯತೆ ಉದಾರೀಕರಣ ದೊಂದಿಗೆ ಪ್ರಾರಂಭವಾಯಿತು. 1992 ರಲ್ಲಿ ಭಾಗಶಃ ಪರಿವರ್ತನೀಯತೆ ತಂದ ಸರಕಾರ ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ ತರುವ ತಯಾರಿ ಮಾಡುತ್ತಲೇ ಇತ್ತು. ಆದರೆ ಅಭಿವೃದ್ಧಿಶೀಲ ದೇಶವಾದ ಭಾರತ ಪೂರ್ಣ ಪರಿವರ್ತನೀಯತೆ ತಂದರೆ ಅದರಿಂದಾಗುವ ದುಷ್ಪರಿಣಾಮಗಳು ಹಲವು.

ಭಾರತೀಯ ರಿಸರ್ವ್ ಬ್ಯಾಂಕ್ ಈ ವಿಷಯವನ್ನು ಪೂರ್ತಿಯಾಗಿ ಅಭ್ಯಸಿಸಿ ಶಿಫಾರಸ್ಸುಗಳನ್ನು ನೀಡಲಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಉಪಗವರ್ನರ್ ಶ್ರೀ ಎಸ್.ಎಸ್.ತಾರಾಪುರೆಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತ್ತು. ಈಗ ಸಮಿತಿ ತನ್ನ ವರದಿ ನೀಡಿದೆ.


ಮೂರು ಹಂತಗಳಲ್ಲಿ 1999-2000 ರ ವೇಳೆಗೆ ಪೂರ್ಣ ಪರಿವರ್ತನೀಯತೆ ತರಬೇಕೆಂದು ಈ ಸಮಿತಿ ಶಿಫಾರಸು ಮಾಡಿದೆ.

ಡಾಲರಿನ ಯಜಮಾನಿಕೆಯನ್ನು ತರುವ ಈ ಪರಿವರ್ತನೀಯತೆ ರಾಷ್ಟ್ರದ ಆರ್ಥಿಕದ ಮೇಲೆ ಹಲವು ದುಷ್ಪರಿಣಾಮ ಬೀರುವುದೆಂದು ಆಗಲೇ ಹಲವು ತಜ್ಞರು ಹೇಳಿದ್ದಾರೆ. ಸಾಮ್ರಾಜ್ಯ ಶಾಹಿಗಳ ಲಾಭಕ್ಕಾಗಿ ಈ ಪೂರ್ಣ ಪರಿವರ್ತನೀಯತೆಯಂತೂ ಬರುವಂತೆ ಕಾಣುತ್ತದೆ.

ಭಾರತ ಮತ್ತು ನೇಪಾಳದಲ್ಲಿನ ರಾಜಕೀಯ ಬೆಳವಣಿಗೆಗಳು

ಸಮಾಜವಾದದತ್ತ ಮುನ್ನಡೆಯ ಪ್ರಕ್ರಿಯೆ ಮತ್ತೆ ಪ್ರಾರಂಭವಾಗಿರುವುದರ ಸಂಕೇತ

– ಇಂ.ಎಂ.ಎಸ್.



ಸಮಾಜವಾದ ಸತ್ತಿತು, ಮಾರ್ಕ್ಸ್‌ವಾದ ಅಪ್ರಸ್ತುತ ಎಂದೆಲ್ಲಾ ಅಮೆರಿಕಾದಿಂದ ಹಿಡಿದು ಅಡ್ವಾಣಿಯವರೆಗೆ ಹಲವರ ಆರ್ಭಟದ ಸದ್ದು ಅಡಗುವ ಮೊದಲೇ ನೇಪಾಳ ಮತ್ತು ಭಾರತದಲ್ಲಿ ಸರಕಾರಗಳ ಉಳಿವು-ಅಳಿವಿನಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳ ನಿರ್ಣಾಯಕ ಪಾತ್ರ, ಐತಿಹಾಸಿಕ ಸತ್ಯವೊಂದನ್ನು ಕಾಣಲಾರದ ಈ ಕಮ್ಯುನಿಸ್ಟ್ ವಿರೋಧಿಗಳ ಕುರುಡುತನಕ್ಕೆ ಹಿಡಿದಿರುವ ಕನ್ನಡಿಯಾಗಿದೆ.

ಹಿಂದಿನ ಸೋವಿಯತ್ ಯೂನಿಯನ್ ಮತ್ತು ಇತರೆ ಪೂರ್ವ ಯುರೋಪ್‌ನ ಮಾಜಿ ಸಮಾಜವಾದಿ ರಾಷ್ಟ್ರಗಳಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯಿಂದಾಗಿ ಜಗತ್ತಿನ ಸಮಾಜವಾದ ಸತ್ತುಹೋಯಿತೆಂದು, ಮಾರ್ಕ್ಸ್‌ವಾದ-ಲೆನಿನ್‌ವಾದ ಸವಕಲಾಗಿದೆ ಎಂದು ಬಂಡವಾಳಶಾಹಿಗಳು ಹಾಗೂ ಸಾಮ್ರಾಜ್ಯಶಾಹಿಗಳು ಕೂಗಾಡಿದರು.

ಆದರೆ ಸಮಾಜವಾದ, ಮಾರ್ಕ್ಸ್‌ವಾದ-ಲೆನಿನ್‌ವಾದ ಸವಕಲಾಗಿಲ್ಲ ಎಂಬುದು ನಂತರದ ಅನುಭವಗಳಿಂದಲೇ ಸಿದ್ಧವಾಗಿದೆ. ಅವು ಹೊಸ ರೂಪದಲ್ಲಿ ಹೊಸ ಶಕ್ತಿಗೂಡಿಸಿಕೊಂಡು ಮುನ್ನಡೆಯುತ್ತಿರುವುದು ಈಗ ಕಣ್ಣೆದುರೇ ಇರುವ ಸತ್ಯ.

ಯುರೋಪಿಯನ್ ರಾಷ್ಟ್ರಗಳಲ್ಲಿ ಸಮಾಜವಾದಕ್ಕೆ ಹಿನ್ನಡೆಯುಂಟಾದರೂ ವಿಶ್ವದಲ್ಲಿ ಅಮೆರಿಕಾ ಖಂಡದಲ್ಲೂ ಒಂದರ ನಂತರ ಮತ್ತೊಂದು ಎಂಬಂತೆ ಬೇರೆ ಬೇರೆ ರಾಷ್ಟ್ರಗಳಲ್ಲಿ ಸಮಾಜವಾದಿ ಶಕ್ತಿಗಳು ಎದ್ದು ಬರುತ್ತಿವೆ. ರಶ್ಯ ಸೇರಿದಂತೆ ಮಾಜಿ ಸಮಾಜವಾದಿ ದೇಶಗಳಲ್ಲಿಯೂ ಸಮಾಜವಾದಕ್ಕೆ ಬೇಕಾದಂತಹ ಹೋರಾಟಗಳು ಹಾಗೂ ಮಾರ್ಕ್ಸ್‌ವಾದೀ ಚಿಂತನೆಯು ಬೆಳೆದು ಬರುತ್ತಿದೆ.

ಇದಲ್ಲದೆ ವಿಕಸಿತ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗ ಚಳುವಳಿ ಹೊಸ ಶಕ್ತಿಗೂಡಿಸಿಕೊಂಡು ಮುನ್ನುಗ್ಗುತ್ತಿದೆ. ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳ ಆಳರಸರಿಗ್ಗೆ ಎದುರಾದ ಹೋರಾಟ ತೀವ್ರವಾಗುತ್ತಿರುವುದನ್ನು ಕಾಣಬಹುದಾಗಿದೆ.

ಬಂಡವಾಳಶಾಹಿ ಸಂಸ್ಕೃತಿಯ ಪರಿಧಿಯ ಆಚೆ ಇರುವ ಹಿಂದುಳಿದ ರಾಷ್ಟ್ರಗಳು ತಮ್ಮ ಪರಮಾಧಿಕಾರ ಕಾಪಾಡಲು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಶ್ರೀಮಂತಗೊಳಿಸಲು ಸಮಾಜವಾದಿ ಹಾದಿಯಲ್ಲಿ ಮುನ್ನುಗ್ಗುವಂತೆ ಚಳುವಳಿ ಬೆಳೆದು ಬರುತ್ತಿದೆ.

ಈ ಎಲ್ಲಾ ಬೆಳವಣಿಗೆಗಳು ಜಗತ್ತಿನಲ್ಲಿ ಸಮಾಜವಾದೀ ಚಳುವಳಿ, ಮಾರ್ಕ್ಸ್‌ವಾದ-ಲೆನಿನ್‌ವಾದ ಸಿದ್ಧಾಂತ ಬಲಗೊಳ್ಳುತ್ತಿರುವುದನ್ನು ತೋರಿಸುತ್ತವೆ. ಭಾರತ ಮತ್ತು ನೇಪಾಳ - ಏಶ್ಯಾದ ಈ ಎರಡು ನೆರೆದೇಶಗಳ ಬೆಳವಣಿಗೆ ಗಳನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸ ಬೇಕು.

ಇಂದಿನ ಭಾರತ-ನೇಪಾಳ ರಾಷ್ಟ್ರಗಳ ನಡುವೆ ಹಲವಾರು ವ್ಯತ್ಯಾಸಗಳಿದ್ದರೂ, ಈ ಎರಡೂ ರಾಷ್ಟ್ರಗಳಲ್ಲೂ ಕಮ್ಯುನಿಸ್ಟ್ ಪಕ್ಷಗಳು ಮುಖ್ಯ ಪಾತ್ರ ವಹಿಸುತ್ತಿವೆ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವ ಇರುವಂತಹ ಒಕ್ಕೂಟಗಳು ಅಧಿಕಾರಕ್ಕೆ ಬಂದಿವೆ.

ಈ ಎರಡರಲ್ಲಿ ಮುಖ್ಯ ವ್ಯತ್ಯಾಸಗಳೂ ಇವೆ. ನೇಪಾಳದ ಒಕ್ಕೂಟದಲ್ಲಿ ದೇಶದ ಆಡಳಿತ ರಂಗಕ್ಕೆ ನೇತೃತ್ವ ನೀಡುವ ಮುಖ್ಯ ಪಾತ್ರ ಅಲ್ಲಿಯ ಕಮ್ಯುನಿಸ್ಟ್ ಪಕ್ಷಕ್ಕಿದೆ. ಆಡಳಿತ ರಂಗದ ದೊಡ್ಡ ಪಕ್ಷ ಕಮ್ಯುನಿಸ್ಟ್ ಪಕ್ಷವಾಗಿದೆ.

ಭಾರತದಲ್ಲಿ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ., ಫಾರ್ವರ್ಡ್‌ಬ್ಲಾಕ್, ಈ ನಾಲ್ಕು ಎಡ ಪಕ್ಷಗಳು ಸೇರಿದರೂ ಸಂಯುಕ್ತ ರಂಗದಲ್ಲಿ ಒಂದು ಸಣ್ಣ ಶಕ್ತಿ. ಇಲ್ಲಿಯು ಸಂಯುಕ್ತ ರಂಗದಲ್ಲಿ ಪ್ರಧಾನ ಶಕ್ತಿ ಇರುವುದು ಜನತಾದಳ ಸೇರಿದಂತೆ ಇತರ ಪಕ್ಷಗಳಿಗೆ.

ಆದರೆ ಭಾರತ - ನೇಪಾಳ ಎರಡರಲ್ಲೂ ಸಂಯುಕ್ತ ರಂಗ ಸರಕಾರ ಮುಂದುವರಿಯಬೇಕಾದರೆ ಕಮ್ಯುನಿಸ್ಟ್ ಪಕ್ಷಗಳು, ಇತರೆ ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಐಕ್ಯತೆ ಕಾಪಾಡಿ ಹಂತಹಂತವಾಗಿ ದೊಡ್ಡ ಶಕ್ತಿಯಾಗಿ ರೂಪುಗೊಳ್ಳ ಬೇಕಾಗಿದೆ. ಕಮ್ಯುನಿಸ್ಟ್ ಪಕ್ಷಗಳು, ಎಡ ಪಕ್ಷಗಳು ಹಾಗೂ ಇತರ ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಇರುವಂತಹ ಅಭಿಪ್ರಾಯ ಭಿನ್ನತೆಗಳನ್ನು ಚರ್ಚೆ ಮುಖಾಂತರ ಪರಿಹರಿಸಿ ಒಂದು ವಿಶಾಲ ಸಂಯುಕ್ತ ರಂಗದ ಐಕ್ಯತೆಯನ್ನು ಬಲಪಡಿಸಬೇಕಾಗಿದೆ.

ಇಡೀ ಜಗತ್ತಿನಲ್ಲೇ ಪ್ರಸ್ತುತ ಇರುವ ಒಂದು ರಾಜಕೀಯ ಸತ್ಯ ಇದರಲ್ಲಿ ಅಡಗಿದೆ. ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಮುನ್ನಡೆಗೆ ನಿರ್ಣಾಯಕವಾದಂತಹ ಒಂದು ಸ್ಥಾನ ಹಿಂದುಳಿದ ರಾಷ್ಟ್ರಗಳ ದೇಶೀಯ ಪ್ರಜಾಪ್ರಭುತ್ವ ಚಳುವಳಿಗೆ ಇದೆ. ಅದರಲ್ಲಿ ಮಾರ್ಕ್ಸ್‌ವಾದಿ- ಲೆನಿನ್‌ವಾದಿಗಳಿಗೆ ಒಂದು ಪ್ರಮುಖ ಸ್ಥಾನ ಇದ್ದೇ ಇದೆ.

ಈಗಾಗಲೇ ಭಾರತ ನೇಪಾಳ ಸೇರಿದಂತೆ ಹಿಂದುಳಿದ ರಾಷ್ಟ್ರಗಳಲ್ಲಿ ಮಾರ್ಕ್ಸ್‌ವಾದಿ ಮತ್ತು ಲೆನಿನ್‌ವಾದಿಗಳ ಏಕಪಕ್ಷ ಆಡಳಿತ ಸಾಧ್ಯವಿಲ್ಲ. ಅದೇ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳ ಬೆಂಬಲವಿಲ್ಲದೆ ಸರಕಾರ ಸ್ಥಾಪನೆಯೂ ಅಸಾಧ್ಯವಾಗಿದೆ.

ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಮಾರ್ಕ್ಸ್‌ವಾದಿ ಹಾಗೂ ಲೆನಿನ್‌ವಾದಿಗಳ ಬೆಂಬಲದ ಸರಕಾರದಲ್ಲಿ ಅವರು ಪಾಲ್ಗೊಳ್ಳಲೇ ಬೇಕು ಎಂಬುವುದರಲ್ಲಿ ಅರ್ಥವಿಲ್ಲ.

ಉದಾಹರಣೆಗೆ 1930 ರಲ್ಲಿ ಸ್ಪೈನ್‌ನಲ್ಲಿ ರೂಪುಗೊಂಡ ಫ್ಯಾಸಿಸ್ಟ್ ವಿರುದ್ಧದ ಐಕ್ಯರಂಗ ಸರಕಾರದಲ್ಲಿ ಕಮ್ಯುನಿಸ್ಟ್ ಮಂತ್ರಿಗಳು ಇರಲಿಲ್ಲ. ಆದರೆ ಆ ಸರಕಾರಕ್ಕೆ ಎದುರಾಗಿ ಫ್ಯಾಸಿಸ್ಟ್‌ಗಳು ಸಂಘಟಿಸಿದ ಗಲಭೆಗೆ ಎದುರಾಗಿ ಪ್ರತಿಏಟು ನೀಡಲು ಕಮ್ಯುನಿಸ್ಟರು ವಹಿಸಿದ ಪಾತ್ರ ಚರಿತ್ರಾರ್ಹವಾಗಿದೆ. ಫ್ಯಾಸಿಸ್ಟರು ಯೋಜಿಸಿದ ಗಲಭೆಯಲ್ಲಿ ಅವರಿಗೆ ಎದುರಾಗಿ ಸ್ಪೈನ್ ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಡಾಲರಸ್ ಇಬ್ಬರೂರಿ ಇವರು ಕೊಟ್ಟ ಘೋಷಣೆ 'ಅವರನ್ನು ಬಿಡಬಾರದು'. ಇದು ಜಗತ್ತಿನ ಕ್ರಾಂತಿಕಾರಿ ಚಳುವಳಿಯ ಚರಿತ್ರೆಯಲ್ಲಿ ಅಚ್ಚಳಿಯದೆ ನಿಲ್ಲುವ ಸಂಗತಿ.

ಪುಟ 7 ನೋಡಿ

ದೇಶದೊಳಗೆ **ವಿಶ್ವ**

ಪ.ಬಂಗಾಳ ಎಡರಂಗದ ಪ್ರಚಂಡ ಜಯಭೇರಿ

ಪಶ್ಚಿಮ ಬಂಗಾಳದಲ್ಲಿ ಮೇ 25 ರಂದು ನಡೆದ ಕೆಲವು ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಎಡರಂಗ ಪ್ರಚಂಡ ಜಯಭೇರಿ ಬಾರಿಸಿದೆ.

ಕಲ್ಕತ್ತ ಮಹಾನಗರ ಪಾಲಿಕೆಯ ಮೂರು ಸ್ಥಾನಗಳಿಗೆ ಉಪ ಚುನಾವಣೆ ಮತ್ತು ದುರ್ಗಾಪುರ, ಕೂಪರ್ಸ್, ಕ್ಯಾಂಪ್ ಹಾಗೂ ಹಲ್ದಿಯಾ ಪಾಲಿಕೆಗೆ ಚುನಾವಣೆ ನಡೆದಿತ್ತು. ಎಂಟು ಮುನಿಸಿಪಾಲಿಟಿಗಳ ಎಂಟು ಸ್ಥಾನಗಳಿಗೆ ಉಪ ಚುನಾವಣೆಯೂ ನಡೆದಿತ್ತು.

ಒಟ್ಟು 90 ವಾರ್ಡ್‌ಗಳಿಗೆ ಚುನಾವಣೆ ನಡೆದಿದ್ದು ಪ್ರಕಟವಾದ ಫಲಿತಾಂಶಗಳ ಪ್ರಕಾರ 65 ಸ್ಥಾನಗಳಲ್ಲಿ ಎಡರಂಗ ಅಭ್ಯರ್ಥಿಗಳು ಜಯಶಾಲಿಯಾಗಿದ್ದಾರೆ.

ಹಾಲ್ದಿಯಾ ನಗರ ಸಭೆಯಲ್ಲಿ ಒಟ್ಟು 24 ಸ್ಥಾನಗಳಿದ್ದು ಆ ಪೈಕಿ 19 ರಲ್ಲಿ ಗೆದ್ದಿರುವ ಎಡರಂಗ ಅಧಿಕಾರಕ್ಕೆ ಬಂದಿದೆ. ಉಳಿದ ಐದು ವಾರ್ಡುಗಳಲ್ಲಿ ಕಾಂಗ್ರೆಸ್ ಗೆದ್ದಿದೆ. ದುರ್ಗಾಪುರದಲ್ಲಿ ಭಾರೀ ಜಯವನ್ನು ದಾಖಲಿಸಿದೆ. 45 ವಾರ್ಡುಗಳ ಪೈಕಿ ಬಹುತೇಕ ಎಲ್ಲಾ ವಾರ್ಡ್‌ಗಳನ್ನು ಗೆದ್ದುಕೊಳ್ಳುವ ಹಾದಿಯಲ್ಲಿದೆ.

ಆದರೆ ನಾಡಿಯಾ ಜಿಲ್ಲೆಯಲ್ಲಿರುವ ಕೂಪರ್ಸ್ ಕ್ಯಾಂಪ್ ಮುನಿಸಿಪಾಲಿಟಿಯಲ್ಲಿ ಮಾತ್ರ ಎಡರಂಗ ಹಿನ್ನಡೆ ಅನುಭವಿಸಿದೆ. ಇದು ಹಿಂದೆ ವಲಸೆಗಾರರ ಬಲಿಷ್ಠಕೋಟೆಯಾಗಿತ್ತು.

ಜಲಪಾಯ್‌ಗುರಿ, ಕೊನ್ನನಗರ, ದಿನ್ ಹಟಾ, ಬಾಲಿ, ತಾಕಿ, ನ್ಯೂ ಬರಾಕ್‌ಪುರ್, ನೈಹತಿ ಮತ್ತು ಬರಸಾತ್ ಮುನ್ಸಿಪಾಲಿಟಿಗಳ ತಲಾ ಒಂದು ಸ್ಥಾನಗಳ ಉಪ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಏಳು ಸ್ಥಾನಗಳಲ್ಲಿ ಜಯಗಳಿಸಿದೆ. ಜಲಪಾಯಗುರಿಯಲ್ಲಿ ಮಾತ್ರ ಕಾಂಗ್ರೆಸ್ ಗೆದ್ದಿದೆ. ತಾಕಿ ಮುನ್ಸಿಪಾಲಿಟಿಯಲ್ಲಿ ಹೊಂದಿದ್ದ ಸ್ಥಾನವನ್ನು ಕಾಂಗ್ರೆಸ್ ಕಳೆದುಕೊಂಡಿದೆ.

ಕಲ್ಕತ್ತ ಮಹಾನಗರ ಪಾಲಿಕೆಯ ಮೂರು ವಾರ್ಡ್‌ಗಳಿಗೆ ಉಪ ಚುನಾವಣೆ ನಡೆದಿತ್ತು. ಎರಡರಲ್ಲಿ ಎಡರಂಗ ಗೆದ್ದಿದೆ. ಬಹಳ ದೀರ್ಘ ಕಾಲದಿಂದ ಕಾಂಗ್ರೆಸ್ ವಶದಲ್ಲಿದ್ದ ಒಂದು ಸ್ಥಾನವನ್ನು ರಂಗ ಕಸಿದುಕೊಂಡಿದೆ. ಈ ಗೆಲುವಿನೊಂದಿಗೆ ಕಲ್ಕತ್ತ ಮಹಾನಗರ ಪಾಲಿಕೆಯಲ್ಲಿ ಎಡರಂಗ ತನ್ನ ಸ್ವಂತ ಶಕ್ತಿಯಿಂದ ಬಹುಮತವನ್ನು ಪಡೆದಂತಾಗಿದೆ. ಕಲ್ಕತ್ತ ಪಾಲಿಕೆಯಲ್ಲಿ ಈಗ ಎಡರಂಗ 71 ಮತ್ತು ಕಾಂಗ್ರೆಸ್ 65 ಸ್ಥಾನಗಳನ್ನು ಹೊಂದಿವೆ. 1995 ರಲ್ಲಿ ಈ ಪಾಲಿಕೆಗೆ ಚುನಾವಣೆ ನಡೆದಿತ್ತು. ಅಂದಿನಿಂದಲೂ ಒಬ್ಬ ಪಕ್ಷೇತರ ಸದಸ್ಯ ಎಡರಂಗಕ್ಕೆ ಬೆಂಬಲ ಕೊಡುತ್ತಲೇ ಬಂದಿದ್ದಾರೆ.

ಕಲ್ಕತ್ತ ಪಾಲಿಕೆಯಲ್ಲಿ ಬಿಜೆಪಿಯ ಇಬ್ಬರು ಸದಸ್ಯರಿದ್ದಾರೆ.. ಕಾಂಗ್ರೆಸ್ ಬೆಂಬಲಿತ ಇಬ್ಬರು ಪಕ್ಷೇತರರಿದ್ದಾರೆ.

ನಗರ ಪ್ರದೇಶದ ದುರ್ಗಾಪುರ, ಕೂಪರ್ಸ್ ಕ್ಯಾಂಪ್ ಮತ್ತು ಹಾಲ್ದಿಯಾ ಸ್ಥಳೀಯ ಸಂಸ್ಥೆಗಳಿಗೆ ಇದೇ ಮೊದಲ ಬಾರಿಗೆ ಚುನಾವಣೆ ನಡೆಯಿತು. ಕೂಪರ್ಸ್ ಕ್ಯಾಂಪ್‌ನಲ್ಲಿ ಮಾತ್ರ ಕಾಂಗ್ರೆಸ್ ಗೆದ್ದಿದೆ.

ಕಾಂಗ್ರೆಸ್ ದುರ್ಬಲ
ಬಿಜೆಪಿ ಧೂಳೀಪಟ

ಒಟ್ಟಾರೆಯಾಗಿ ಕಾಂಗ್ರೆಸ್ ಸ್ಥಾನ ಮತ್ತು ಮತಗಳ ಪ್ರಮಾಣಗಳೆರಡರಲ್ಲೂ ಹಿನ್ನಡೆ ಅನುಭವಿಸಿದೆ. ಬಿಜೆಪಿ ವಸ್ತುಶಃ ಧೂಳೀಪಟ ಆಗಿದೆ.

ಶಾಂತಿಯನ್ನು ಕದಡಲು ಕಾಂಗ್ರೆಸ್ ಮತ್ತು ಬಿಜೆಪಿ ನಡೆಸಿದ ಪ್ರಯತ್ನಗಳು ವಿಫಲವಾಗಿ ಮತದಾನ ಶಾಂತಿಯುತವಾಗಿ ನಡೆದವು. ಇದಕ್ಕಾಗಿ ಜನರನ್ನು ಮುಖ್ಯಮಂತ್ರಿ ಜ್ಯೋತಿಬಸು ಮತ್ತು ಎಡರಂಗ ಅಧ್ಯಕ್ಷ ಶೈಲೇನ್ ದಾಸ್‌ಗುಪ್ತಾ ಅಭಿನಂದಿಸಿದ್ದಾರೆ.

ಹಿಂಸೆಗಿಳಿದ ಕಾಂಗ್ರೆಸ್

ಕಲ್ಕತ್ತ ಪಾಲಿಕೆಯ 51ನೇ ವಾರ್ಡಿನಲ್ಲಿ ಬೆಳಿಗ್ಗೆಯಿಂದಲೇ ಸಾಲುಗಟ್ಟಿ ನಿಂತ ಮತದಾರರ ಮೇಲೆ ಹಲ್ಲೆಯೂ ನಡೆದಂತೆ ಈ ವಾರ್ಡನ್ನು ಉಳಿಸಿಕೊಳ್ಳಬೇಕೆಂಬ ಹತಾಶೆಯಿಂದ ಕಾಂಗ್ರೆಸ್ ಭಾರೀ ಹಿಂಸಾಚಾರಕ್ಕೆ ಇಳಿಯಿತು. ಎಡರಂಗದ ಅಭ್ಯರ್ಥಿಯಾದ ಆರ್.ಎಸ್.ಪಿ.ಯ ನಾರಾಯಣ ಓಝಾ ಅವರ ಮೇಲೆ ಎರಡು ಸಲ ಹಲ್ಲೆ ಮಾಡಲಾಯಿತು. ಅವರ ಮೇಲೆ ಗ್ರೆನೇಡನ್ನು ಎಸೆಯಲಾಯಿತು. ಬಾಂಬ್ ಸಿಡಿದು ಭಾರೀ ರಕ್ತಸ್ರಾವ ಆಯಿತು.

75ನೇ ವಾರ್ಡಿನಲ್ಲಿ ಯುವ ಸಿಪಿಐ(ಎಂ) ಅಭ್ಯರ್ಥಿ ಫೈಜ್ ಖಾನ್ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದರು. ಈ ವಾರ್ಡಿನಲ್ಲಿ ಕೂಡ ಹತಾಶ ಕಾಂಗ್ರೆಸ್ ಬಾಂಬ್ ಎಸೆತದಂಥ ಕುಕೃತ್ಯಕ್ಕೆ ಇಳಿಯಿತು. ಕಾಂಗ್ರೆಸ್ ದುಷ್ಕರ್ಮಿಗಳು ಪೋಲೀಸ್ ಜೀಪೊಂದರ ಬಳಿ ಸ್ಫೋಟಕಗಳನ್ನು ಸ್ಫೋಟಿಸಿದ್ದರಿಂದ ಒಬ್ಬ ಪೋಲೀಸ್ ಅಧಿಕಾರಿ ಗಾಯಗೊಂಡರು.

ಒಟ್ಟಿನಲ್ಲಿ, ಬೂರ್ಝ್ವಾ ಪತ್ರಿಕೆಗಳ ಕಾಂಗ್ರೆಸ್ ಪರ ಪ್ರಚಾರ ಹಾಗೂ ಕಾಂಗ್ರೆಸ್‌ನ ಹಿಂಸಾಚಾರದ ಹೊರತಾಗಿಯೂ ಎಡರಂಗ ಭಾರಿ ಜಯವನ್ನು ದಾಖಲಿಸಿತು. ಇದು ಎಡರಂಗದ ಜನಪ್ರಿಯತೆಯನ್ನು ಇನ್ನೊಮ್ಮೆ ಸಾಬೀತುಗೊಳಿಸಿದೆ.

ಸ್ಥಾನಗಳ ವಿವರ

ದುರ್ಗಾಪುರ ಮಹಾನಗರ ಪಾಲಿಕೆ	
ಒಟ್ಟು ಸ್ಥಾನಗಳು	43
ಸಿಪಿಐ(ಎಂ)	33
ಸಿಪಿಐ	2
ಎಡರಂಗ ಬೆಂಬಲಿತ ಪಕ್ಷೇತರ	1
ಕಾಂಗ್ರೆಸ್	6
ಬಿಜೆಪಿ	1
ಹಾಲ್ದಿಯಾ ಮುಖ್ಯಪಾಲಿಕೆ	
ಒಟ್ಟು ಸ್ಥಾನಗಳು	24
ಸಿಪಿಐ(ಎಂ)	16
ಸಿಪಿಐ	2
ಕಾಂಗ್ರೆಸ್	5
ಸಮಬಲ	1
ಕೂಪರ್ಸ್ ಕ್ಯಾಂಪ್	
ಒಟ್ಟು ಸ್ಥಾನಗಳು	12
ಸಿಪಿಐ(ಎಂ)	2
ಕಾಂಗ್ರೆಸ್	10

ಗುವಾಹಟಿ ವಿ.ವಿ.: ಎಸ್‌ಎಫ್‌ಐ ಗೆ ಜಯ

ಗುವಾಹಟಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿ ಸಂಘಕ್ಕೆ (ಪಿಜಿಎಸ್‌ಯು) ಈಚೆಗೆ ನಡೆದ ಚುನಾವಣೆಯಲ್ಲಿ ಎಸ್‌ಎಫ್‌ಐ ಭಾರೀ ಜಯವನ್ನು ಗಳಿಸಿದೆ. 18 ವರ್ಷಗಳ ದೀರ್ಘ ಅವಧಿಯ ನಂತರ ಎಸ್‌ಎಫ್‌ಐ ಈ ಜಯವನ್ನು ದಾಖಲಿಸಿದೆ.

ಎಪ್ಪತ್ತರ ದಶಕದ ಕೊನೆ ಭಾಗದಲ್ಲಿ ಅಸ್ಸಾಂ ಚಳುವಳಿ ಆರಂಭವಾದಾಗಿನಿಂದಲೂ ಈ ವಿಶ್ವವಿದ್ಯಾಲಯ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘದ(ಆಸು - AASU) ಬಲಿಷ್ಠ ಕೋಟೆ ಎಂದು ಹೇಳಲಾಗಿತ್ತು. ಆದರೆ ಮೇ 21 ರಂದು ನಡೆದ ಚುನಾವಣೆಯಲ್ಲಿ ಆಸು ಭಾರೀ ಹಿನ್ನಡೆ ಅನುಭವಿಸಿತು.

ತ್ರಿಕೋಣ ಸ್ಪರ್ಧೆಯಲ್ಲಿ ಪ್ರತಿಷ್ಠಿತ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಎಸ್‌ಎಫ್‌ಐ ಪಡೆದುಕೊಂಡಿತು. ಎಬಿವಿಪಿ ಬೆಂಬಲಿತ 'ಪಕ್ಷೇತರ' ಅಭ್ಯರ್ಥಿ ಅಶೋಕ್ ಭರಲಿಯಾನನ್ನು ಎಸ್‌ಎಫ್‌ಐ ಇಂದ್ರಜಿತ್ ಬೆಜಬರುವಾ 16 ಮತಗಳ ಅಂತರದಿಂದ ಸೋಲಿಸಿದರು. 'ಆಸು' ಅಭ್ಯರ್ಥಿ ಮೂರನೇ ಸ್ಥಾನ ಪಡೆದರು. ಆಸುವಿನ ಅಧಿಕೃತ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿದ್ದಕ್ಕಾಗಿ ಅಶೋಕ ಭರಲಿಯನನ್ನು ಆಸು ನಿಂದ ಉಚ್ಚಾಟಿಸಲಾಗಿತ್ತು.

ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಎಸ್‌ಎಫ್‌ಐ ಮುಖಂಡ ಪ್ರತಿಭಾನ್ವಿತ ವಿದ್ಯಾರ್ಥಿ. ಈಚೆಗೆ ನಡೆದ ವಾರ್ಸಿಟಿ ಸಪ್ತಾಹದಲ್ಲಿ ಇಂದ್ರಜಿತ್ ಚಿನ್ನದ ಪದಕಗಳ ಸಹಿತ 13 ಬಹುಮಾನಗಳನ್ನು ಗೆದ್ದಿದ್ದಾರೆ.

ಕ್ರೀಡಾ ವಿಭಾಗಕ್ಕೆ ನಡೆದ ಚುನಾವಣೆಯಲ್ಲಿ ಎಸ್‌ಎಫ್‌ಐ ಪ್ರಾಯೋಜಿತ ಹುರಿಯಾಳು ನಭಕೃಷ್ಣ ರಾವತ್ ಆಸು ಅಭ್ಯರ್ಥಿಯನ್ನು 350 ಕ್ಕೂ ಹೆಚ್ಚು ಮತಗಳ ಅಂತರದಿಂದ ಪರಾಭವಗೊಳಿಸಿದರು.

ಎಸ್‌ಎಫ್‌ಐ ಬೆಂಬಲಿತ ಭೈರನ್ ಕುಮಾರ ಪ್ರಭಾಕರ ಸಹಾಯಕ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅವರು ಆಸು ಪ್ರತಿಸ್ಪರ್ಧಿಯನ್ನು 14 ಮತಗಳಿಂದ ಸೋಲಿಸಿದರು. ಎಸ್‌ಎಫ್‌ಐ ಬೆಂಬಲಿತ ಅಂಜು ಪ್ರಭ ಕಲಿತಾ ಆಸು ಅಭ್ಯರ್ಥಿಯನ್ನು ಪರಾಭವಗೊಳಿಸಿ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಪಿಜಿಎಸ್‌ಯು ನ 13 ಸ್ಥಾನಗಳ ಪೈಕಿ ಕೇವಲ 5 ರಲ್ಲಿ ಗೆಲ್ಲಲು ಆಸುಗೆ ಸಾಧ್ಯವಾಗಿದೆ. ಎಬಿವಿಪಿ ಒಂದೇ ಒಂದು ಸ್ಥಾನದಲ್ಲಿ ಗೆದ್ದಿದೆ. ಮೂರು ಸ್ಥಾನಗಳನ್ನು ಸ್ವತಂತ್ರ ಅಭ್ಯರ್ಥಿಗಳು ಗೆದ್ದುಕೊಂಡರು.

ಅಸ್ಸಾಂನ ಪ್ರಸಕ್ತ ಸನ್ನಿವೇಶದಲ್ಲಿ ಗುವಾಹಟಿ ವಿ.ವಿ. ಸಂಘದ ಈ ಚುನಾವಣೆಯಲ್ಲಿ ಎಸ್‌ಎಫ್‌ಐ ದಾಖಲಿಸಿರುವ ಜಯ ಗಮನಾರ್ಹವಾಗಿದೆ. ಇದೊಂದು ಮಹತ್ವದ ವಿದ್ಯಮಾನವಾಗಿದೆ.

ಎಲ್ಲ ಪ್ರಮುಖ ಸ್ಥಳೀಯ ದಿನ ಪತ್ರಿಕೆಗಳು ಈ ಸುದ್ದಿಯನ್ನು ಮುಖಪುಟದಲ್ಲಿ ಪ್ರಕಟಿಸಿದವು. ಆಸು ಅನುಭವಿಸಿದ ಹಿನ್ನಡೆಗೆ ಮಹತ್ವ ನೀಡಿದ್ದವು.

1974-75 ರಿಂದ ಸತತ ನಾಲ್ಕು ಅವಧಿಗೆ ಗುವಾಹಟಿ ವಿ.ವಿ. ಪಿಜಿಎಸ್‌ಯು ಎಸ್‌ಎಫ್‌ಐ ನೇತೃತ್ವದಲ್ಲಿ ಇತ್ತು ಎನ್ನುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆದರೆ 1979 ರ ಅಸ್ಸಾಂ ಚಳುವಳಿಯ ನಂತರ ಗುವಾಹಟಿ ವಿ.ವಿ. ಆಸುನ ಭದ್ರ ಕೋಟೆಯಾಯಿತು ಹಾಗೂ ಪ್ರಜಾಸತ್ತಾತ್ಮಕ ವಾತಾವರಣದಲ್ಲಿ ಕಾರ್ಯನಿರ್ವಹಿಸುವುದು ಎಸ್‌ಎಫ್‌ಐ ಗೆ ಅಸಾಧ್ಯವಾಯಿತು.

ಅಸ್ಸಾಂ ಚಳುವಳಿಯ ಅವಧಿಯಲ್ಲಿ ಎಸ್‌ಎಫ್‌ಐ ಸದಸ್ಯರು ಮತ್ತು ಹಿತೈಷಿಗಳಿಗೆ ಕಿರುಕುಳ ಕೊಟ್ಟ ಪ್ರತಿಗಾಮಿ ಶಕ್ತಿಗಳು ಅವರನ್ನು ಹಾಸ್ಟೆಲುಗಳಿಂದ ಹೊರಗಟ್ಟಿದ್ದರು. ಹೀಗಿದ್ದರೂ ಕಳೆದ 15 ವರ್ಷಗಳಿಂದ ಆರೋಗ್ಯಕರ ಅಕಾಡೆಮಿಕ್ ವಾತಾವರಣ ನಿರ್ಮಾಣ, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಈಶಾನ್ಯ ವಲಯದ ಈ ಅತ್ಯುನ್ನತ ವಿದ್ಯಾ ಕೇಂದ್ರದ ವಿದ್ಯಾರ್ಥಿಗಳ ಏಕತೆಗಾಗಿ ಎಸ್‌ಎಫ್‌ಐ ಅವಿರತವಾಗಿ ಶ್ರಮಿಸುತ್ತಾ ಬಂದಿದೆ.

ಎಸ್‌ಎಫ್‌ಐ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದಕ್ಕಾಗಿ ಗುವಾಹಟಿ ವಿ.ವಿ. ವಿದ್ಯಾರ್ಥಿ ವೃಂದವನ್ನು ಎಸ್‌ಎಫ್‌ಐ ನ ಅಸ್ಸಾಂ ರಾಜ್ಯ ಸಮಿತಿ ಅಭಿನಂದಿಸಿದೆ.

ಪ್ರಧಾನಿ ಭೇಟಿಯಿಂದ ಅಭಿವೃದ್ಧಿ : ತ್ರಿಪುರಾ ಆಶಾವಾದ

ಪ್ರಧಾನಿ ಐ.ಕೆ.ಗುಜ್ರಾಲ್ ತಮ್ಮ ಸಂಪುಟ ಸಹೋದ್ಯೋಗಿಗಳಾದ ಇಂದ್ರಜಿತ್ ಗುಪ್ತಾ, ರಾಮ್‌ವಿಲಾಸ್ ಪಾಸ್ವಾನ್ ಮತ್ತು ಬೀರೇಂದ್ರ ವೈಶ್ಯ ಅವರೊಂದಿಗೆ ಮೇ 21 ರಂದು ತ್ರಿಪುರಾಕ್ಕೆ ಭೇಟಿ ನೀಡಿದರು.

ನಿರ್ಲಕ್ಷಿತವಾದ ಈ ರಾಜ್ಯದ ಅಭಿವೃದ್ಧಿಗೆ ಸಂಯುಕ್ತರಂಗ ಸರಕಾರದ ಬದ್ಧತೆಯನ್ನು ಈ ಭೇಟಿಯಿಂದ ಪುನರುಚ್ಚರಿಸಿದಂತಾಗಿದೆ. ಅಲ್ಲದೆ ತ್ರಿಪುರಾ ಹಾಗೂ ಇತರ ಈಶಾನ್ಯ ವಲಯದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಈ ಭೇಟಿ ತಿರುವು ಬಿಂದು ಆಗಲಿದೆ.

ಮೇ 21 ರಂದು ಪ್ರಧಾನಿ ತಂಡ ರಾಜಧಾನಿ ಅಗರ್ತಲಾವನ್ನು ತಲುಪಿದಾಗ ಪುರಭವನದಲ್ಲಿ ಪ್ರಧಾನಿಯವರನ್ನು ಸ್ವಾಗತಿಸಲಾಯಿತು. ಪೌರಸನ್ಮಾನದ ನಂತರ ಪ್ರಧಾನಿ ಗುಜ್ರಾಲ್ ನಾನಾ ಗುಂಪುಗಳು ಹಾಗೂ ನಿಯೋಗಗಳನ್ನು ಭೇಟಿ ಮಾಡಿದರು. ಎಡರಂಗ, ಕಾಂಗ್ರೆಸ್, ಟಿಯುಜೆಎಸ್ ಮತ್ತು ಬಿಜೆಪಿ ಪ್ರಧಾನಿಯವರಿಗೆ ಮನವಿ ಪತ್ರಗಳನ್ನು ಸಲ್ಲಿಸಿದವು. ರಾಜ್ಯ ಸಚಿವ ಸಂಪುಟದ ಸದಸ್ಯರನ್ನು ಪ್ರಧಾನಿ ಭೇಟಿ ಮಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು. ಮೇ 22 ರ ಬೆಳಿಗ್ಗೆ ಅಗರ್ತಲಾದಿಂದ ಪ್ರಧಾನಿ ತಂಡ ಮರಳಿತು.

ಪೌರಸನ್ಮಾನ ಮತ್ತು ರಾಜ್ಯದ ಅಭಿವೃದ್ಧಿ ಬಗ್ಗೆ ಎಡರಂಗ ಸಲ್ಲಿಸಿದ ಮನವಿ ಪತ್ರಕ್ಕೆ ಪ್ರತಿಕ್ರಿಯಿಸಿದ ಪ್ರಧಾನಿ ಗುಜ್ರಾಲ್, ದೀರ್ಘಕಾಲದಿಂದ ನಿರ್ಲಕ್ಷಿತ ಹಾಗೂ ವಂಚಿತರಾದ ತ್ರಿಪುರಾ ಮತ್ತು ಇಡಿಯಾಗಿ ಈಶಾನ್ಯ ವಲಯದ ಅಭಿವೃದ್ಧಿಗೆ ಸಂಯುಕ್ತರಂಗ ಸರಕಾರ ಬದ್ಧವಾಗಿದೆ ಎಂದು ಹೇಳಿದರು. ಈ ವಲಯದಲ್ಲಿ ಸಾಮಾಜಿಕ ನ್ಯಾಯ ತರಲು ಕೂಡಾ ಕೇಂದ್ರ ಸರಕಾರ ಬದ್ಧವಾಗಿದೆ ಎಂದರು.

ತಮ್ಮದು ಶಾಂತಿ ಹಾಗೂ ಪ್ರಗತಿ ಸಾಧ್ಯತೆಯ ಭೇಟಿ ಎಂದು ಪ್ರಧಾನಿ ವರ್ಣಿಸಿದರು. ಇವೆರಡೂ ಪರಸ್ಪರ ಪೂರಕವಾದದು ಎಂದರು. ಹಿಂದಿನ ಪ್ರಧಾನಿ ಎಚ್.ಡಿ.ದೇವೇಗೌಡ ಆರಂಭಿಸಿದ ಈಶಾನ್ಯ ವಲಯ ಅಭಿವೃದ್ಧಿಯ ಯೋಜನೆಗಳನ್ನು ಮುಂದುವರೆಸುವುದಾಗಿ ಹೇಳಿದ ಗುಜ್ರಾಲ್ ಇನ್ನಷ್ಟು ಹೊಸ ಯೋಜನೆಗಳನ್ನು ಪ್ರಕಟಿಸಿದರು. ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವಂಥ ಯೋಜನೆಗಳಿಗೆ ಉದಾರವಾಗಿ ನೆರವು ನೀಡುವುದಾಗಿ ತಿಳಿಸಿದರು.

ಬಡತನ ನಿವಾರಣೆ ಕಾರ್ಯಕ್ರಮಗಳಿಗೆ ಹೆಚ್ಚಿನ ನೆರವನ್ನು ನೀಡಬೇಕೆಂಬ ರಾಜ್ಯ ಸಚಿವ ಸಂಪುಟದ ಮನವಿಗೆ ಅನುಕೂಲಕರ ಪ್ರತಿಕ್ರಿಯೆ ನೀಡಿದರು.

ವಿಚ್ಛಿದ್ರಕಾರಿ ಚಟುವಟಿಕೆಗಳಲ್ಲಿ ತೊಡಗಿರುವ ಹಾದಿ ತಪ್ಪಿದ ಶಕ್ತಿಗಳು ಕೇಂದ್ರ ಸರಕಾರದೊಂದಿಗೆ ಬೇಷರತ್ ಮಾತುಕತೆಗೆ ಬರಬೇಕು ಎಂದು ಪ್ರಧಾನಿ ಗುಜ್ರಾಲ್ ಆಹ್ವಾನಿಸಿದರು. ಇದರಿಂದ ಕಳೆದ 50 ವರ್ಷಗಳಲ್ಲಿ ಆಗಿರುವ ತಪ್ಪನ್ನು ಸರಿಪಡಿಸಿಕೊಳ್ಳಲು ಸರಕಾರಕ್ಕೆ ಅವಕಾಶ ಸಿಗುತ್ತದೆ ಎಂದು ಪ್ರತಿಪಾದಿಸಿದರು.

ಮೇ 22 ರಂದು ಅಗರ್ತಲಾದಲ್ಲಿ ನಡೆದ ಪ್ರಧಾನಿಯವರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಎಡರಂಗ ಸಂಚಾಲಕ ಮಾಣಿಕ್ ಸರ್ಕಾರ್, ತ್ರಿಪುರಾದ ಕಲ್ಯಾಣ ಹಾಗೂ ಅಭಿವೃದ್ಧಿ ಬಗೆಗಿನ ಬೇಡಿಕೆಗಳ ವಿಚಾರದಲ್ಲಿ ಕೇಂದ್ರ ಸರಕಾರದ ನಿಲುವಿನಲ್ಲಿ ಭಾರಿ ಬದಲಾವಣೆ ಆಗಿರುವುದನ್ನು ಸ್ವಾಗತಿಸಿದರು. ಈ ಬೇಡಿಕೆಗಳನ್ನು ಮುಂದಿಟ್ಟು ಎಡರಂಗ ಮತ್ತು ಸಿಪಿಐ(ಎಂ) ಹಲವು ದಶಕಗಳಿಂದ ಹೋರಾಟ ನಡೆಸುತ್ತಿದೆ ಎಂದರು.

ಕಾಂಗ್ರೆಸ್ ನೇತೃತ್ವದ ಹಿಂದಿನ ಕೇಂದ್ರ ಸರಕಾರದಂತೆ ಆಶ್ವಾಸನೆಯಷ್ಟೇ ನೀಡದೆ ಈ ಭರವಸೆಗಳನ್ನು ಪ್ರಾಮಾಣಿಕವಾಗಿ ಈಡೇರಿಸಲು ಸಂಯುಕ್ತ ರಂಗ ಸರಕಾರ ಶ್ರಮಿಸಿದರೆ ತ್ರಿಪುರಾದ ಆರ್ಥಿಕ ಸಾಮಾಜಿಕ ಕ್ಷೇತ್ರದಲ್ಲಿ ಅದ್ಭುತ ಪರಿವರ್ತನೆ ಉಂಟಾಗುತ್ತದೆ ಎಂದು ಸರ್ಕಾರ್ ಆಶಾವಾದ ವ್ಯಕ್ತಪಡಿಸಿದರು.

ಬಿ.ಎಲ್.ಬ್ಯಾನರ್ಜಿ ನಿಧನ

ಸಿಪಿಐ(ಎಂ) ಅಂಡಮಾನ್- ನಿಕೋಬಾರ್ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ|| ಬಿ.ಎಲ್.ಬ್ಯಾನರ್ಜಿ ಮೇ 16 ರಂದು ಪೋರ್ಟ್‌ಬ್ಲೇರ್‌ನಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು.

1915ರಲ್ಲಿ ಅಕ್ಟೋಬರ್ 1 ರಂದು ಜನಿಸಿದ ಕಾಂ|| ಬ್ಯಾನರ್ಜಿ ತುಂಬಾ ಚಿಕ್ಕ ಪ್ರಾಯದಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಮೂರು ಸಲ ಬಂಧಿತರಾಗಿದ್ದರು. ಅವರನ್ನು ಕಲ್ಕತ್ತದಲ್ಲಿ ದೀರ್ಘ ಕಾಲ ಸೆರೆಮನೆಯಲ್ಲಿ ಇಡಲಾಗಿತ್ತು.

ಸರಕಾರಿ ನೌಕರರಾಗಿ 1959 ರಲ್ಲಿ ಅಂಡಮಾನ್- ನಿಕೋಬಾರ್‌ಗೆ ಹೋದ ಬ್ಯಾನರ್ಜಿ ಸರಕಾರಿ ನೌಕರರ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡರು. ಇದಕ್ಕಾಗಿ ಸರಕಾರದಿಂದ ಸತತವಾಗಿ ಕಿರುಕುಳಕ್ಕೆ ಒಳಗಾದರು. ಹೋರಾಟ ಮನೋಭಾವದ ಬ್ಯಾನರ್ಜಿಯವರನ್ನು 1989 ರಲ್ಲಿ ಕಡ್ಡಾಯವಾಗಿ ನಿವೃತ್ತಿಗೊಳಿಸಲಾಯಿತು. ಆಗ ಅವರು ಅಂಡಮಾನ್ ಮತ್ತು ನಿಕೋಬಾರ್ ವರ್ಕರ್ಸ್ ಪಾರ್ಟಿಯ ಕಾರ್ಯ ದರ್ಶಿ ಸ್ಥಾನದ ಹೊಣೆಯನ್ನು ಹೊತ್ತುಕೊಂಡರು. ಈ ದ್ವೀಪದಲ್ಲಿ ಸಿಪಿಐ(ಎಂ) ಘಟಕ ಸ್ಥಾಪನೆ ಯಾದಾಗ 1983 ಡಿಸೆಂಬರ್ ನಲ್ಲಿ ಅದರ ರಾಜ್ಯ ಸಂಘಟನಾ ಸಮಿತಿಯ ಸಂಚಾಲಕ ರಾದರು. 1989 ರವರೆಗೂ ಆ ಸ್ಥಾನ ದಲ್ಲಿದ್ದರು. ಅನಾರೋಗ್ಯದಿಂದಿದ್ದರೂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಅಥವಾ ರಾಜ್ಯ ಸಮಿತಿ ಸದಸ್ಯರಾಗಿ ಕೆಲಸ ಮಾಡಿ ದರು. ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಅಂಡಮಾನಿನಲ್ಲಿರುವ ಸೆಲ್ಯುಲಾರ್ ಸೆರೆಮನೆಯನ್ನು ಕೆಡವಿ ಹಾಕುವ ಸರಕಾರದ ನಿರ್ಧಾರದ ವಿರುದ್ಧ ನಡೆದ ಚಳುವಳಿಯಲ್ಲಿ ಕಾಂ|| ಬ್ಯಾನರ್ಜಿ ಸಕ್ರಿಯರಾಗಿದ್ದರು. ಅದನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಸಂರಕ್ಷಿಸಬೇಕೆಂಬ ಬೇಡಿಕೆಯನ್ನು ಮುಂದಿಡಲಾಗಿತ್ತು. ಸರಕಾರ ಕೊನೆಗೂ ಈ ಹೋರಾಟಕ್ಕೆ ಮಣಿಯಬೇಕಾಯಿತು.

ಇಂಡೋನೇಷ್ಯಾದಲ್ಲೊಂದು ಕೋಲಾಹಲ ಭರಿತ ವಾರ

ಲೋಕಸಂಚಾರ



ಶರತ್‌ಚಂದ್ರ

ರಸ್ತೆ ತುಂಬಾ ಭಾರಿ ಜನ ಹೊತ್ತ ವ್ಯಾನು, ಕಾರು, ಮೋಟಾರ್ ಬೈಕ್‌ಗಳ ಸಾಲು ಸಾಲು. ಹೆಚ್ಚಾಗಿ ಯುವಕರು, ಹದಿಹರೆಯದ ಹುಡುಗರು, ಹುಡುಗಿಯರು. ಎಲ್ಲರ ಮೇಲೂ ಹಸಿರು ಟೀಶರ್ಟ್, ಹಸಿರು ಕೋಟು, ಏನೋ ಒಂದು ಹಸಿರು ಬಟ್ಟೆ. ಹಸಿರು ಟೋಪಿ, ಕೆಲವರ ಮೈಮೇಲೆ ಹಸಿರು ಬಣ್ಣ, ಹಸಿರು ನಕ್ಷತ್ರ. ಅರಚುತ್ತಿದ್ದಾರೆ - ನಿಮ್ಮ ಸಂಖ್ಯೆ ಒಂದು ನಿಮ್ಮ ಬಣ್ಣ ಹಸಿರು... 'ಬಿಂಕಾಂಗ್... ಬಿಂಕಾಂಗ್'(ನಕ್ಷತ್ರ, ನಕ್ಷತ್ರ)ನಿಮ್ಮ ಚಿಹ್ನೆ ಎಂದು. ಮೇಲೆ ಮಾಡಿದ ಹೆಬ್ಬೆಟ್ಟು ತೋರಿಸುತ್ತಾ - ರಸ್ತೆಯ ಅಕ್ಕಪಕ್ಕದಲ್ಲಿ ನಿಂತವರಲ್ಲಿ ಹಲವಾರಿಗೆ ಕುತೂಹಲ ಮಿಶ್ರಿತ ಆಶ್ಚರ್ಯ, ಸಂಭ್ರಮ, ಹಲವರು 'ಬಿಂಕಾಂಗ್ ಬಿಂಕಾಂಗ್' ಎಂದು ಹೆಬ್ಬೆಟ್ಟು ಮೇಲೆ ಮಾಡಿ ಸಮ್ಮತಿ ಸೂಚಿಸುವವರು. ನಗರಗಳ ತುಂಬಾ ಮುಖ್ಯರಸ್ತೆಗಳಲ್ಲಿ, ಅಡ್ಡ ರಸ್ತೆಗಳಲ್ಲಿ, ಎಲ್ಲಾ ಹಾದಿ ಬೀದಿಗಳಲ್ಲಿ ವಾಹನಗಳ ಭಾರಿ ರ್‍ಯಾಲಿ, ಘೋಷಣೆಗಳ, ವಾಹನಗಳ ಹಾರ್ನ್‌ಗಳ ಗೌಜಿ.

ಈ ಕೆಲವು ದಿನಗಳ ಹಿಂದೆ ಒಂದು ದಿನ(ಮೇ 23) ಇಂಡೋನೇಷ್ಯಾದ ಎಲ್ಲಾ ಪ್ರಮುಖ ನಗರಗಳಲ್ಲಿ ಕಂಡುಬಂದ ದೃಶ್ಯ. ಏನು ವಿಶೇಷ ಎಂದಿರಾ? ಇದು ಚುನಾವಣಾ ಪ್ರಚಾರ. ಹಾಗಾದರೆ ಏನು ವಿಶೇಷ? ಬಣ್ಣ, ಸಂಖ್ಯೆ ಇವೆಲ್ಲಾ ಏನು? ಇದು ಇಂಡೋನೇಷ್ಯಾದ ಚುನಾವಣೆಗೆ ಕೊನೆಯ ದಿನದ PPP ಪಕ್ಷದ ಚುನಾವಣಾ ಪ್ರಚಾರದ ದೃಶ್ಯ. ಮೂವತ್ತು ವರ್ಷಗಳ ನಂತರ ಬೀದಿ ರ್‍ಯಾಲಿಗಳು ನಡೆದದ್ದು ವಿಶೇಷ. (ಸ್ವಲ್ಪ ಮಟ್ಟಿಗೆ) ಮುಕ್ತ ಪ್ರಚಾರ ನಡೆದದ್ದು ವಿಶೇಷ.

ಚುನಾವಣೆಗಳಿಗಲ್ಲದಿದ್ದರೆ ಇನ್ನು ಯಾವಾಗ ರ್‍ಯಾಲಿ ಮಾಡ್ತಾರೆ? ಇದರಲ್ಲಿ ಏನು ವಿಶೇಷ ಎಂದಿರಾ? ಹೌದು ಇನ್ನೆಲ್ಲೂ ವಿಶೇಷವಿರಲಿಕ್ಕಿಲ್ಲ. ಇಂಡೋನೇಷ್ಯಾದಲ್ಲಿ ಇದು ಭಾರಿ ವಿಶೇಷ.

ಇಂಡೋನೇಷ್ಯಾ 'ವಿಶಿಷ್ಟ' ಪ್ರಜಾಪ್ರಭುತ್ವ ಇರುವ ದೇಶ. ಕಳೆದ 30 ವರ್ಷಗಳಿಂದ ಒಂದೇ ಅಧ್ಯಕ್ಷರನ್ನು ಒಂದೇ ಪಕ್ಷದ ಸರಕಾರವನ್ನು 'ಆರಿಸುತ್ತಾ' ಬಂದ ದೇಶ. ಮೂರೇ ಅಧಿಕೃತವಾಗಿ ಮಾನ್ಯ ಮಾಡಿದ ಪಕ್ಷಗಳಿರುವ ದೇಶ. ಅಧ್ಯಕ್ಷರನ್ನು, ಸೈನ್ಯವನ್ನು ಟೀಕಿಸುವುದು ಶಿಕ್ಷಾರ್ಹ ಅಪರಾಧವಾಗಿರುವ ದೇಶ. ಬೇರೆ ಎಷ್ಟೋ ಕಾನೂನುಗಳು ಜಾರಿಯಾಗದಿರುವ ಈ ದೇಶದಲ್ಲಿ ಈ ಕಾನೂನು ಮಾತ್ರ ಮುಲಾಜಿಲ್ಲದೆ ಜಾರಿಯಾಗುತ್ತಿದೆ. ಅಧ್ಯಕ್ಷರು ಮತ್ತು ಸೈನ್ಯವನ್ನು ಟೀಕಿಸಿದ್ದಕ್ಕೆ ವಿರೋಧಪಕ್ಷಕ್ಕೆ ಸೇರಿದ PPPಯ ಒಬ್ಬ ಎಂ.ಪಿ. 34 ತಿಂಗಳ ಜೈಲು ವಾಸ ಅನುಭವಿಸುತ್ತಿದ್ದಾನೆ. ಇನ್ನೊಬ್ಬ ಮಾಜಿ ಎಂ.ಪಿ. ಹಾಗೂ ಸರಕಾರದಿಂದ ಅಧಿಕೃತವಾಗಿ ಮಾನ್ಯತೆ ಪಡೆಯದ ವಿರೋಧ ಪಕ್ಷ PUDI ನ ನಾಯಕನೊಬ್ಬನಿಗೆ 18 ತಿಂಗಳ ಶಿಕ್ಷೆ ವಿಧಿಸಲಾಗಿದೆ. 1995 ರಲ್ಲಿ ಅಧ್ಯಕ್ಷ ಜನರಲ್ ಸುಹಾರ್ತೋ ಜರ್ಮನಿ ಭೇಟಿಯ ಸಮಯದಲ್ಲಿ ಆತನನ್ನು ಟೀಕಿಸಿದ್ದಕ್ಕಾಗಿ, PUDI ಪಕ್ಷದ ಸ್ಥಾಪಕ ನಾಯಕನನ್ನು ಚುನಾವಣಾ ಸಮಯದಲ್ಲಿ ಹಿಂಸಾತ್ಮಕ ಚಟುವಟಿಕೆಗಳ ಸುಳ್ಳು ಆಪಾದನೆ ಮೇಲೆ 13 ವರ್ಷ ಜೈಲಿಗೆ ಹಾಕಲಾಗಿದೆ.

ಇಷ್ಟೇ ಅಲ್ಲ, ಇಂಡೋನೇಷ್ಯಾದ ಪ್ರಜಾಪ್ರಭುತ್ವ ಎಷ್ಟು ವಿಚಿತ್ರ ಅಂದರೆ, ಆಳುವ ಗೋಲ್ಕರ್ ಪಕ್ಷದ ನಾಯಕರು ಚುನಾವಣೆಯ ಎಷ್ಟೋ ಮೊದಲು ಶೇಕಡಾ 70 ಕ್ಕಿಂತ ಹೆಚ್ಚು ಮತ ಗಳಿಸುವುದಾಗಿ ಕೊಚ್ಚಿಕೊಂಡಿದ್ದಾರೆ. ಕಳೆದ 30 ವರ್ಷದಲ್ಲಿ ಸರಕಾರಿ ಪಕ್ಷ ಗೋಲ್ಕರ್ ಹಾಗೂ ಸೈನ್ಯದ ಹಿಡಿತ ಖಾಯಂಗೊಳಿಸುವ 'ಪ್ರಜಾಪ್ರಭುತ್ವ ವ್ಯವಸ್ಥೆ' ಹಾಗೂ 'ಚುನಾವಣಾ ವ್ಯವಸ್ಥೆ' ರಚಿಸಲಾಗಿದೆ.

ಕೇವಲ ಮೂರೇ ಪಕ್ಷಕ್ಕೆ ಅವಕಾಶ. ಆಳುವ ಗೋಲ್ಕರ್ ಪಕ್ಷದ ಅಧ್ಯಕ್ಷ ಸುಹಾರ್ತೋ ಹಾಗೂ ಮಿಲಿಟರಿ ಅಧಿಕಾರಿಗಳ ಹಿಡಿತದಲ್ಲಿರುವ ಪಕ್ಷ. 1965 ರ ಕ್ಷಿಪ್ರ ಕ್ರಾಂತಿಯಲ್ಲಿ ಅಧಿಕಾರಕ್ಕೆ ಬಂದ ಜನರಲ್ ಸುಹಾರ್ತೋರ ಮಿಲಿಟರಿ ಸರಕಾರ ಹಲವು ಮುಸ್ಲಿಂ ರಾಜಕೀಯ ಗುಂಪುಗಳನ್ನು ಸೇರಿಸಿ PPP ಎಂಬ ಪಕ್ಷ ತಯಾರಿಸಿತು. ಅಧ್ಯಕ್ಷ ಸುಕಾರ್ನೋರ ಪಕ್ಷ PNI ನ ಹೊಸ ರೂಪವಾಗಿ PDIನ್ನು ರಚಿಸಲಾಯಿತು. ಈ ಮೂರೂ ಪಕ್ಷಗಳ ಧೋರಣೆ, ನೀತಿ, ಸಂವಿಧಾನ ನಾಯಕತ್ವ ಎಲ್ಲವನ್ನೂ ಸರಕಾರ ಮಂಜೂರು ಮಾಡಬೇಕು. ಚುನಾವಣೆಗೆ ಈ ಪಕ್ಷಗಳು ನಿಲ್ಲಿಸುವ ಅಭ್ಯರ್ಥಿಗಳನ್ನು ಸರಕಾರ ಮಂಜೂರು ಮಾಡಬೇಕು. ಬೇರೆ ಯಾವುದೇ ರಾಜಕೀಯ ಪಕ್ಷಕ್ಕೆ ಅವಕಾಶವಿಲ್ಲ. ಪ್ರತಿಪಕ್ಷಕ್ಕೆ ಬಣ್ಣ ಸಹ ಸರಕಾರವೇ ಕೊಡುವುದು. ಗೋಲ್ಕರ್‌ನ ಬಣ್ಣ ಹಳದಿ, PDI ನ ಬಣ್ಣ ಕೆಂಪು, PPP ಬಣ್ಣ ಹಸಿರು.

ಇಷ್ಟು ಸಾಕಲ್ಲ - ಈ ಪ್ರಜಾಪ್ರಭುತ್ವದ 'ವಿಶಿಷ್ಟತೆ'ಗೆ ಆಧಾರ. ಇಲ್ಲ ಇನ್ನೂ ಮುಗಿದಿಲ್ಲ. ಎಲ್ಲಾ ಸರಕಾರಿ ನೌಕರರು, ಸರಕಾರದ ಸ್ವಾಮ್ಯದಲ್ಲಿರುವ ಎಲ್ಲಾ ಸಂಘಟನೆಗಳು, ಕಂಪನಿಗಳು ಉದ್ಯೋಗಿಗಳು ಸರಕಾರಿ ಪಕ್ಷ ಗೋಲ್ಕರ್‌ನ ಸದಸ್ಯರು - ಅವರಿಗೆ ಬೇಕಿರಲಿ, ಬೇಡವಾಗಿರಲಿ ಎಲ್ಲಾ ಪಕ್ಷದ ಸದಸ್ಯರೂ ಅವರ ಪಕ್ಷಕ್ಕೆ ಮತ ಹಾಕಬೇಕು ತಾನೆ? ಅದನ್ನೆಲ್ಲಾ ಇಂಡೋನೇಷ್ಯಾ ಸರಕಾರ ಸ್ವಾಭಾವಿಕ ಪ್ರಕ್ರಿಯೆಗಳಿಗೆ ಬಿಡಲೂ ತಯಾರಿಲ್ಲ. ಸರಕಾರಿ ನೌಕರರು ಹಾಗೂ ಸರಕಾರಿ ಸ್ವಾಮ್ಯದ ನೌಕರರು, ಬೇರೆ ನಾಗರೀಕರಂತೆ ತಮ್ಮ ಮನೆಗಳ ಹತ್ತಿರವಿರುವ ಮತಗಟ್ಟೆಗಳಲ್ಲಿ ಮತ ಹಾಕುವುದಿಲ್ಲ. ಆ ದಿನ ರಜಾ ದಿನ ಸಹವಲ್ಲ. ಅವರು ತಮ್ಮ ಸಂಘಟನೆಗಳ ಕಚೇರಿಯ ಬಳಿ ಇರುವ ವಿಶೇಷ ಮತಗಟ್ಟೆಗಳಲ್ಲಿ ಮತ ಹಾಕ್ತಾರೆ. ಸರಕಾರಿ ಪಕ್ಷ 'ಗೋಲ್ಕರ್'ನ ಕಡ್ಡಾಯ ಸದಸ್ಯರು, ಆ ಪಕ್ಷಕ್ಕೆ ಮತ ಹಾಕ್ತಾರಾ ಇಲ್ವಾ ಅಂತ ಸರಕಾರಕ್ಕೆ ತಿಳಿಯುವುದು ಬೇಡವೇ? ಪಾಪ!

ಇಷ್ಟೆಲ್ಲಾ ಇದ್ದರೂ ಅಧಿಕೃತ ವಿರೋಧ ಪಕ್ಷಗಳು ತಮ್ಮ ಬೆಂಬಲ ಹೆಚ್ಚಿಸುತ್ತಾ ಹೋದರೆ? ಎಲ್ಲಾ ರೀತಿಯ ರಾಜಕೀಯ ಪ್ರಚಾರ, ಪ್ರಕ್ಷೋಭೆ ಚಟುವಟಿಕೆ ಮೇಲೆ ನಿಷೇಧ - ಜಿಲ್ಲೆ ಮತ್ತು ಇತರ ಕೆಳಗಿನ ಕೇಂದ್ರಗಳಲ್ಲಿ ಇದು ಮೂರು ರಾಜಕೀಯ ಪಕ್ಷಗಳಿಗೆ ಅನ್ವಯಿಸುತ್ತದೆ. ಆದರೂ ಜಿಲ್ಲಾ, ಉಪಜಿಲ್ಲಾ, ಗ್ರಾಮಗಳಲ್ಲಿ ಅಧಿಕಾರವು ವಿಶಿಷ್ಟ ಸ್ಥಾನ ಹೊಂದಿರುವ ಸರಕಾರಿ ಅಧಿಕಾರಿಗಳು, ನೌಕರರು ಆಳುವ ಪಕ್ಷ ಗೋಲ್ಕರ್‌ನ ಸದಸ್ಯರಾದ್ದರಿಂದ ಅವರಿಗೆ ಜನತೆ ಮೇಲೆ ರಾಜಕೀಯ ಪ್ರಚಾರ, ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಚುನಾವಣಾ ಸಮಯದಲ್ಲಿ ಬೀದಿ ರ್‍ಯಾಲಿಗಳು ಹಿಂದೆ ನಿಷಿದ್ಧವಾಗಿತ್ತು.

ಈ ಹಿನ್ನೆಲೆಯಲ್ಲಿ ಈ ಬಾರಿ ಚುನಾವಣೆಯ ಪ್ರಚಾರದಲ್ಲಿ ಇಂಡೋನೇಷ್ಯಾ ಆಳುವ ಕೂಟ ಹಾಕಿದ ಲಕ್ಷ್ಮಣ ರೇಖೆ ದಾಟಿದೆ - 30 ವರ್ಷಗಳ ನಂತರ. ವಿರೋಧ ಪಕ್ಷ PPP ಗೆ ಅಭೂತಪೂರ್ವ ಜನಬೆಂಬಲ ಕಂಡುಬಂದಿದೆ. ಇಂಡೋನೇಷ್ಯಾ ಸೀಮಿತ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಜನತೆಯ ತೀವ್ರ ಅತೃಪ್ತಿ ವ್ಯಕ್ತವಾಗಿದೆ. ಈ ಎಲ್ಲಾ ಅತೃಪ್ತಿ PPP ಗೆ ಬೆಂಬಲದಲ್ಲಿ ವ್ಯಕ್ತವಾಗಿದೆ. ಸಾಮಾನ್ಯವಾಗಿ ಸುಮ್ಮನೆ ಹೆಸರಿಗೆ ನಡೆಯುವ ಚುನಾವಣಾ ಪ್ರಚಾರ, ತೀವ್ರ ರಾಜಕೀಯ ಚರ್ಚೆ ಮಂಥನಕ್ಕೆಡೆಕೊಟ್ಟಿತು. ಆಳುವ ಗೋಲ್ಕರ್ ಇದರಿಂದ ಹೆದರಿದ್ದರಿಂದ ದೇಶದ ಹಲವಾರು ಕಡೆ ಗೋಲ್ಕರ್ ಮತ್ತು PPP ಕಾರ್ಯಕರ್ತರ ಮೇಲೆ ಜಕಾರ್ತ, ಸೂರಾಬಾಯಿ, ಯೋಗ್ಯಕರ್ತ, ಬಾಂಡುಂಗ್ ಮುಂತಾದ ಪ್ರಮುಖ ನಗರಗಳಲ್ಲಿ - ತೀವ್ರ ಘರ್ಷಣೆಗಳಾದವು - ಬೀದಿಗಳಲ್ಲಿ ಜಕಾರ್ತ ಚುನಾವಣೆಯ ಮೊದಲ ಒಂದು ವಾರ ರಣರಂಗವಾಗಿತ್ತು. ಸಾಮಾನ್ಯವಾಗಿ ಇಂಡೋನೇಷ್ಯಾದ ಜನ ಹೆದರುವ - ಮಿಲಿಟರಿ ಪೋಲೀಸ್, ಸೈನ್ಯ - ಗಸ್ತು ತಿರುಗಿದರೂ ಲೆಕ್ಕಿಸದೆ PPP ಕಾರ್ಯಕರ್ತರು ಗೋಲ್ಕರ್ ಕಾರ್ಯಕರ್ತರ ಜತೆ ಕಾದಾಡಿದರು. PPP ಕಾರ್ಯಕರ್ತರಿಗೆ ಗೋಲ್ಕರ್ ಕಾರ್ಯಕರ್ತರು ಪೋಲೀಸು ಬೆಂಬಲದಿಂದ ಅಡ್ಡಿ ಮಾಡಿದಾಗ ಈ ಘರ್ಷಣೆಗಳು ನಡೆಯುತ್ತಿದ್ದವು. PPP ಮುಸ್ಲಿಂ ಧೋರಣೆಯ ಪಕ್ಷವಾದರೂ ಮೂಲಭೂತವಾದಿ ಪಕ್ಷವಲ್ಲ, ಆದರೆ ಜನರ ಎಲ್ಲ ಅತೃಪ್ತಿ PPP ಗೆ ಬೆಂಬಲವಾಗಿ ಮಡುಗಟ್ಟಿತ್ತು. PPP ಯ 'ಗರೀಬಿ ಹಟಾವೋ'(!) ಘೋಷಣೆ ಬಡವ-ಶ್ರೀಮಂತ ತಾರತಮ್ಯ ಹೆಚ್ಚುತ್ತಿರುವ ಇಂಡೋನೇಷ್ಯಾದಲ್ಲಿ ಒಳ್ಳೆ ಪ್ರತಿಕ್ರಿಯೆ ಮೂಡಿತ್ತು.

ಇನ್ನೊಂದು ವಿರೋಧ ಪಕ್ಷ PDI ನ್ನು ಚುನಾವಣೆಯ ಹಲವು ತಿಂಗಳುಗಳ ಮೊದಲೇ ನಿಶ್ಶಕ್ತಗೊಳಿಸಿತ್ತು - ಸರಕಾರ ಬಲ ಪ್ರಯೋಗ ಮಾಡಿ. PDI ಮಾಜಿ ಅಧ್ಯಕ್ಷ ಸುಕಾರ್ನೋರ ಪುತ್ರಿ ಮೇಘವತಿ ನಾಯಕತ್ವದಲ್ಲಿ ಜನಪ್ರಿಯವಾಗಲಾರಂಭಿಸಿದಾಗ, ಸರಕಾರ-ಪರ ಬಣ ಪಕ್ಷದ ಅಧಿವೇಶನದಲ್ಲಿ ಬಲಪೂರ್ವಕವಾಗಿ ಮೇಘವತಿಯನ್ನು ಉಚ್ಚಾಟಿಸಿತ್ತು. ಈಗ ಜಕಾರ್ತ ಈ ಘಟನೆ ವಿರುದ್ಧ ನಡೆದ ಬೀದಿ ಪ್ರತಿಭಟನೆ ಕಳೆದ 30 ವರ್ಷಗಳಲ್ಲಿ ಮಿಲಿಟರಿ ಸರಕಾರಕ್ಕೆ ತೀವ್ರ ವಿರೋಧ ಆರಂಭವಾಗಿತ್ತು. ಇತ್ತೀಚೆಗೆ ಮೇಘವತಿ ಗುಂಪನ್ನು PDI ಕಚೇರಿಯಿಂದ ಹೊರಹಾಕಿದ್ದ ಅಲ್‌ಂತುಬಾ ಎಂಬ ಸಂಘಟನೆ PDIನ ಸರಕಾರ-ಪರ ನಾಯಕರ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಮೋಸ ಮಾಡಿದ ಪ್ರಕರಣದಲ್ಲಿ, ಮೇಘವತಿ ಗುಂಪನ್ನು PDI ಕಚೇರಿಯಿಂದ ಹೊರಹಾಕಲು ಈ ಗುಂಪಿಗೆ 1.15 ಕೋಟಿ ಇಂಡೋನೇಶ್ಯನ್ ರೂಪಯ್ಯ ಅಡ್ವಾನ್ಸ್ ಕೊಟ್ಟು, 'ಕೆಲಸ' ಆದ ಮೇಲೆ 20 ಕೋಟಿ ರೂಪಯ್ಯ ಎಂದು ಕೊಟ್ಟಿದ್ದ ಆಶ್ವಾಸನೆ ಮುರಿದು ಮೋಸ ಮಾಡಿದ್ದಾರೆಂದು ಕೋರ್ಟಿನಲ್ಲಿ ಕೇಸ್. ಈ ನಡುವೆ ಮೇಘವತಿ PDI ಬೆಂಬಲಿಗರಿಗೆ ತಾನು ಈ ಚುನಾವಣೆಯಲ್ಲಿ ಸರಕಾರದ ಈ ಬಲಪ್ರಯೋಗದ ವಿರುದ್ಧದ ಪ್ರತಿಭಟನೆಯಾಗಿ ಮತದಾನ ಮಾಡುವುದಿಲ್ಲ, PDI ಗೆ ಮತ ನೀಡಬೇಡಿ ಎಂದು ತಮ್ಮ ಬೆಂಬಲಿಗರಿಗೆ ಕರೆ ನೀಡಿದ್ದಾರೆ.

ಚುನಾವಣಾ ಸಮಯದಲ್ಲಿ ಸರಕಾರದ, ವ್ಯವಸ್ಥೆಯ ವಿರುದ್ಧ ತೀವ್ರ ಅತೃಪ್ತಿ ವ್ಯಕ್ತವಾದದ್ದು ನೋಡಿ ಅಧ್ಯಕ್ಷ ಸುಹಾರ್ತೋ ಸರ್ಕಾರ ನಡುಗಿ ಹೋಗಿತ್ತು. 150 ಜನ ಬೀದಿ ಕಾಳಗದಲ್ಲಿ ಸತ್ತಿದ್ದರೆ, ಚುನಾವಣಾ ಪ್ರಚಾರದ ಕೊನೆಯ ದಿನ ಕಾಳಿಮಂಥನ(ಹಿಂದಿನ ಹೆಸರು ಬೋರ್ನಿಯೊ) ಪ್ರಾಂತ್ಯದ ರಾಜಧಾನಿಯಲ್ಲಿ ಪೋಲೀಸರ ದಮನದಿಂದ ಕುಪಿತರಾದ ಜನ ಒಂದು ಭಾರಿ ಶಾಪಿಂಗ್ ಕಾಂಪ್ಲೆಕ್ಸ್ ಸುಟ್ಟುಹಾಕಿ ಈ ಒಂದೇ ಘಟನೆಯಲ್ಲಿ ಇನ್ನೂ 150 ಜನ ಸತ್ತಿದ್ದರು. ಪರಿಸ್ಥಿತಿಯನ್ನು ಹತೋಟಿಗೆ ತರಲಿಕ್ಕೆ ಅಲ್ಲಿ ಸೈನ್ಯಕ್ಕೆ 2-3 ದಿನ ಬೇಕಾಯಿತು.

ಕಳೆದ 30 ವರ್ಷಗಳ ಸೀಮಿತ ಪ್ರಜಾಪ್ರಭುತ್ವದ ಮುಖವಾಡದಡಿಯಲ್ಲಿ ನಡೆಯುತ್ತಿದ್ದ ಮಿಲಿಟರಿ ಸರ್ವಾಧಿಕಾರ ಅಲ್ಲಾಡತೊಡಗಿದೆ. ಅಧ್ಯಕ್ಷ ಸುಹಾರ್ತೋ ನಂತರ ಯಾರು? ಎಂದು ಜನ ಮಾತ್ರವಲ್ಲ, ಆಳುವ ಕೂಟದಲ್ಲೇ ಪ್ರಶ್ನೆ ಕೇಳಲಾರಂಭಿಸಿದ್ದಾರೆ. 1965 ರಲ್ಲಿ ಮಿಲಿಟರಿ ಕ್ಷಿಪ್ರ ಕ್ರಾಂತಿ ನಡೆಸಿ, ಅಧ್ಯಕ್ಷ ಸುಕಾರ್ನೋರ ಸರಕಾರವನ್ನು ಉರುಳಿಸಿ ಸುಮಾರು ಹತ್ತು ಲಕ್ಷ ಕಮ್ಯುನಿಸ್ಟರ ನರಮೇಧ ನಡೆಸಿ ಅಧಿಕಾರಕ್ಕೆ ಬಂದ ಜನರಲ್ ಸುಹಾರ್ತೋರ ದಮನ ಚಕ್ರದ ಆಡಳಿತ ಸುಹಾರ್ತೋ ನಂತರ ಮುಂದುವರೆಸಿಕೊಂಡು ಹೋಗುವ ಬಗ್ಗೆ ಆಳುವ ಕೂಟದಲ್ಲೇ ತೀವ್ರ ಸಂಶಯ ಆತಂಕ, ಆರಂಭವಾಗಿದೆ. 75 ವರ್ಷದ ಸುಹಾರ್ತೋ ನಿಧನ ಹೊಂದಿದಾಗ, ಈ ದಮನ ವ್ಯವಸ್ಥೆ ಕುಸಿದು ಬೀಳುತ್ತದೆಯೇ ? ಎಂದು ಸರಕಾರವನ್ನು ತೀವ್ರವಾಗಿ ಬೆಂಬಲಿಸುವ ಇಂಡೋನೇಷ್ಯಾದ ಉದ್ಯಮಪತಿಗಳು, ಭೂಮಾಲಕರು, ಮಿಲಿಟರಿ ಅಧಿಕಾರಿಗಳು ಆತಂಕ ಗೊಂಡಿದ್ದಾರೆ. 1965 ರ ಕ್ಷಿಪ್ರಕ್ರಾಂತಿಯಿಂದ ಈವರೆಗೆ ಸುಹಾರ್ತೋ ಸರಕಾರ ಪ್ರಜಾಪ್ರಭುತ್ವ ಎಂದು ಸರ್ಟಿಫಿಕೇಟ್ ಕೊಡುತ್ತಾ ಬಂದ ಸಾಮ್ರಾಜ್ಯಶಾಹಿ ದೇಶಗಳಿಗೂ ಸುಹಾರ್ತೋ ನಂತರದ ವ್ಯವಸ್ಥೆ ಬಗ್ಗೆ ಆತಂಕ ಆರಂಭವಾಗಿದೆ.

ಚುನಾವಣೆಯ ಫಲಿತಾಂಶ ನಿರೀಕ್ಷಿಸಲಾಗಿಯೇ, ಮತದಾನ ಶೇಕಡಾ 70 ಗೋಲ್ಕರ್, ಸುಮಾರು ಶೇಕಡಾ 20 PPP ಹಾಗೂ ಇತರ PDI ಗೆ ಹೋಗಿದೆ. ಆದರೆ ಚುನಾವಣೆಗಳಲ್ಲಿ ತೀವ್ರ ಅಕ್ರಮ ನಡೆದಿದೆ ಎಂದು ಎಲ್ಲೆಡೆ ಆಪಾದನೆ ಕೇಳಿ ಬಂದಿದೆ. ಚುನಾವಣಾ ಫಲಿತಾಂಶದ ದಿನ ಕೆಲವು ಕಡೆ ತಿರುಗಾ ಹಿಂಸಾಚಾರ ನಡೆದಿದೆ.

ಜಗತ್ತಿನ ನಾಲ್ಕನೇ ಅತಿ ದೊಡ್ಡ(ಜನ ಸಂಖ್ಯೆಯಲ್ಲಿ) ದೇಶವಾದ ಇಂಡೋನೇಷ್ಯಾದಲ್ಲಿ ಈ ಘಟನೆಗಳು ದಕ್ಷಿಣ ಪೂರ್ವ ವಿಶ್ವದಲ್ಲೇ ಮಹತ್ವದ ಬೆಳವಣಿಗೆ. ಭಾರತಕ್ಕೆ ಹಲವಾರು ಹೋಲಿಕೆ ಇರುವ ಈ ದೇಶ(ಹಲವು ಭಾಷೆ, ಜನಾಂಗ, ಭಾರಿ ವೈವಿಧ್ಯತೆ, ದೊಡ್ಡ ದೇಶ) ಒಂದಾಗಿ ಉಳಿಯುವ ಬಗ್ಗೆ ಸಂಶಯವಾಗಿದೆ. ಇದು ಸಾವಿರ ಕಿ.ಮಿ. ಅಗಲ(ಅಕ್ಷಾಂಶ) 1 ಸಾವಿರ ಕಿ.ಮಿ. ಉದ್ದದ ನಾಲ್ಕೈದು ಮುಖ್ಯ ದ್ವೀಪ ಮತ್ತು ಸುಮಾರು 17 ಸಾವಿರಕ್ಕಿಂತಲೂ ಹೆಚ್ಚು ದ್ವೀಪಗಳನ್ನೊಳಗೊಂಡ ಈ ದೇಶದಲ್ಲಿ ಮುಂದೆ ನಡೆಯುವ ರಾಜಕೀಯ ಬೆಳವಣಿಗೆ ಮಹತ್ವದ್ದು. 1965 ರಲ್ಲಿ 300 ಲಕ್ಷ ಸದಸ್ಯರು, ಎರಡು ಕೋಟಿ ಸಾಮೂಹಿಕ ಸಂಘಟನೆಯ ಸದಸ್ಯತ್ವ ಹೊಂದಿದ್ದ ಇಂಡೋನೇಷ್ಯಾ ಕಮ್ಯುನಿಸ್ಟ್ ಪಕ್ಷವನ್ನು ಭಾರಿ ನರಮೇಧದಿಂದ ಅಳಿಸಿಹಾಕಲಾಗಿತ್ತು. ಸುಮಾರು ಹತ್ತು ಲಕ್ಷ ಕಮ್ಯುನಿಸ್ಟರನ್ನು ಕೊಲ್ಲಲಾಗಿತ್ತು. ಆದರೂ ಹೊಸ ಪೀಳಿಗೆಯ ಕಮ್ಯುನಿಸ್ಟರು PRD ಎಂಬ ಹೊಸ ಪಕ್ಷದಲ್ಲಿ ಕೆಲಸ ಮಾಡಲಾರಂಭಿಸಿದರು. ಆಳುವ ಕೂಟದ ರಾಜಕೀಯ ಬಿಕ್ಕಟ್ಟು, ಇಂಡೋನೇಷ್ಯಾ ಹಸಿರು(PPP) ಗೋಲ್ಕರ್(ಹಳದಿ), PDI(ಕೆಂಪು)ದ ಅಧಿಕೃತ ರಾಜಕೀಯವಲ್ಲದ ಹೊಸ ಬಣ್ಣಗಳನ್ನು ನೋಡಲಿದೆ.



ಬ್ರಿಟಿಷ್ ವಸಾಹತುಶಾಹಿಯಿಂದ ಹಾಂಕಾಂಗ್‌ನ ಬಿಡುಗಡೆಗೆ ಇನ್ನು ಸರಿಯಾಗಿ 30 ದಿನಗಳು-ಬಾಕಿ ಎಂದು ಹಾಂಕಾಂಗ್‌ನ ಕೇಂದ್ರ ಸ್ಥಾನದಲ್ಲಿರುವ ಈ ದೈತ್ಯ ಡಿಜಿಟಲ್ ಗಡಿಯಾರ ಸಾರುತ್ತಿದೆ. ಜೂನ್ 1 ರಂದು ಒಬ್ಬ ಚೀನೀ ತಂದೆ ತಮ್ಮಿಬ್ಬರು ಮಕ್ಕಳೊಂದಿಗೆ ಈ ಗಡಿಯಾರದೆದುರು ಫೋಟೋ ತೆಗೆಸಿಕೊಳ್ಳುತ್ತಿದ್ದಾನೆ. ಈ ಗಡಿಯಾರ ಹಾಂಕಾಂಗ್ ಮತ್ತೆ ಚೀಣಾದ ಭಾಗವಾಗಲು ಇಷ್ಟು ಅವಧಿಯಿದೆ ಎಂದು ಸಾರುತ್ತಿದೆ. ಜುಲೈ1, 1997 ರಂದು ಹಾಂಕಾಂಗನಲ್ಲಿ ಬ್ರಿಟಿಷ್ ವಸಾಹತುಶಾಹೀ ಆಳ್ವಿಕೆ ಕೊನೆಗೊಂಡು ಅದು ಮತ್ತೆ ಚೀಣಾಕ್ಕೆ ಸೇರುತ್ತದೆ.

ಭಾರತ ಮತ್ತು ನೇಪಾಳದಲ್ಲಿನ ರಾಜಕೀಯ ಬೆಳವಣಿಗೆಗಳು.....

ಪುಟ 5 ರಿಂದ

ಇಂದಿನ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ಸರಕಾರದಲ್ಲಿ ಸಿಪಿಐ (ಎಂ) ಪಾಲ್ಗೊಳ್ಳದಿದ್ದರೂ ಅದನ್ನು ಶತ್ರುಗಳ ಆಕ್ರಮಣದಿಂದ ಕಾಪಾಡಲು ಅದರ ಕಾರ್ಯಕ್ರಮಗಳನ್ನು ರೂಪಿಸು ವಲ್ಲಿ ಪಕ್ಷ ಪ್ರಮುಖ ಪಾತ್ರ ವಹಿಸುತ್ತಿದೆ.

ನೇಪಾಳ ಪ್ರಜಾಪ್ರಭುತ್ವ ಸರಕಾರದ ನೇತೃತ್ವದಲ್ಲಿ ಮತ್ತೊಂದು ಸಹೋದರ ಪಕ್ಷವಿದ್ದರೂ, ಆ ಸರಕಾರವನ್ನು ಉಳಿಸುವಂತಹ ಮುಖ್ಯ ಪಾತ್ರ ನೇಪಾಳ ಕಮ್ಯುನಿಸ್ಟ್ ಪಕ್ಷದಾಗಿದೆ.ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸಿ ಸಮಾಜ ವಾದಕ್ಕೆ ಬೇಕಾದ ಅಡಿಪಾಯ ನಿರ್ಮಿಸುವ ಕೆಲಸವೇ ಈ ರಾಷ್ಟ್ರಗಳ ವಿಶಾಲ ಪ್ರಜಾಪ್ರಭುತ್ವ ರಂಗಗಳಲ್ಲಿ ಮಾರ್ಕ್ಸ್‌ವಾದಿ- ಲೆನಿನ್ ವಾದಿಗಳ ಸಜೀವ ಪಾತ್ರವಾಗಿದೆ.

ಮಾಜಿ ಸಮಾಜವಾದಿ ರಾಷ್ಟ್ರಗಳಲ್ಲಿಯೂ, ಇಂದಿನ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿಯೂ ಕೋಟ್ಯಾಂತರ ಜನರು ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆಸುತ್ತಿರುವ ಹೋರಾಟಗಳಿಗೂ, ಭಾರತ-ನೇಪಾಳ ಸೇರಿದಂತೆ ಹಿಂದುಳಿದ ರಾಷ್ಟ್ರಗಳ ಜನತಾ ಪ್ರಜಾಪ್ರಭುತ್ವ ಕ್ರಾಂತಿಗೂ ಅನನ್ಯ ಸಂಬಂಧವಿದೆ ಎಂದರ್ಥ. ಇಂತಹ ಒಂದು ಘಟ್ಟದಲ್ಲಿಯೇ ಸಮಾಜವಾದ ದತ್ತ, ಕಮ್ಯುನಿಸಂನತ್ತ ಮುನ್ನಡೆಯ ಪ್ರಕ್ರಿಯೆ ಆರಂಭವಾಗಿದೆ.

ಹಿಂದುಳಿದ ರಾಷ್ಟ್ರಗಳಲ್ಲಿರುವ ಕೋಟ್ಯಾಂತರ ಜನರು ಅಲ್ಲಿಯ ಕಾರ್ಮಿಕವರ್ಗದ ನೇತೃತ್ವದಲ್ಲಿ ಸಂಘಟಿತರಾಗಿ ಜನತಾ ಪ್ರಜಾಪ್ರಭುತ್ವ ಸ್ಥಾಪಿಸಿ, ಸಮಾಜವಾದದತ್ತ ಮತ್ತು ಕಮ್ಯುನಿಸಂನತ್ತ ಮುನ್ನಡೆಯುತ್ತವೆ ಎಂಬ ಐತಿಹಾಸಿಕ ಸತ್ಯವನ್ನು ಕಾಣದ, ಜಾಗತಿಕ ಸಮಾಜವಾದ ಸತ್ತಿದೆ ಎಂದೂ, ಮಾರ್ಕ್ಸ್‌ವಾದ ಅಪ್ರಸ್ತುತ ಎಂದೂ ಕಮ್ಯುನಿಸ್ಟ್ ವಿರೋಧಿಗಳು ಕೂಗಾಡುತ್ತಿದ್ದಾರೆ. ಭಾರತ ಮತ್ತು ನೇಪಾಳದ ಬೆಳವಣಿಗೆಗಳು ಇವರ ಅಭಿಪ್ರಾಯಗಳನ್ನು ಹುಸಿಗೊಳಿಸಿವೆ. ○

ವೇತನ ಆಯೋಗದ ಪ್ರತಿಗಾಮಿ ಅಂಶಗಳನ್ನು ಕೈ ಬಿಡದಿದ್ದರೆ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ

ರಾಜ್ಯ ಸರಕಾರಿ ನೌಕರರ ಒಕ್ಕೂಟ ಕರೆ

ಮೇ 22-23 ರಂದು ಮುಂಬೈಯಲ್ಲಿ ಸಭೆ ಸೇರಿದ್ದ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ(AISGEF)ದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ 5ನೇ ವೇತನ ಆಯೋಗದ ಶಿಫಾರಸುಗಳನ್ನು ಪರಿಷ್ಕರಿಸಿ ಅವುಗಳ ಪ್ರತಿಗಾಮಿ ಅಂಶಗಳನ್ನು ಕೈಬಿಡದಿದ್ದರೆ ಒಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಬೇಕು ಎಂದು ದೇಶದ 80 ಲಕ್ಷ ರಾಜ್ಯ ಸರಕಾರಿ ನೌಕರರಿಗೆ ಕರೆ ನೀಡಿದೆ.

ಜೂನ್, ಜುಲೈ ತಿಂಗಳುಗಳಲ್ಲಿ ಜಿಲ್ಲಾ ಮಟ್ಟದ, ರಾಜ್ಯಮಟ್ಟದ ಸಮಾವೇಶಗಳು, ವಿಚಾರ ಸಂಕಿರಣಗಳು, ಸಾಮೂಹಿಕ ಸಭೆಗಳು, ಗುಂಪುಸಭೆಗಳು ಇತ್ಯಾದಿ ವಿಧಾನಗಳ ಮೂಲಕ ಹೊಸ ಆರ್ಥಿಕ ನೀತಿಯ ಮತ್ತು 5ನೇ ಕೇಂದ್ರೀಯ ವೇತನ ಆಯೋಗ ವರದಿಯ ಅನಿಷ್ಟಕಾರಿ ಸ್ವರೂಪದ ಬಗ್ಗೆ ನೌಕರರ ನಡುವೆ ತಿಳಿಹೇಳುವ ಪ್ರಚಾರ ಕಾರ್ಯವನ್ನು ರಾಜ. ಸಂಘಟನೆಗಳು ನಡೆಸಬೇಕು, ಈ ಕಾರ್ಯಕ್ರಮದ ಕೊನೆಯಲ್ಲಿ ಆಗಸ್ಟ್ 6, 97 ರಂದು ಅಖಿಲಭಾರತ ಪ್ರತಿಭಟನಾ ದಿನ ಆಚರಿಸಿ ದೇಶಾದ್ಯಂತ ಬೃಹತ್ ಮತಪ್ರದರ್ಶನಗಳನ್ನು ನಡೆಸಬೇಕು ಎಂದೂ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ನಿರ್ಧರಿಸಿತು.

ಈ ನಡುವೆ ಕೇಂದ್ರ ಸರಕಾರ ಪ್ರತಿಗಾಮಿ ಶಿಫಾರಸುಗಳನ್ನು ಸ್ವೀಕರಿಸಿದರೆ ಒಂದು ದೇಶವ್ಯಾಪಿ ಮುಷ್ಕರ ನಡೆಸದೆ ಬೇರೆ ದಾರಿಯಿಲ್ಲ ಎಂದೂ ಒಕ್ಕೂಟ ತಿಳಿಸಿದೆ. ಒಕ್ಕೂಟ ಮತ್ತು ರಾಜ್ಯ ಸರಕಾರಿ ನೌಕರರು ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಹಾಗೂ ರಾಷ್ಟ್ರೀಯ ಸಾಮೂಹಿಕ ಸಂಘಟನೆ ಗಳ ವೇದಿಕೆ ನಿರ್ಧರಿಸಿರುವ ಹೊಸ ಆರ್ಥಿಕ ನೀತಿಗಳ ವಿರುದ್ಧ ಐಕ್ಯ ಹೋರಾಟದಲ್ಲಿ ಭಾಗವಹಿಸಲು ಕೂಡಾ ನಿರ್ಧರಿಸ ಲಾಯಿತು.

ನೀಚ ಶಿಫಾರಸುಗಳು

ಪಟ್ಟಿ ಮಾಡಿದ ಅಖಿಲ ಭಾರತ ರಾಜ್ಯಸರಕಾರಿ ನೌಕರರ ಒಕ್ಕೂಟ 5ನೇ ವೇತನ ಆಯೋಗದ 'ನೀಚ ಶಿಫಾರಸುಗಳು' ಕೆಲವು ಹೀಗಿವೆ.

. ಸಿಬ್ಬಂದಿ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು ಕಡಿತ

. ನಿಯಮಿತ ಸೇವೆಯ ಬದಲು ಕಾಂಟ್ರಾಕ್ಟ್ ಸೇವೆ ವ್ಯವಸ್ಥೆ.

. ಮೊದಲೇ ಹಾಗೂ ಕಡ್ಡಾಯ ನಿವೃತ್ತಿ ಯೋಜನೆ.

. ಸರಕಾರಿ ಸೇವೆಗಳ ಸಾರಾಸಗಟು ಕಂಪ್ಯೂಟರೀಕರಣ ಹಾಗೂ ಅದರಿಂದ ಇನ್ನಷ್ಟು ಸಿಬ್ಬಂದಿ ಸಂಖ್ಯೆಯಲ್ಲಿ ಕಡಿತ.

. ಸರಕಾರಿ ಸೇವೆಯಲ್ಲಿನ ಭದ್ರತೆ ಯೆಂಬುದನ್ನು ಸುಮಾರಾಗಿ ನಿರ್ಮೂಲ ಮಾಡಿ ಅದನ್ನೊಂದು ಮನಬಂದಾಗ ತೆಗೆದು ಹಾಕುವ ವ್ಯವಸ್ಥೆಯಾಗಿ ಮಾಡುವುದು.


. ಉನ್ನತ ಅಧಿಕಾರಿಗಳಿಗೆ ಹೆಚ್ಚಿನ ಹಣ ಹಾಗೂ ಪ್ರಯೋಜನಗಳ ಮೂಲಕ ಸಂಬಳ-ಸಾರಿಗೆಯಲ್ಲಿನ ಅಂತರವನ್ನು ಇನ್ನಷ್ಟು ಹೆಚ್ಚಿಸುವುದು.

ಈ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಸರಕಾರ ಒಪ್ಪಿಕೊಂಡರೆ ಅದು ಸರಕಾರಿ ನೌಕರರ ಮತ್ತು ಅಧ್ಯಾಪಕರ ಭವಿಷ್ಯಕ್ಕೂ ಮಾರಕ ಎಂದು ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಅಭಿಪ್ರಾಯ ಪಟ್ಟಿತು.

ಈ ಶಿಫಾರಸ್ಸುಗಳನ್ನು ಒಪ್ಪಿಕೊಂಡರೆ ವೇತನ ಆಯೋಗದ ಶಿಫಾರಸುಗಳ ಜಾರಿಗೆಂದು ಇಟ್ಟಿರುವ 8800ಕೋಟಿ ರೂಗಳನ್ನು ಕೇವಲ ಒಂದು ಸಣ್ಣ ವಿಭಾಗದ ನೌಕರರ ಮೇಲಷ್ಟೇ ಖರ್ಚು ಮಾಡಲಾಗುವುದು. ರಾಜ್ಯ ಸರಕಾರಿ ನೌಕರರು ಮತ್ತು ಅಧ್ಯಾಪಕರ ಸಂಬಳ, ಭತ್ಯೆಗಳನ್ನು ಪರಿಷ್ಕರಿಸಲು ರಾಜ್ಯ ಸರಕಾರಗಳಿಗೆ ಹೆಚ್ಚಿನ ಹಣ ನೀಡುವ ಬಗ್ಗೆ ಕೇಂದ್ರ ಸರಕಾರ ಯೋಚಿಸಿಯೇ ಇಲ್ಲ ಎಂದೂ ಒಕ್ಕೂಟ ಹೇಳಿದೆ.

AISGEFನ ಒಂದು ನಿಯೋಗ ಶೀಘ್ರದಲ್ಲೇ ಪ್ರಧಾನಿಗಳನ್ನು ಭೇಟಿ ಮಾಡಿ ತನ್ನ ಬೇಡಿಕೆಗಳನ್ನು ಅವರ ಮುಂದೆ ಸಲ್ಲಿಸುವುದಾಗಿ ಒಕ್ಕೂಟದ ಹೇಳಿಕೆ ತಿಳಿಸಿದೆ. ಈಗಾಗಲೇ ನಿಯಮಿತ ಸರಕಾರಿ ನೌಕರರಿಗೆ ಪ್ರತಿ ತಿಂಗಳು ಸಂಬಳ ದೊರೆಯುತ್ತಿಲ್ಲ, ಅತ್ತ ವಿಭಿನ್ನ ರಾಜ್ಯಗಳಲ್ಲಿ ವಿಭಿನ್ನ ರೀತಿಯ ಸರಕಾರಿ ಸೇವೆಗಳ ಖಾಸಗೀಕರಣ ಆರಂಭವಾಗಿಯೇ ಬಿಟ್ಟಿದೆ. ಐಎಂಎಫ್-ವಿಶ್ವಬ್ಯಾಂಕ್ ಪ್ರೇರಿತ ಉದಾರೀಕರಣ ಹಾಗೂ ಖಾಸಗೀಕರಣ ನೀತಿಗಳು ಸರಕಾರಿ ನೌಕರರನ್ನು ಇಡೀ ಕಾಮಿಕ ವರ್ಗವನ್ನು ಹಾಗೂ ಬಡ ಜನಸಮೂಹಗಳನ್ನು ತೀವ್ರವಾಗಿ ತಟ್ಟುತ್ತಿವೆ. ಆದ್ದರಿಂದ ಹೊಸ ಆರ್ಥಿಕ ಧೋರಣೆಯ ಒಟ್ಟಾರೆ ದಿಕ್ಕಿನ ವಿರುದ್ಧ ಹೋರಾಟಗಳನ್ನು ಜಂಟಿ ಹೋರಾಟಗಳನ್ನು ತೀವ್ರಗೊಳಿಸಬೇಕು ಎಂದು AISGEFG ಕರೆ ನೀಡಿದೆ.

ಬಾಹ್ಯಾಕಾಶ ರಂಗದಲ್ಲಿ ಭಾರತದ ಇನ್ನೊಂದು ಸಾಧನೆ



ಜೂನ್ 4 ರಂದು ಭಾರತದ ನಾಲ್ಕನೇ ವಾಣಿಜ್ಯ ಉಪಗ್ರಹ ಇನ್ಸಾಟ್-2D ಯನ್ನು ಫ್ರೆಂಚ್ ಗಯಾನಾದ ಕೌರೋವ್ ನಿಲ್ದಾಣದಿಂದ ಕಕ್ಷೆಗೆ ಹಾರಿ ಬಿಡಲಾಯಿತು. 25 ವರ್ಷಗಳ ಹಿಂದೆ ಸ್ಥಾಪನೆಗೊಂಡ ಭಾರತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ದೂರಸಂಪರ್ಕ ಇಲಾಖೆ, ಹವಾಮಾನ ಇಲಾಖೆ, ದೂರದರ್ಶನ ಹಾಗೂ ಆಕಾಶವಾಣಿಯ ಜಂಟಿ ಯೋಜನೆಯಾದ ಈ ಇನ್ಸಾಟ್ (ಇಂಡಿಯನ್ ನ್ಯಾಶನಲ್ ಸೆಟಲೈಟ್ - ಭಾರತ ರಾಷ್ಟ್ರೀಯ ಉಪಗ್ರಹ) ಆಗಸ್ಟ್ 1983 ರಲ್ಲಿ ಆರಂಭವಾಯಿತು. ದೂರಸಂಪರ್ಕ, ರೇಡಿಯೋ, ಟಿ.ವಿ. ಪ್ರಸಾರಗಳು ಹಾಗೂ ಹವಾಮಾನ ವಿಶ್ಲೇಷಣೆಗಳ ಬಳಕೆಗಾಗಿ ಈ ಉಪಗ್ರಹಗಳನ್ನು ಹಾರಿಬಿಡಲಾಗುತ್ತದೆ. ಇನ್ಸಾಟ್-1B ಹಾಗೂ ಇನ್ಸಾಟ್-1D (ಜೂನ್ 1990 ರಲ್ಲಿ ಗಗನಕ್ಕೆ ಕಳಿಸಿದ ಉಪಗ್ರಹ) ಈಗಲೂ ಕೆಲಸ ಮಾಡುತ್ತಿದೆ. ಈ ಇನ್ಸಾಟ್-1 ಸರಣಿಯ ಉಪಗ್ರಹಗಳ ಮೊದಲ ಪೀಳಿಗೆಯ ಉಪಗ್ರಹಗಳನ್ನು ಅಮೆರಿಕಾದಿಂದ ಖರೀದಿಸಲಾಗಿತ್ತು.

ಆದರೆ ಇನ್ಸಾಟ್-2 ಸರಣಿಯ ಉಪಗ್ರಹಗಳು ಭಾರತದಲ್ಲೇ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ರೂಪಿಸಿ, ಸಿದ್ಧಪಡಿಸಿರುವ ಉಪಗ್ರಹಗಳು. ಈ ಸರಣಿಯ ಮೊದಲ ಉಪಗ್ರಹ ಇನ್ಸಾಟ್-2A ನ್ನು ಜುಲೈ 10, 1992 ರಂದು ಇನ್ಸಾಟ್-2B ನ್ನು ಜುಲೈ 23, 1993 ರಂದು ಯುರೋಪಿನ 'ಅರಿಯೇನ್' ಗಗನ ಯಾನದಿಂದ ಹಾರಿ ಬಿಡಲಾಯಿತು. ಮೂರನೇ ಉಪಗ್ರಹ ಇನ್ಸಾಟ್-2C ಯನ್ನು ಅದೇ ರೀತಿ ಡಿಸೆಂಬರ್ 7, 1995 ರಂದು ಹಾರಿ ಬಿಡಲಾಯಿತು. ಇನ್ಸಾಟ್-2D ಇವೆಲ್ಲಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾದ ಉಪಗ್ರಹ. ಇದು ದೂರದರ್ಶನ, ಟೆಲಿಫೋನ್ ಇತ್ಯಾದಿ ಸೇವೆಗಳನ್ನು ಉತ್ತಮಪಡಿಸಲು ದೊಡ್ಡ ನೆರವು ನೀಡುವ ನಿರೀಕ್ಷೆಯಿದೆ. ಈ ಸರಣಿಯ ಕೊನೆಯ ಉಪಗ್ರಹವನ್ನು ಮುಂದಿನ ವರ್ಷ ಹಾರಿಬಿಡುವ ಯೋಜನೆಯಿದೆ. ಇದರೊಂದಿಗೆ 2ನೇ ಪೀಳಿಗೆಯ ಉಪಗ್ರಹಗಳ ಸರಣಿ ಮುಕ್ತಾಯವಾಗುತ್ತದೆ.

ನಂತರ ಮೂರನೇ ಪೀಳಿಗೆಯ ಉಪಗ್ರಹಗಳನ್ನು ಭಾರತದಿಂದಲೇ ಹಾರಿ ಬಿಡುವ ಯೋಜನೆಯನ್ನು ಇಸ್ರೋ ತಯಾರಿಸಿದೆ.

ಬಿಇಎಲ್ ಮೇಲೆ ಅಮೆರಿಕಾದ ಆಮದು ನಿರ್ಬಂಧದ ವಿರುದ್ಧ ಪ್ರತೀಕಾರ ಕ್ರಮ ಕೈಗೊಳ್ಳಿ

ಸರಕಾರಕ್ಕೆ ಸಿಐಟಿಯು ಆಗ್ರಹ

ಭಾರತದ ಒಂದು ಪ್ರಧಾನ ಸಾರ್ವಜನಿಕ ವಲಯದ ಉದ್ದಿಮೆ ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ.ಇ.ಎಲ್) ಅಮೆರಿಕಾದಲ್ಲಿ ಉತ್ಪಾದಿತ ಇಲೆಕ್ಟ್ರಾನಿಕ್ ಸಾಮಾಗ್ರಿಗಳನ್ನು ಆಮದು ಮಾಡಿಕೊಳ್ಳಲು ಅಮೆರಿಕನ್ ಸರಕಾರ ಹಾಕಿರುವ ನಿರ್ಬಂಧಗಳನ್ನು ವಿರೋಧಿಸಿ ಪ್ರತೀಕಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಐಟಿಯು ಭಾರತ ಸರಕಾರವನ್ನು ಆಗ್ರಹಿಸಿದೆ. ಬಿ.ಇ.ಎಲ್ ಮುಖ್ಯವಾಗಿ ಬಾಹ್ಯಾಕಾಶ ಸಂಶೋಧನೆ ಮತ್ತಿತರ ಸಂಶೋಧನಾ ಅಗತ್ಯಗಳಿಗೆ ಬೇಕಾದ ಇಲೆಕ್ಟ್ರಾನಿಕ್ ಉಪಕರಣಗಳನ್ನು ಉತ್ಪಾದಿಸುತ್ತದೆ. ಈಗ ಹೆಚ್.ಎ.ಎಲ್. ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಮೇಲೂ ಇಂತಹ ನಿರ್ಬಂಧ ಹಾಕುವ ಬೆದರಿಕೆಯನ್ನೂ ಅಮೆರಿಕ ಒಡ್ಡಿದೆ.

ಬಿ.ಇ.ಎಲ್. ಇಂತಹ ಖರೀದಿಗಳನ್ನು ಕ್ಷಿಪಣಿ ಉತ್ಪಾದನ ಹಾಗೂ ಸಮೂಹನಾಶದ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಬಳಸಿಕೊಳ್ಳುತ್ತಿದೆ ಎಂಬ ಆಧಾರಹೀನ ಕಾರಣವೊಡ್ಡಿ ಅಮೆರಿಕನ್ ಸರಕಾರ ವಾಣಿಜ್ಯ ಇಲಾಖೆ ಈ ನಿರ್ಬಂಧ ಹಾಕಿದೆ ಎಂದು ಪ್ರಧಾನಮಂತ್ರಿ ಐ.ಕೆ.ಗುಜ್ರಾಲ್‌ರವರಿಗೆ ಬರೆದ ಪತ್ರದಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಹೇಳಿದ್ದಾರೆ.

"ಭಾರತದ ವಿರುದ್ಧ ಅಮೆರಿಕನ್ ಆಳರಸರ ಈ ದುರಹಂಕಾರದ ಬಗ್ಗೆ ನಾವು ತೀವ್ರ ಆತಂಕ ವ್ಯಕ್ತಪಡಿಸುತ್ತೇವೆ. ಭಾರತದ ಮಣ್ಣಲ್ಲಿ ಎಲ್ಲಾ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳ ಮೇಲೆ ಅಡ್ಡಿ-ಆತಂಕ ಒಡ್ಡುವುದೇ ಹಾಗೂ ನಿಬಂಧನೆ ಹಾಕುವುದೇ ಇದರ ಮೂಲಭೂತ ಉದ್ದೇಶ. ಅಲ್ಲದೆ ಇದು ಭಾರತದ ಸಾರ್ವಭೌಮ ಅಧಿಕಾರದಲ್ಲಿ ಹಸ್ತಕ್ಷೇಪವಲ್ಲದೆ ಮತ್ತೇನೂ ಅಲ್ಲ" ಎಂದು ಡಾ|| ಪಂಧೆ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿ ಪ್ರತಿಕಾರ ಕ್ರಮಗಳನ್ನು ಕೈಗೊಂಡು ಅಮೆರಿಕಾ ತನ್ನ ಈ ನಿರ್ಧಾರವನ್ನು ಬದಲಿಸುವಂತೆ ಮಾಡಬೇಕು ಎಂದು ಸಿಐಟಿಯು ಸರಕಾರವನ್ನು ಒತ್ತಾಯಿಸಿದೆ.

ಬಿಜೆಪಿ ಕುತ್ಸಿತತನ - ಇತ್ತೀಚಿನ ಉದಾಹರಣೆ

ಭಾಜಪದವರು ಸುಳ್ಳು ಹರಡುವುದರಲ್ಲಿ, ಕುಯುಕ್ತಿಗಳಲ್ಲಿ ನಿಸ್ಸೀಮರು ಎಂಬುದು ಹೊಸ ಸತ್ಯವೇನೂ ಅಲ್ಲ. ಹಲವು ಬಾರಿ ಅದು ಹಲವರ ಗಮನಕ್ಕೆ ಬಂದಿದೆ. ಬಾಬ್ರಿ ಮಸೀದಿ ಧ್ವಂಸ ಕಾಲದಲ್ಲಿ ಅದು ಎಲ್ಲರ ಗಮನಕ್ಕೆ ಬಂದಿದೆ. ಒಂದೆಡೆ ಆ ಪಕ್ಷದ ಹಿರಿಯ ಮುಖಂಡರು ಆ ಮಸೀದಿಯನ್ನು ಮುಟ್ಟುವುದಿಲ್ಲ ಎಂದು ದೇಶದ ಸರ್ವೋಚ್ಚ ನ್ಯಾಯ ಪೀಠವೂ ಸೇರಿದಂತೆ ಎಲ್ಲರಿಗೂ ಭರವಸೆ ನೀಡುತ್ತಲೇ ಇದ್ದಂತೆಯೇ ಇನ್ನೊಂದೆಡೆ ಆ ಪಕ್ಷದ ಕಾರ್ಯಕರ್ತರು ಅದನ್ನು ಧ್ವಂಸ ಮಾಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರವನ್ನು ವಹಿಸದ ಹಿಂದೂ ಬಲಪಂಥೀಯ ಶಕ್ತಿಗಳು ಹಾಗೂ ಅವರ ಪ್ರತಿನಿಧಿಯಾದ ಈ ಪಕ್ಷ ತಾನೇ ಅತ್ಯಂತ ಕಟ್ಟಾ 'ರಾಷ್ಟ್ರೀಯವಾದಿ' ಪಕ್ಷ ಎಂಬ ಡಂಗುರ ಹಾಕುತ್ತಿದೆ. ಮತ್ತೊಂದೆಡೆ ಇದೇ ದೇಶದ ಅಲ್ಪಸಂಖ್ಯಾತರಲ್ಲಿ ಭಯ ಹುಟ್ಟಿಸಿ ಅದನ್ನು 'ನೈಜ ಜಾತ್ಯಾತೀತತೆ' ಎಂದು ಸಾರುತ್ತಿದೆ.

ಬಹುಶಃ ಸುಳ್ಳು ಹೇಳುವುದು ಬಿಜೆಪಿಗೆ ನೀರು ಕುಡಿದಂತೆ. ಅದರ ಹುಟ್ಟುಗುಣವೇ ಇರಬೇಕು. ಆ ಪಕ್ಷದ ಮುಖಂಡರು ಎಲ್ಲಾ ತರದ ಊಹಾಪೋಹಗಳನ್ನು ಹರಿಯ ಬಿಡುತ್ತಾರೆ. ಅವಕ್ಕೆ ಬಾಯಿ ಬಿಟ್ಟು ಕೂತಿರುವ ಕೆಲವು ಪತ್ರಿಕೆಗಳು ಈ ಕಟ್ಟುಕತೆಗಳನ್ನು ಪಸರಿಸುತ್ತವೆ. ಇಂತಹ ಮಿಥ್ಯಾಪವಾದದ ಇತ್ತೀಚಿನ ಉದಾಹರಣೆ ಇಲ್ಲಿದೆ.


ಕೇರಳದಲ್ಲಿ ಅಡ್ವಾಣಿಯವರ ರಥ ಯಾತ್ರೆಯ ಮೇಲೆ ಸಿಪಿಐ(ಎಂ) ಕಾರ್ಯಕರ್ತರು ಹಲ್ಲೆ ಮಾಡಿದರು ಎಂಬುದು ಒಬ್ಬ ಹಿರಿಯ ಬಿಜೆಪಿ ಮುಖಂಡ ಮೇ 24 ರಂದು ಪತ್ರಿಕಾ ಸಮ್ಮೇಳನದಲ್ಲಿ ಸಾರಿದರು. ನಾಲ್ಕು ದಿನಗಳ ನಂತರ ಪಕ್ಷದ ಇನ್ನೊಬ್ಬ ಮುಖಂಡ ಅಂತಹದೇನೂ ನಡೆಯಲೇ ಇಲ್ಲ ಎಂದರು.

ಅಡ್ವಾಣಿಯವರ 50ನೇ ವಾರ್ಷಿಕೋತ್ಸವದ ರಥಯಾತ್ರೆಗೆ ಇದುವರೆಗೆ ದೊರೆತ ಸ್ಪಂದನ ಶೋಚನೀಯ. ಪತ್ರಿಕೆಗಳನ್ನು ಓದುವ ಯಾರಿಗಾದರೂ ಇದು ಸ್ಪಷ್ಟ. ಏಕೆಂದರೆ ಬಿಜೆಪಿಯನ್ನು ಹಾಡಿ ಹೊಗಳುವ ಪತ್ರಿಕೆಗಳಿಗೂ ಈ ಬಗ್ಗೆ ಬರೆಯಲು ಏನೂ ಸಿಕ್ಕಿಲ್ಲ. ಆದರೆ ಹೇಗಾದರೂ ಪ್ರಚಾರ ಗಿಟ್ಟಿಸಬೇಕೆಂದಿರುವ ಬಿಜೆಪಿ ಮುಖಂಡರು ಸಿಪಿಐ(ಎಂ) ವಿರುದ್ಧ ಸುಳ್ಳು ಆಪಾದನೆ ಹೊರಿಸಲೂ ಹೇಸಲಿಲ್ಲ. ಮೇ 24 ರಂದು ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷ ಹವಾಲಾಕಾಂಡದ ಹಿನ್ನೆಲೆಯಲ್ಲಿ ದಿಲ್ಲಿ ಮುಖ್ಯಮಂತ್ರಿ ಪದವಿ ಕಳಕೊಂಡು 'ಹವಾಲ ಮುಕ್ತ' ಎನಿಸಿಕೊಂಡ ಮೇಲೆ ಆ ಪದವಿಯನ್ನು ವಾಪಸು ಪಡೆಯಲು ಜಗ್ಗಾಟ ನಡೆಸಿರುವ ಮದನ್‌ಲಾಲ್ ಖುರಾನಾ ಒಂದು ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಕೇರಳದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಅಡ್ವಾಣಿ ರಥ ಯಾತ್ರೆಯ ಮೇಲೆ ಧಾಳಿ ಮಾಡಿದರು ಎಂದು ಆಪಾದಿಸಿದರು. ಕೇರಳದ ಎಲ್.ಡಿ.ಎಫ್. ಸರಕಾರ ಕಲ್ಲಿಕೋಟೆಯಲ್ಲಿ ಸರಕಾರೀ ಅತಿಥಿ ಗೃಹದಲ್ಲಿ ಉಳಿಯಲು ಬಿಡದೆ ಬಹಳಷ್ಟು ಅನಾನುಕೂಲ ಉಂಟುಮಾಡಿದರು ಎಂದೂ ಆಪಾದಿಸಿದರು. ಕಮ್ಯುನಿಸ್ಟರು ರಾಷ್ಟ್ರವಿರೋಧಿಗಳೆಂದೆಲ್ಲಾ ಒದರಾಡಿ ಸಿಪಿಐ(ಎಂ) ಇಂತಹ ಹಲ್ಲೆಗಳನ್ನು ನಿಲ್ಲಿಸಬೇಕೆಂದು 'ಆಗ್ರಹಿಸಿ'ದರು.

ಆದರೆ ನಾಲ್ಕು ದಿನಗಳ ನಂತರ ಬಿಜೆಪಿಯ ಇನ್ನೊಬ್ಬ ರಾಷ್ಟ್ರೀಯ ಮುಖಂಡ ರಾಜಗೋಪಾಲ್ ಇಂತಹ ಹಲ್ಲೆ ನಡದೇ ಇಲ್ಲ ಎಂದು ಒಪ್ಪಿಕೊಂಡರು. "ಕೇರಳದಲ್ಲಿ ಎಲ್ಲಿಯೂ ಅಡ್ವಾಣಿಯವರ ನೇತೃತ್ವದ ಬಿಜೆಪಿ ಜಾಥಾದ ಮೇಲೆ ಹಲ್ಲೆ ನಡೆದಿಲ್ಲ" ಎಂದು ಅವರು ತಪ್ಪಿನಿಂದ ಹಾಗೂ ತಪ್ಪುಭಾವನೆಯಿಂದಾಗಿ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟವಾಗಿದೆ ಎಂದೂ ಹೇಳಿದರು. ತಮ್ಮ ಅಧ್ಯಕ್ಷರಿಗೆ ಕಲ್ಲಿಕೋಟೆಯಲ್ಲಿ ಅನಾನುಕೂಲವಾಯಿತು ಎಂಬುದನ್ನೂ ಅವರು ನಿರಾಕರಿಸಿದರು. ಅಟಲ್ ಬಿಹಾರಿ ವಾಜಪೇಯಿಯವರ ಪತ್ರಿಕಾ ಕಾರ್ಯ ಕ್ರಮವೊಂದರಲ್ಲಿ ರಾಜಗೋಪಾಲ್ ಈ ಸ್ಪಷ್ಟೀಕರಣ ನೀಡಿದರು.

ಆದರೆ ವಾಜಪೇಯಿಯವರಾಗಲೀ, ರಾಜಗೋಪಾಲರಾಗಲೀ ಈ "ತಪ್ಪು ಅಥವಾ ತಪ್ಪು ಭಾವನೆ"ಗೆ ಕಾರಣವೇನೆಂದು ಹೇಳಲಿಲ್ಲ. ಅಡ್ವಾಣಿಯವರಿಗೆ ಸ್ವಲ್ಪ ಪ್ರಚಾರ ಕೊಡಿಸುವ ತಂತ್ರವಲ್ಲದೆ ಬೇರೇನೂ ಇದರ ಹಿಂದಿರಲಿಕ್ಕೆ ಸಾಧ್ಯವಿಲ್ಲ. ಬಿಜೆಪಿ ಮುಖಂಡರು ಸಾರ್ವಜನಿಕರಿಗೆ ಈ ಬಗ್ಗೆ ಕಾರಣ ಕೊಡಬೇಕಷ್ಟೇ ಅಲ್ಲ ದೇಶಾದ್ಯಂತ ಸಿಪಿಐ(ಎಂ) ಮೇಲೆ ಈ ಕುತ್ಸಿತ ಆರೋಪ ಹೊರಿಸಿದ್ದಕ್ಕೆ ಕ್ಷಮೆಯನ್ನು ಕೇಳಬೇಕಾಗಿದೆ.

ಎಕಾನಮಿಕ್ ಟೈಮ್ಸ್‌ನಲ್ಲಿ ಮಾರಿಯೋರವರ ವ್ಯಂಗ್ಯ



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹಂಸ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು